# 01-02-2021

## ಮಯನ್ಮಾರ್ ದೇಶದಲ್ಲಿ ಒಂದು ವರ್ಷ ರಾಜ್ಯ ತುರ್ತು ಪರಿಸ್ಥಿತಿ ಘೋಷಣೆ



* ಮಯನ್ಮಾರ್ ದೇಶದಲ್ಲಿ ಒಂದು ವರ್ಷ ರಾಜ್ಯ ತುರ್ತು ಪರಿಸ್ಥಿತಿ ಘೋಷಣೆ ಮಾಡಲಾಗಿದೆ. ಪ್ರಸ್ತುತ ಇಲ್ಲಿನ ಆಡಳಿತ ಪಕ್ಷದ ನಾಯಕಿ ಅಂಗ್ ಸಾನ್ ಸೂಕಿ ಮತ್ತು ರಾಷ್ಟ್ರದ ಅಧ್ಯಕ್ಷರನ್ನು ಮಯನ್ಮಾರ್ ದೇಶದ ಸೇನಾಪಡೆ ಬಂಧಿಸಿದೆ ಎಂದು ಸೂಕಿ ಪಕ್ಷದ ವಕ್ತಾರ ಮಾಹಿತಿಯನ್ನು ನೀಡಿದ್ದಾರೆ.
* ನ್ಯಾಷನಲ್ ಲೀಗ್ ಫಾರ್ ಡೆಮಾಕ್ರಸಿ ಪಕ್ಷವು ಇತ್ತೀಚೆಗೆ ಮಯನ್ಮಾರ್ ದೇಶದಲ್ಲಿ ನಡೆದ ಚುನಾವಣೆಯಲ್ಲಿ ಸುಲಭವಾಗಿ ಜಯಗಳಿಸಿತ್ತು ಆದರೆ ಇಲ್ಲಿನ ಚುನಾವಣೆಯಲ್ಲಿ ಅಕ್ರಮ ನಡೆದಿದೆ ಎಂದು ಮಯನ್ಮಾರ್ ದೇಶದ ಸೇನೆ ಕಳೆದ ವಾರ ಆರೋಪ ಮಾಡಿ ಅಲ್ಲಿನ ಡೆಮಾಕ್ರಸಿ ಪಕ್ಷದ ಅಂಗಸಾನ್ ಸೂಕಿ ಮತ್ತು ಅಧ್ಯಕ್ಷ ವಿನ್ ಮೈಂಟ್ ಅವರನ್ನು ರಾಜಧಾನಿ ನೇಪೈಡಾವ್‌ನಲ್ಲಿ ಬಂಧಿಸಲಾಗಿದೆ ಎಂದು ಎನ್‌ಎಲ್‌ಡಿ ಪಕ್ಷದ ವಕ್ತಾರ ಮೈಯೋ ನ್ಯೂಂಟ್ ಅವರು ಮಾಹಿತಿಯನ್ನು ನೀಡಿದ್ದಾರೆ. ಇದೆ ಕಾರಣಕ್ಕಾಗಿ ಮಯನ್ಮಾರ್ ದೇಶದಲ್ಲಿ ಒಂದು ವರ್ಷ ರಾಜ್ಯ ತುರ್ತು ಪರಿಸ್ಥಿತಿ ಘೋಷಣೆ ಮಾಡಲಾಗಿದೆ ಎಂದು ಸೇನೆ ತಿಳಿಸಿದೆ.

## ಮಾಜಿ ಪ್ರಧಾನಿ ಇಂದಿರಾ ಗಾಂಧಿ ನಂತರ ಬಜೆಟ್ ಮಂಡಿಸಿದ ಮತ್ತೊಬ್ಬ ಮಹಿಳೆ



* ಭಾರತ ದೇಶದ ಬಜೆಟ್ ಮಂಡನೆ ಮಾಡುತ್ತಿರುವ ಎರಡನೇ ಮಹಿಳೆ ಎಂಬ ಹೆಗ್ಗಳಿಕೆಗೆ ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ರವರು ಪಾತ್ರರಾಗಿದ್ದಾರೆ. ಪ್ರಸ್ತುತ ನಿರ್ಮಲಾ ಸೀತಾರಾಮನ್ ಅವರು ಆಡಳಿದಲ್ಲಿರುವ ಪಕ್ಷದ ಕೇಂದ್ರ ಹಣಕಾಸು ಸಚಿವೆಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.
* ಈ ಮೊದಲು ಅಂದರೆ ಸರಿ ಸುಮಾರು 51 ವರ್ಷಗಳ ಹಿಂದೆ ಮಾಜಿ ಪ್ರಧಾನಿಯಾಗಿ ಸೇವೆಸಲ್ಲಿಸಿದ ದಿವಂಗತ ಇಂದಿರಾ ಗಾಂಧಿಯವರು 1970 ಫೆಬ್ರವರಿ 28ರಂದು ಪ್ರಧಾನ ಮಂತ್ರಿ ಹಾಗೂ ವಿತ್ತ ಸಚಿವೆಯಾಗಿದ್ದ ಸಂದರ್ಭದಲ್ಲಿ ಕೇಂದ್ರ ಬಜೆಟ್ ಮಂಡನೆಯನ್ನು ಮಾಡಿದ್ದರು.

## 'ವಿ' ಆಕಾರದ ಬೆಳವಣಿಗೆಯತ್ತ ಭಾರತ ದೇಶ



* 'ವಿ' ಎನ್ನುವದು ಒಂದು ದೇಶದ ಆರ್ಥಿಕ ಆರೋಗ್ಯವನ್ನು ಅಳೆಯುವ ಮಾಪನವಾಗಿದೆ, 'ವಿ' ಆಕಾರದ ಬೆಳವಣಿಗೆ ದಾರಿಯಲ್ಲಿ ಭಾರತ ದೇಶದ ಆರ್ಥಿಕ ಸ್ಥಿತಿ ಕ್ರಮೇಣವಾಗಿ ಬಲಿಷ್ಠವಾಗಿ ಸಾಗುತ್ತಿದೆ ಎಂದು ಆರ್ಥಿಕ ಸಮೀಕ್ಷೆಯು ಪ್ರತಿಪಾದಿಸುತ್ತಿದೆ.
* 'ವಿ' ಆಕಾರದ ಬೆಳವಣಿಗೆ ಎಂದರೆ ದೇಶವು ಆರ್ಥಿಕ ಹಿಂಜರಿತದಿಂದಾಗಿ ಕೆಳಕ್ಕೆ ಕುಸಿದು, ಅನಂತರ ಅಷ್ಟೇ ವೇಗವಾಗಿ ಹಾಗೂ ಬಲಿಷ್ಠ ಶಕ್ತಿಯಾಗಿ ಬೆಳೆದು 'ಗ್ರಾಫ್ ವಿ' ಆಕಾರದಲ್ಲಿ ಕಾಣಿಸುವದು, ಉದ್ಯೋಗ, ಜಿಡಿಪಿ, ಕೈಗಾರಿಕ ಉತ್ಪಾದನ ಸೂಚ್ಯಂಕಗಳಂಥ ಅಂಶಗಳನ್ನು ಗಮನಿಸಿ ಅರ್ಥಶಾಸ್ತ್ರಜ್ಞರು ಈ ಗ್ರಾಫ್ ಸಿದ್ಧಪಡಿಸುತ್ತಾರೆ. ಇನ್ನು 'ವಿ' ಆಕಾರದ ಬೆಳವಣಿಗೆಯನ್ನು ಉತ್ತಮ ಬೆಳವಣಿಗೆಯೆಂದು ಪರಿಗಣಿಸಲಾಗುತ್ತದೆ ಎಂದು ಅರ್ಥಶಾಸ್ತ್ರಜ್ಞರು ತಿಳಿಸಿದ್ದಾರೆ.

## ವರಕವಿ, ದ. ರಾ. ಬೇಂದ್ರೆ ಅವರ 125ನೇ ಜನ್ಮದಿನ



* ದತ್ತಾತ್ರೇಯ ರಾಮಚಂದ್ರ ಬೇಂದ್ರೆ ಯವರು ಕನ್ನಡ ಸಾಹಿತ್ಯದ ಕವಿ ಅಷ್ಟೇ ಅಲ್ಲದೆ, ಭಾಷಾ ವೈವಿಧ್ಯದ ವಿಭಿನ್ನ ಕಾವ್ಯದ ಮೂಲಕ ಸಾಹಿತ್ಯ ಲೋಕದಲ್ಲಿ ವಿಶೇಷ ಸ್ಥಾನ ಮಾನ ಪಡೆದ ಕವಿಯಾಗಿದ್ದು, ಇವರಿಗೆ ವರಕವಿ ಎಂದೇ ಕರೆಯಲಾಗುತ್ತದೆ.
* ದ.ರಾ.ಬೇಂದ್ರೆ ಅವರು 1896 ಜನೇವರಿ 31ರಂದು ಧಾರವಾಡದಲ್ಲಿ ಜನಿಸಿದರು, ಇವರ ತಂದೆ ರಾಮಚಂದ್ರ ಬೇಂದ್ರೆ, ತಾಯಿ ಅಂಬವ್ವ, ಇವರ ಮಾತೃಭಾಷೆ ಮರಾಠಿಯಾಗಿತ್ತು.
* ದ.ರಾ.ಬೇಂದ್ರೆ ಅವರು 1943ರಲ್ಲಿ ಶಿವಮೊಗ್ಗದಲ್ಲಿ ನಡೆದ 27ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. 1959ರಲ್ಲಿ 'ಅರಳು ಮರಳು' ಕವನ

ಸಂಗ್ರಹಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, 1974ರಲ್ಲಿ 'ನಾಕುತಂತಿ' ಕವನ ಸಂಗ್ರಹಕ್ಕೆ ಜ್ಞಾನಪೀಠ ಪ್ರಶಸ್ತಿಯನ್ನು ಪಡೆದುಕೊಂಡಿದ್ದರು, ಹೀಗೆ ಹಲವು ಕನ್ನಡ ಸಾಹಿತ್ಯ ಕೃತಿಗಳನ್ನು ರಚಿಸಿ ಜನಪ್ರಿಯ ಕವಿಯಾಗಿದ್ದರು.

## ಬ್ರಿಟನ್'ನ ವಿಶೇಷ ವೀಸಾ ಯೋಜನೆಗೆ ಪಾತ್ರರಾದ ಹಾಂಗ್‌ಕಾಂಗ್ ನಿವಾಸಿಗಳು




* ಇತ್ತೀಚಿಗೆ ಬ್ರಿಟನ್ ಸರ್ಕಾರವು ಹಾಂಗ್‌ಕಾಂಗ್ ನಿವಾಸಿಗಳಿಗೆ ಹೊಸ ವೀಸಾ ಯೋಜನೆಯನ್ನು ಜಾರಿಗೆ ತಂದಿದೆ, ಈ ಯೋಜನೆಯಿಂದ ಹಾಂಗ್‌ಕಾಂಗ್ ನಿವಾಸಿಗಳು ವೀಸಾ ಪಡೆದು, ಬ್ರಿಟನ್ ನಾಗರಿಕತ್ವವನ್ನು ಪಡೆಯಲು ಅರ್ಹರಾಗಿದ್ದಾರೆ ಎಂದು ಬ್ರಿಟನ್ ಸರ್ಕಾರ ತಿಳಿಸಿದೆ.
* ಈ ಬ್ರಿಟನ್ ವೀಸಾ ಯೋಜನೆಯಿಂದಾಗಿ ಹಾಂಗ್‌ಕಾಂಗ್'ನ 3 ಲಕ್ಷಕ್ಕೂ ಅಧಿಕ ಪ್ರಜೆಗಳಿಗೆ ಅನುಕೂಲವಾಗಲಿದೆ ಎಂದು ಬ್ರಿಟನ್ ಸರ್ಕಾರ ಅಭಿಪ್ರಾಯ ಪಟ್ಟಿದೆ.
* ಬ್ರಿಟನ್ ಸರ್ಕಾರ ಈ ಮೊದಲು ನೀಡಲಾಗಿದ್ದ 'ಬ್ರಿಟಿಷ್ ನ್ಯಾಷನಲ್ ಓವರ್‌ಸೀಸ್' ವೀಸಾಗಳಿಗೆ ಜನವರಿ 31 ರಿಂದ ಮಾನ್ಯತೆ ಇರುವುದಿಲ್ಲ ಎಂಬ ಮಾಹಿತಿಯನ್ನು ಚೀನಾ ಮತ್ತು ಹಾಂಗ್‌ಕಾಂಗ್ ಸರ್ಕಾರಗಳು ತಿಳಿಸಿದವು, ಇದೆ ಕಾರಣಕ್ಕಾಗಿ ಬ್ರಿಟನ್ ಸರ್ಕಾರ ಹೊಸ ವೀಸಾ ಯೋಜನೆಯನ್ನು ಜಾರಿಗೆ ಗೊಳಿಸಿದೆ.

## ರಾಜ್ಯ ಸರ್ಕಾರದ ಮುಜರಾಯಿ ಇಲಾಖೆಯಿಂದ ಸಪ್ತಪದಿ ಯೋಜನೆ




* ಕರ್ನಾಟಕ ರಾಜ್ಯ ಸರ್ಕಾರದ ಮುಜರಾಯಿ ಇಲಾಖೆಯಿಂದ 'ಸಪ್ತಪದಿ ಯೋಜನೆ'ಯನ್ನು ಜಾರಿಗೆ ತರಲಾಗಿದೆ, ಹಾಗೂ ಪ್ರತಿ ತಿಂಗಳು ವಿವಾಹ ನಡೆಸಲಾಗುವದು ಎಂದು ರಾಜ್ಯ ಸರ್ಕಾರದ ಮುಜರಾಯಿ ಇಲಾಖೆ ತಿಳಿಸಿದೆ.
* 2021ರ ಫೆಬ್ರುವರಿ 17 ಮತ್ತು 25 ರಂದು ಸಾಮೂಹಿಕ ವಿವಾಹ ನಡೆಯಲಿವೆ ಎಂದು ತಿಳಿಸಲಾಗಿದೆ, ಈ ಸಾಮೂಹಿಕ ವಿವಾಹ ಯೋಜನೆಯಲ್ಲಿ ಮದುವೆಯಾಗಲು ನೋಂದಣಿ ಮಾಡಿಸಿಕೊಂಡ ನವ ದಂಪತಿಗಳಿಗೆ 55 ಸಾವಿರ ರೂ.ಗಳನ್ನೂ ಮದುವೆಯ ದಿನದಂದು ವಧು ವರರ ಖಾತೆಗೆ ಹಣ ಜಮಾ ಮಾಡಲಾಗುತ್ತದೆ ಎಂದು ರಾಜ್ಯ ಸರ್ಕಾರದ ಮುಜರಾಯಿ ಇಲಾಖೆಯಿಂದ ಮಾಹಿತಿ ತಿಳಿದು ಬಂದಿದೆ.

## ಮಧ್ಯಪ್ರದೇಶದಲ್ಲಿ ಪೊಲೀಸರ ಹೋರಾಟದ ಚಿತ್ರಣದ ವಸ್ತುಸಂಗ್ರಾಲಯ



* ಮಧ್ಯಪ್ರದೇಶದ ಚಂಬಲ್ ಪ್ರದೇಶದ ದರೋಡೆಕೋರರ ಜೀವನ ಕಥೆಗಳನ್ನು ಮತ್ತು ಡಕಾಯಿತಿಗಳನ್ನು ನಿಯಂತ್ರಿಸಲು ಪೊಲೀಸರು ಕೈಗೊಂಡ ಹೋರಾಟದ ಕ್ರಮಗಳನ್ನು ಜನರಿಗೆ ತಿಳಿಸಲು ಶೀಘ್ರವೇ ವಸ್ತುಸಂಗ್ರಾಲಯವನ್ನು ಜಾರಿಗೆ ತರಲಾಗುತ್ತಿದೆ ಎಂದು ಮಧ್ಯಪ್ರದೇಶದ ಭೀಂಡ್ ಪೊಲೀಸ್ ಅಧಿಕಾರಿ ಮನೋಜ್ ಕುಮಾರ್ ಸಿಂಗ್ ಅವರು ಮಾಹಿತಿ ನೀಡಿದ್ದಾರೆ.
* ಈ ವಸ್ತುಸಂಗ್ರಾಲಯದಲ್ಲಿ ದರೋಡೆಕೋರರ ವಿರುದ್ಧದ ಹೋರಾಟದಲ್ಲಿ ತಮ್ಮ ಪ್ರಾಣ ಅರ್ಪಣೆ ಮಾಡಿದ 40 ಕ್ಕೂ ಹೆಚ್ಚು ಪೊಲೀಸರು ಹಾಗೂ ಅಧಿಕಾರಿಗಳ ಸಾಹಸವನ್ನು ಜನರಿಗೆ ತಿಳಿಸಲು ಈ ವಸ್ತುಸಂಗ್ರಾಲಯವನ್ನು ಜಾರಿಗೆ ತರಲಾಗುತ್ತಿದೆ ಎಂದು ಚಂಬಲ್‌ನ ವರಿಷ್ಠ ಪೊಲೀಸ್ ಅಧಿಕಾರಿ ರಾಜೇಶ್ ಹಿಂಗಂಕರ್ ಮಾಹಿತಿಯನ್ನು ನೀಡಿದ್ದಾರೆ.

# 02-02-2021

## ಯಕ್ಷಗಾನ ಕಲಾವಿದ ವಂಡ್ಸೆ ನಾರಾಯಣ ಗಾಣಿಗ ನಿಧನ



* ಯಕ್ಷಗಾನ ಕಲಾವಿದ ವಂಡ್ಸೆ ನಾರಾಯಣ ಗಾಣಿಗ ರವರು ತಮ್ಮ 84ನೇ ವಯಸ್ಸಿನಲ್ಲಿ ವಿಧಿವಶರಾದರು.
* ವಂಡ್ಸೆ ನಾರಾಯಣ ಅವರಿಗೆ 2014 ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡಲಾಗಿತ್ತು ಹಾಗೂ ಇವರು ಸರಿ ಸುಮಾರು 5 ದಶಕಗಳ ಕಾಲ ಯಕ್ಷಗಾನ ರಂಗದಲ್ಲಿ ತಮ್ಮ ಅನುಪಮ ಸೇವೆ ಸಲ್ಲಿಸಿದ್ದಾರೆ. ಇವರು ಬಡಗು ಹಾಗೂ ತೆಂಕುತಿಟ್ಟಿನ ಪ್ರಸಿದ್ಧ ಕಲಾವಿದರಾಗಿ ಕಾರ್ಯ ನಿರ್ವಹಿಸಿದ್ದರು.

## ಬೆಂಗಳೂರು ಮೆಟ್ರೋ 2ಎ ಮತ್ತು 2ಬಿ ಯೋಜನೆಗೆ ಕೇಂದ್ರದ ಬಜೆಟ್ ಒಪ್ಪಿಗೆ



* ಇತ್ತೀಚಿಗೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು 2021ರ ಬಜೆಟ್'ಅನ್ನು ಮಂಡನೆ ಮಾಡಿದ್ದು, ಈ ವರ್ಷದ ಬಜೆಟ್'ನಲ್ಲಿ ಬೆಂಗಳೂರು ನಗರಕ್ಕಾಗಿ 14,788 ಕೋಟಿ ರೂ. ಅನುದಾನವನ್ನು ಘೋಷಣೆ ಮಾಡಿದ್ದಾರೆ.
* ಕೇಂದ್ರ ಹಣಕಾಸು ಸಚಿವೆಯಾಗಿರುವ ನಿರ್ಮಲಾ ಸೀತಾರಾಮನ್'ರವರು ಬೆಂಗಳೂರು ಮೆಟ್ರೋ ಕಾಮಗಾರಿಯಾಗಿರುವ 2ಎ ಮತ್ತು 2ಬಿ ಯೋಜನೆ ವಿಸ್ತರಣೆಗೆ ಬಜೆಟ್‌ನಲ್ಲಿ ಒಟ್ಟು 58.19 ಕಿ.ಮೀ ಉದ್ದದ ಕಾಮಗಾರಿಗಳಿಗಾಗಿ ಒಟ್ಟು 14,788 ಕೋಟಿ ರೂ. ಅನುದಾನವನ್ನು ಘೋಷಣೆ ಮಾಡಿದ್ದಾರೆ.

## ಸೇನಾಪಡೆಯ ಉಪ ವರಿಷ್ಠರಾಗಿ ಪ್ರಸಾದ್ ಮೊಹಾಂತಿಗೆ ಅಧಿಕಾರ ಸ್ವೀಕಾರ



* ಭಾರತೀಯ ಸೇನಾ ಪಡೆಯ ಉಪ ವರಿಷ್ಠರಾಗಿ ಲೆಫ್ಟಿನೆಂಟ್ ಜನರಲ್ ಚಾಂಡಿ ಪ್ರಸಾದ್ ಮೊಹಾಂತಿ ಅವರು ಅಧಿಕಾರ ವಹಿಸಿಕೊಂಡರು, ಜೊತೆಗೆ ಲೆಫ್ಟಿನೆಂಟ್ ಎಸ್.ಕೆ. ಸೈನಿ ಅವರ ಭಾರತೀಯ ಸೇನಾ ಉತ್ತರಾಧಿಕಾರಿಯಾಗಿ ಅಧಿಕಾರ ಸ್ವೀಕರಿಸಿದರು.
* ಲೆಫ್ಟಿನೆಂಟ್ ಜನರಲ್ ಚಾಂಡಿ ಪ್ರಸಾದ್ ಮೊಹಾಂತಿಯವರು ಭಾರತೀಯ ಸೇನೆ ಕಾಲೇಜು ಹಳೆ ವಿದ್ಯಾರ್ಥಿಯಾಗಿದ್ದಾರೆ, ಈ ಮೊದಲು 1982 ಜೂನ್ 12ರಂದು ರಜಪೂತ್ ರೆಜಿಮೆಂಟ್‌ಗೆ ಕಾರ್ಯ ನಿರ್ವಹಿಸಲು ಸೇರ್ಪಡೆಯಾಗಿದ್ದರು.

## 2021 22ರ ಬಜೆಟ್ ವಿವರ :




2021 22ರ ಬಜೆಟ್ ಮಂಡನೆ ವಿವಿಧ ಕ್ಷೇತ್ರಗಳಿಗೆ ಇಂತಿದೆ :
* ಪ್ರಸ್ತುತ 2021 22ರ ಬಜೆಟ್ ವಿದ್ಯುತ್ ವಿತರಣಾ ಕಂಪನಿಗಳ ವಲಯ ಯೋಜನೆಗಳಿಗಾಗಿ 3,05,984 ಕೋಟಿ ರೂ. ಗಳನ್ನು
* ರಕ್ಷಣಾ ಕ್ಷೇತ್ರಕ್ಕಾಗಿ 4.78 ಲಕ್ಷ ಕೋಟಿ ರೂ.
* ಭಾರತ ದೇಶದ ಮೊಟ್ಟ ಮೊದಲ ಡಿಜಿಟಲ್ ಜನಗಣತಿಗಾಗಿ 3,768 ಕೋಟಿ ರೂ
* ಕೇಂದ್ರದ ಉಜ್ವಲಾ ಯೋಜನೆಯಡಿ `BPL' ಕುಟುಂಬದ 1 ಕೋಟಿ ಜನರಿಗೆ ಉಚಿತ ಗ್ಯಾಸ್ ಘೋಷಣೆ
* ಆರೋಗ್ಯ ಕ್ಷೇತ್ರದ ಮೇಲೆ ಒಟ್ಟು ₹ 2.23 ಲಕ್ಷ ಕೋಟಿರೂ.ಗಳು.
* ಕೃಷಿ ಸಂಬಂಧಿತ ಚಟುವಟಿಕೆಗಳಿಗಾಗಿ 1.48 ಕೋಟಿರೂ.ಗಳು.
* ಗ್ರಾಮೀಣಾಭಿವೃದ್ಧಿ ಕಾರ್ಯಗಳಿಗಾಗಿ 1.94 ಕೋಟಿರೂ.ಗಳು.
* ಸಾರಿಗೆ ಇಲಾಖೆಯ ವ್ಯವಸ್ಥೆಗಳಿಗಾಗಿ 2.33 ಕೋಟಿರೂ.ಗಳು.
* ಇತರೆ ಎಲ್ಲಾ ವಲಯಗಳಿಗಾಗಿ 14.59 ಕೋಟಿರೂ.ಗಳು.
* ದೇಶದ ರಾಜ್ಯಗಳಿಗೆ ಬಜೆಟ್ ವರ್ಗಾವಣೆ 2.93 ಕೋಟಿರೂ.ಗಳು.

# 03-02-2021

## ಬೆಂಗಳೂರಿನಲ್ಲಿ 13 ನೇ ಆವೃತ್ತಿಯ 'ಏರ್ ಶೋ' ಪ್ರಾರಂಭ




* ಬೆಂಗಳೂರು ನಗರ ಯಲಹಂಕದಲ್ಲಿ 2021ನೇ ಸಾಲಿನ 13ನೇ ಆವೃತ್ತಿಯ ಏರ್ ಶೋ ಪ್ರದರ್ಶನಕ್ಕೆ ಚಾಲನೆ ಇಂದು ಅಂದರೆ ದಿನಾಂಕ 03 ಜನವರಿ 2021 ರಂದು ಅಧಿಕೃತ ಚಾಲನೆ ಸಿಕ್ಕಿದೆ. ಬೆಂಗಳೂರಿನಲ್ಲಿ ನಡೆಯುವ 2021ರ ಏರ್ ಶೋ ಉದ್ಘಾಟನೆಯಲ್ಲಿ ಭಾಗವಹಿಸಲು ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಬೆಂಗಳೂರಿಗೆ ಆಗಮಿಸಿದ್ದು, ಬೆಂಗಳೂರಿನಲ್ಲಿ ನಡೆಯುವ ಏರ್ ಶೋ ಫೆಬ್ರವರಿ 3 ರಿಂದ ಪ್ರಾರಂಭವಾಗಿ ಫೆಬ್ರವರಿ 5ರ ತನಕ ಬೆಂಗಳೂರಿನ ಯಲಹಂಕದ ಭಾರತೀಯ ವಾಯುನೆಲೆಯಲ್ಲಿ ನಡೆಯಲಿದೆ.

### ಭಾರತೀಯ ಮೂಲದ ವಿಜ್ಞಾನಿ ಭವ್ಯಾ ಲಾಲ್ ನಾಸಾದ ಕಾರ್ಯನಿರ್ವಾಹಕ ಮುಖ್ಯಸ್ಥೆಯಾಗಿ ನೇಮಕ




* ಇತ್ತೀಚಿಗೆ ಅಮೇರಿಕಾದಲ್ಲಿ ಅಧಿಕಾರ ಸ್ವೀಕರಿಸಿ ನೂತನ ಅಧ್ಯಕ್ಷರಾಗಿರುವ ಜೋ ಬೈಡನ್ ಅವರ ಸರ್ಕಾರದಲ್ಲಿ ಭಾರತೀಯ ಮೂಲದ ಅಮೆರಿಕದ ವಿಜ್ಞಾನಿಯಾಗಿರುವ ಭವ್ಯಾ ಲಾಲ್ ಅವರು ಇತ್ತೀಚಿಗೆ ಅಮೆರಿಕದ ಬಾಹ್ಯಾಕಾಶ ಸಂಸ್ಥೆ, ನಾಸಾ(NASA) ಕೇಂದ್ರದ ಕಾರ್ಯನಿರ್ವಾಹಕ ಮುಖ್ಯಸ್ಥೆಯಾಗಿ ಸೇರ್ಪಡೆಗೊಂಡಿದ್ದಾರೆ.
* ಈ ಮೊದಲು ಭಾರತೀಯ ಮೂಲದ ವಿಜ್ಞಾನಿಯಾಗಿರುವ ಭವ್ಯಾ ಲಾಲ್ ಅವರು ಎಂಜಿನಿಯರಿಂಗ್ ಮತ್ತು ಬಾಹ್ಯಾಕಾಶ ತಂತ್ರಜ್ಞಾನದ ವಿಷಯಗಳಲ್ಲಿ ಅತಿ ಹೆಚ್ಚು ಜ್ಞಾನವನ್ನು ಪಡೆದಿದ್ದಾರೆ.
* ಪ್ರಸ್ತುತ ಇವರು 2005 ರಿಂದ 2020ರ ತನಕ ಇನ್ಸಿಟ್ಯೂಟ್ ಫಾರ್ ಡಿಫೆನ್ಸ್ ಅನಾಲಿಸಿಸ್ ವಿಜ್ಞಾನ ಮತ್ತು ತಂತ್ರಜ್ಞಾನ ನೀತಿ ಸಂಸ್ಥೆಯ ಸಂಶೋಧನಾ ತಂಡದ ಸದಸ್ಯೆಯಾಗಿ ಸೇವೆ ಸಲ್ಲಿಸಿದ್ದಾರೆ ಎಂದು ನಾಸಾ ಮಾಹಿತಿಯನ್ನು ನೀಡಿದೆ.

### 2020ರ ಆಕ್ಸ್‌ಫರ್ಡ್ ನಿಘಂಟಿನ ಹಿಂದಿ ಪದ, 'ಆತ್ಮನಿರ್ಭರತಾ'




* ಇತ್ತೀಚಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಕಾರ್ಯಕ್ರಮಗಳಲ್ಲಿ ಅತಿ ಹೆಚ್ಚಾಗಿ ಬಳಸುತ್ತಿರುವ ಪದವಾದ 'ಆತ್ಮನಿರ್ಭರ'ವನ್ನು 2020ರ ಆಕ್ಸ್‌ಫರ್ಡ್ ನಿಘಂಟಿನ ಹಿಂದಿ ಪದ ಎಂದು ಆಯ್ಕೆ ಮಾಡಲಾಗಿದೆ.
* ಭಾರತೀಯ ಜನರು ಕೋವಿಡ್ 19 ಸಾಂಕ್ರಾಮಿಕ ರೋಗವನ್ನು ನಿಯಂತ್ರಿಸುವಲ್ಲಿ ಮಾಡಿದ ಅಪಾರ ಸಾಧನೆಯ ನೆನೆಪಿಗೊಸ್ಕರ ಈ ಪದವನ್ನು ಆಯ್ಕೆ ಮಾಡಲಾಗಿದೆ ಎಂದು ಭಾಷಾ ತಜ್ಞರಾದ ಕೃತಿಕಾ ಅಗರ್ ವಾಲ್, ಪೂನಂ ನಿಗಂ ಸಹಾಯ್ ಹಾಗೂ ಇಮೊಗೆನ್ ಫಾಕ್ಸ್ ವೆಲ್ ಅವರನ್ನು ಒಳಗೊಂಡಿರುವ ಸಲಹಾ ಸಮಿತಿ ಮಾಹಿತಿಯನ್ನು ನೀಡಿದೆ.
* ಈ ಮೊದಲು ಅಂದರೆ 2017ರಲ್ಲಿ ಆಧಾರ್, 2018ರಲ್ಲಿ ನಾರಿ ಶಕ್ತಿ, 2019ರಲ್ಲಿ ಸಂವಿಧಾನ್ ಎಂಬ ಹಿಂದಿ ಪದಗಳನ್ನು ಆಯ್ಕೆ ಮಾಡಿ, ಪ್ರಸ್ತುತ ಇದೀಗ 2020ರಲ್ಲಿ 'ಆತ್ಮನಿರ್ಭರತಾ' ಎನ್ನುವ ಪದವನ್ನು ಆಕ್ಸ್‌ಫರ್ಡ್ ನಿಘಂಟಿನ ಮೂಲಕ ಆಯ್ಕೆ ಮಾಡಿದೆ.
* ಆತ್ಮನಿರ್ಭರ ಭಾರತ ಎಂಬ ಯೋಜನೆ ಉದ್ಯೋಗ ಸೃಷ್ಟಿಮಾಡುವ ಸಲುವಾಗಿ ಕೇಂದ್ರ ಸರ್ಕಾರ ಈ ಯೋಜನೆಯನ್ನು ಘೋಷಣೆ ಮಾಡಿದೆ.

### ವಿದೇಶ ವಲಸೆ ನೀತಿ ರದ್ದುಗೊಳಿಸಿ ಆದೇಶಕ್ಕೆ ಸಹಿ ಹಾಕಿದ ಅಮೆರಿಕ ಅಧ್ಯಕ್ಷ ಜೋ ಬೈಡನ್



* ಅಮೆರಿಕ ನೂತನ ಅಧ್ಯಕ್ಷ ಜೋ ಬೈಡನ್'ರವರು ಈ ಹಿಂದೆ ಡೊನಾಲ್ಡ್ ಟ್ರಂಪ್ ಆಡಳಿತದ ವಲಸೆ ನೀತಿಯನ್ನು ರದ್ದುಗೊಳಿಸುವ ಆದೇಶಕ್ಕೆ ಒಪ್ಪಿಗೆ ನೀಡಿ ಸಹಿ ಹಾಕಿದರು.
ಡೊನಾಲ್ಡ್ ಟ್ರಂಪ್'ರ ವಲಸೆ ನೀತಿಯಿಂದಾಗಿ ಅನೇಕ ಕುಟುಂಬಗಳ ತಂದೆ, ತಾಯಿಯಂದಿರು ತಮ್ಮ ಮಕ್ಕಳಿಂದ ದೂರವಾಗಿದ್ದರು ಈ ವಲಸೆ ನೀತಿ ರದ್ದು ಗೊಳಿಸುವದರಿಂದ ಬೇರಪಡಿಸಲಾಗಿರುವ ವಲಸೆ ಕುಟುಂಬಗಳನ್ನು ಮತ್ತೆ ಅವರ ಪೋಷಕರೊಂದಿಗೆ ಕೂಡಿಸುವದು ಈ ಆದೇಶದ ಮುಖ್ಯ ಉದ್ದೇಶವಾಗಿದೆ ಎಂದು ಅಧ್ಯಕ್ಷ ಜೋ ಬೈಡನ್' ತಿಳಿಸಿದರು.

### ಕೇರಳದಲ್ಲಿ ಮೊದಲ ಮಾನವ ಹಾಲು ಬ್ಯಾಂಕ್ ಪ್ರಾರಂಭವಾಗಲಿದೆ



* ಕೇರಳದ ಎರ್ನಾಕುಲಂ ಜನರಲ್ ಆಸ್ಪತ್ರೆಯಲ್ಲಿ ಮೊದಲ ಮಾನವ ಹಾಲು ಬ್ಯಾಂಕ್ ಅನ್ನು ರೋಟರಿ ಕ್ಲಬ್ ಆಫ್ ಕೊಚ್ಚಿನ್ ಗ್ಲೋಬಲ್ ಸಹಯೋಗದೊಂದಿಗೆ 2021 ಫೆಬ್ರವರಿ 5ರಂದು ಪ್ರಾರಂಭಮಾಡಲಾಗುತ್ತಿದೆ ಎಂದು ಆರೋಗ್ಯ ಸಚಿವ ಕೆ.ಕೆ.ಶೈಲಜಾ ಅವರು ಮಾಹಿತಿಯನ್ನು ನೀಡಿದ್ದಾರೆ.
* ನವಜಾತು ಶಿಶುಗಳು, ಮತ್ತು ತಾಯಿಯಿಂದ ಬೇರ್ಪಡಿಸಲಾದ ಶಿಶುಗಳ, ಕಡಿಮೆ ತೂಕದ ತಾಯಿಯಂದಿರು ಸಾಕಷ್ಟು ಆಹಾರವನ್ನು ನೀಡಲು ಸಾಧ್ಯವಾಗದಿರುವ ಕಾರಣ ಈ ಹಾಲಿನ ಬ್ಯಾಂಕ್ ಪ್ರಾರಂಭಮಾಡಲಾಗುತ್ತದೆ, ಇದರಿಂದ ನವಜಾತು ಶಿಶುಗಳಿಗೆ ಹಾಲಿನ ಕೊರತೆಯನ್ನು ಈ ಹಾಲಿನ ಬ್ಯಾಂಕ್ ನೀಗಿಸಲಿದೆ ಎಂದು ಅಭಿಪ್ರಾಯ ಪಟ್ಟಿದ್ದಾರೆ.

### HALನಲ್ಲಿ ಫೈಟರ್ ಜೆಟ್ ಎಲ್‌ಸಿಎ ತೇಜಸ್'ನ ಹೊಸ ಉತ್ಪಾದನಾ ಘಟಕವನ್ನು ಉದ್ಘಾಟನೆ



* ಇತ್ತೀಚಿಗೆ ಬೆಂಗಳೂರಿಗೆ ಆಗಮಿಸಿದ ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಬೆಂಗಳೂರಿನ ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್'ನಲ್ಲಿ, ಲೈಟ್ ಕಾಂಬ್ಯಾಟ್ ಏರ್‌ಕ್ರಾಫ್ಟ್ ಉತ್ಪಾದನೆಯ ಹೊಸ ಘಟಕಕ್ಕೆ ಚಾಲನೆ ನೀಡಿದರು. ಈ ಉತ್ಪಾದನಾ ಘಟಕದಲ್ಲಿ ಭಾರತದ ಸ್ವಳೀಯ ಫೈಟರ್ ಜೆಟ್ ಎಲ್‌ಸಿಎ ತೇಜಸ್ ಉತ್ಪಾದನೆಯನ್ನು ಮಾಡಲಾಗುತ್ತದೆ ಎಂದು ತಿಳಿಸಿದ್ದಾರೆ.
* ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ ಇದು ಭಾರತೀಯ ವಾಯುನೆಲೆಗೆ ಉತ್ತೇಜನ ನೀಡುವ ಅತಿದೊಡ್ಡ ಸ್ವಳೀಯ ರಕ್ಷಣಾ ಸಂಗ್ರಹವಾಗಿದೆ, ಜೊತೆಗೆ ಈ ಎಚ್‌ಎಎಲ್'ನ ಉತ್ಪಾದನಾ ಘಟಕವು ಹಲವು ಜನರಿಗೆ ಉದ್ಯೋಗವನ್ನು ನೀಡುವ ಭರವಸೆ ಇದೆ ಎಂದು ತಿಳಿಸಿದೆ.

## 04-02-2021

### ಮೈಸೂರು ಜಿಲ್ಲೆಯ ಸಾಲಿಗ್ರಾಮದ ಗ್ರಾ.ಪಂ ಅಧ್ಯಕ್ಷ ಸ್ಥಾನಕ್ಕೆ ಮಂಗಳಮುಖಿ ಆಯ್ಕೆ



* ಇತ್ತೀಚಿಗೆ ಕರ್ನಾಟಕದ ರಾಜ್ಯ ಗ್ರಾಮ ಪಂಚಾಯಿತಿಗಳ ಚುನಾವಣೆಗಳು ಮುಕ್ತಾಯವಾದ ಹಿನ್ನಲೆಯಲ್ಲಿ ಕರ್ನಾಟಕ ರಾಜ್ಯದ ಮೈಸೂರು ಜಿಲ್ಲೆಯ ಕೆ.ಆರ್.ನಗರ ತಾಲೂಕಿನ ಸಾಲಿಗ್ರಾಮದ ಗ್ರಾಮ ಪಂಚಾಯಿತಿಯಲ್ಲಿ ದೇವಿಕಾ ಎಂಬ ಮಂಗಳಮುಖಿ (ತೃತೀಯ ಲಿಂಗಿ)ಒಬ್ಬರನ್ನು ಗ್ರಾ.ಪಂ ಅಧ್ಯಕ್ಷರಾಗಿ ಆಯ್ಕೆಮಾಡಿ ಅವರಿಗೆ ಅಧಿಕಾರವನ್ನು ವಹಿಸಲಾಗಿದೆ ಎಂದು ಸಾಲಿಗ್ರಾಮದ ಜನತೆ ತಿಳಿಸಿದ್ದು, ಇದು ರಾಜ್ಯದ ಇತಿಹಾಸದಲ್ಲೇ ಇದೆ ಮೊದಲ ಬಾರಿಗೆ ತೃತೀಯ ಲಿಂಗಿಯೊಬ್ಬರು ಅಧ್ಯಕ್ಷ ಹುದ್ದೆಗೇರಿದಂತಾಗಿದೆ.

### ದೇಶದ ಕಿರಿಯ ಪೈಲಟ್'ಆಗಿ 25 ವಯಸ್ಸಿನ ಆಯೆಷಾ ಅಜೀಜ್



* ಭಾರತದ ಜಮ್ಮು ಮತ್ತು ಕಾಶ್ಮೀರ ರಾಜ್ಯದ 25 ವಯಸ್ಸಿನ ಆಯೆಷಾ ಅಜೀಜ್ ಭಾರತ ದೇಶದ ಕಿರಿಯ ಪೈಲಟ್ ಆಗಿ ಹೊರ ಹೊಮ್ಮಿದ್ದಾರೆ.
* 2011ರಲ್ಲಿ ಆಯೆಷಾ ಅಜೀಜ್'ಅವರು ವಿದ್ಯಾರ್ಥಿ ಪೈಲಟ್ ಕಾರ್ಯ ನಿರ್ವಹಿಸಿದ್ದರು ನಂತರ ಇವರು 2017ರಲ್ಲಿ ಬಾಂಬೆ ಫ್ಲಯಿಂಗ್ ಕ್ಲಬ್'ನ ವಾಯುನೆಲೆಯ ಕ್ಷೇತ್ರದಲ್ಲಿ ಪದವಿ ಪಡೆದು ಜೊತೆಗೆ ವಾಣಿಜ್ಯಿಕ ವಿಮಾನಗಳನ್ನು ಮುನ್ನಡೆಸುವ ಅನುಮತಿಯನ್ನು ಪಡೆದುಕೊಂಡಿದ್ದರು, ಹಾಗೂ ಮಿಗ್29 ಯುದ್ಧ ವಿಮಾನವನ್ನು ರಷ್ಯಾದ ಸೊಕೊಲ್ ವಾಯುನೆಲೆಯಲ್ಲಿ ಹಾರಿಸುವ ಪರವಾನಿಗೆಯನ್ನು ಪಡೆದಿದ್ದರು. ಈ ಮೂಲಕ ಇವರು ಭಾರತದ ಕಿರಿಯ ಪೈಲಟ್ ಎಂಬ ಖ್ಯಾತಿಯನ್ನು ತಮ್ಮದಾಗಿಸಿಕೊಂಡಿದ್ದಾರೆ.

### ಪ್ರವೀಣ್ ಸಿನ್ಹಾ ಸಿಬಿಐ ಹಂಗಾಮಿ ಮುಖ್ಯಸ್ಥರಾಗಿ ನೇಮಕ




* ಪ್ರಧಾನಿ ನರೇಂದ್ರ ಮೋದಿಜೀ ಅವರ ಅಧ್ಯಕ್ಷೀಯ ಸಚಿವ ಸಂಪುಟವು ಪ್ರವೀಣ್ ಸಿನ್ಹಾ ಅವರನ್ನು ಸಿಬಿಐ ಹಂಗಾಮಿ ಮುಖ್ಯಸ್ಥರಾಗಿ ನೇಮಕ ಮಾಡಲು ಸಮತಿಯನ್ನು ನೀಡಿದೆ. ಇತ್ತೀಚಿಗೆ ಸಿಬಿಐ ನಿರ್ದೇಶಕ ರಿಶಿ ಕುಮಾರ್ ಶುಕ್ಲಾರವರು ಇತ್ತೀಚಿಗೆ ನಿವೃತ್ತಿ ಹೊಂದಿದ ಕಾರಣ ಪ್ರವೀಣ್ ಸಿನ್ಹಾ ಅವರು ಈ ಹುದ್ದೆ ಪಡೆದುಕೊಂಡಿದ್ದಾರೆ.
* ಕೇಂದ್ರ ತನಿಖಾ ಸಂಸ್ಥೆಗೆ(CBI) ಹೊಸ ಮುಖ್ಯಸ್ಥರನ್ನು ನೇಮಕ ಮಾಡುವವರೆಗೆ ಸಿಬಿಐ ನಿರ್ದೇಶಕರಾಗಿ ಪ್ರವೀಣ್ ಸಿನ್ಹಾ ಅವರು ಕಾರ್ಯ ನಿರ್ವಹಿಸಲಿದ್ದಾರೆ ಎಂದು ಸಿ.ಬಿ.ಐ ತಿಳಿಸಿದೆ.

## ಭಾರತೀಯ ಮೂಲದ ರಾಜಾ ಕೃಷ್ಣಮೂರ್ತಿ ಅಮೆರಿಕದ CAPAC'ನ ಸಹಚೇರ್ಮನ್ ಆಗಿ ನೇಮಕ



* ಭಾರತೀಯ ಮೂಲದ ಅಮೆರಿಕ ಪ್ರಜೆಯಾಗಿರುವ ರಾಜಾ ಕೃಷ್ಣಮೂರ್ತಿಯವರನ್ನು, ಕಾಂಗ್ರೆಸ್‌ನಲ್ ಏಷ್ಯನ್ ಪೆಸಿಫಿಕ್ ಅಮೆರಿಕನ್ ಕಾಕಸ್'ನ (CAPAC) ಸಹ ಚೇರ್ಮನ್ ಆಗಿ ನೇಮಕಗೊಂಡಿದ್ದಾರೆ.
* ರಾಜಾ ಕೃಷ್ಣಮೂರ್ತಿಯವರು ವಲಸೆ ನೀತಿಯಲ್ಲಿ ಒಳ್ಳೆಯ ರೀತಿಯ ಬದಲಾವಣೆಗಳನ್ನು ಕಾಣಲು, ಹಾಗೂ ಅಮೆರಿಕದ ನಾಗರಿಕತ್ವ ಪಡೆಯಲು ಇಚ್ಚಿಸುವವರಿಗೆ ಮತ್ತು ವಲಸಿಗರ ಹಿತರಕ್ಷಣೆಯನ್ನು ಕಾಪಾಡಲು ಈ ವಲಸೆ ನೀತಿಗಳ ಟಾಸ್ಕಫೋರ್ಸ್ ಬದ್ದವಾಗಿದೆ ಎಂದು ತಿಳಿಸಿದ್ದಾರೆ.
* ಈ ವಲಸೆ ನೀತಿಗಳ ಟಾಸ್ಕಫೋರ್ಸ್ ಚೇರ್ಮನ್ ಆಗಿ ಭಾರತೀಯ ಮೂಲದ ಅಮೆರಿಕದ ಮಹಿಳೆಯಾದ ಪ್ರಮೀಳಾ ಜಯಪಾಲ್ ಅವರು ಸೇವೆ ಸಲ್ಲಿಸುತ್ತಿದ್ದಾರೆ.

## ಕರ್ನಾಟಕ ಸರ್ಕಾರದಿಂದ "ಮಾತೃಪೂರ್ಣ" ಯೋಜನೆ




* "ಮಾತೃಪೂರ್ಣ" ಕರ್ನಾಟಕ ರಾಜ್ಯ ಸರ್ಕಾರದ ಯೋಜನೆಯಾಗಿದ್ದು, ಈ ಯೋಜನೆಯ ಮೂಲಕ ಗರ್ಭಿಣಿ ಮಹಿಳೆಯರು ಮತ್ತು ಮಕ್ಕಳಿಗೆ ಪೌಷ್ಟಿಕ ಆಹಾರವನ್ನು ಅಂಗನವಾಡಿ ಕೇಂದ್ರಗಳಲ್ಲಿ ಒದಗಿಸಲಾಗುತ್ತದೆ.
* ಕರ್ನಾಟಕ ರಾಜ್ಯ ಸರ್ಕಾರದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವ ಶಶಿಕಲಾ ಜೊಲ್ಲೆಯವರು "ಮಾತೃಪೂರ್ಣ" ಯೋಜನೆಯಡಿಲ್ಲಿ ಗರ್ಭಿಣಿ ಮತ್ತು ಬಾಣಂತಿ ತಾಯಿಂದರಿಗಾಗಿ ಮಧ್ಯಾಹ್ನದ ಬಿಸಿ ಊಟವನ್ನು ಅಂಗನವಾಡಿ ಕೇಂದ್ರಗಳಲ್ಲಿ ಶೀಘ್ರದಲ್ಲೇ ನೀಡಲಾಗುತ್ತದೆ ಎಂದು ತಿಳಿಸಿದ್ದು, ಪ್ರಸ್ತುತ ಕೋವಿಡ್ 19 ಕಾರಣದಿಂದಾಗಿ ಅಂಗನವಾಡಿ ಕೇಂದ್ರಗಳು ಮುಚ್ಚಲಾಗಿದೆ.
* ಬರುವ ದಿನಗಳಲ್ಲಿ ಅಂಗನವಾಡಿ ಕೇಂದ್ರ ತೆರೆದ ಬಳಿಕ "ಮಾತೃಪೂರ್ಣ" ಯೋಜನೆಯಡಿಲ್ಲಿ ಬಿಸಿಯೂಟ ಪೂರೈಕೆ ಮಾಡಲಾಗುತ್ತದೆ ಎಂಬ ಮಾಹಿತಿಯನ್ನು ಸಚಿವೆ ನೀಡಿದ್ದಾರೆ.

## ಭಾರತ ಬಾಕ್ಸಿಂಗ್ ಫೆಡರೇಷನ್ ಅಧ್ಯಕ್ಷರಾಗಿ ಅಜಯ್ ಸಿಂಗ್ ಆಯ್ಕೆ



* ಅಂತರರಾಷ್ಟ್ರೀಯ ಬಾಕ್ಸಿಂಗ್ ಸಂಸ್ಥೆಯು, ಸಾರ್ವಜನಿಕರ ಸಮ್ಮುಖದಲ್ಲಿ ಭಾರತ ಬಾಕ್ಸಿಂಗ್ ಫೆಡರೇಷನ್ ಅಧ್ಯಕ್ಷ ಸ್ಥಾನಕ್ಕಾಗಿ ಇತ್ತೀಚಿಗೆ ಚುನಾವಣೆಯನ್ನು ನಡೆಸಿತು.
* ಈ ಚುನಾವಣೆಯಲ್ಲಿ ಸ್ಪೈಸ್‌ಜೆಟ್ ವಿಮಾನ ಸಂಸ್ಥೆಯ ಮುಖ್ಯಸ್ಥ ಅಜಯ್ ಸಿಂಗ್ ಮತ್ತು ಮುಂಬೈ ಕ್ರಿಕೆಟ್ ಸಂಸ್ಥೆಯ ಅಧ್ಯಕ್ಷರಾಗಿರುವ ಆಶೀಶ್ ಶೇಲಾರ್ ಅವರ ಮದ್ಯೆ ಪೈಪೋಟಿ ನಡೆಸಿತು ಇದರಲ್ಲಿ ಅಜಯ್ ಸಿಂಗ್'ರವರು ಜಯ ಗಳಿಸಿದ ಹಿನ್ನಲೆ ಅಜಯ್ ಸಿಂಗ್ ರವರನ್ನು ಭಾರತ ಬಾಕ್ಸಿಂಗ್ ಫೆಡರೇಷನ್ ಅಧ್ಯಕ್ಷರಾಗಿ ಮರು ಆಯ್ಕೆ ಮಾಡಲಾಗಿದೆ ಎಂದು ಅಂತರರಾಷ್ಟ್ರೀಯ ಬಾಕ್ಸಿಂಗ್ ಸಂಸ್ಥೆ ಮಾಹಿತಿಯನ್ನು ನೀಡಿದೆ.

## ಪಿಯುಸಿ, ಪದವಿ ಮುಗಿಸಿದ ವಿದ್ಯಾರ್ಥಿನಿಯರಿಗೆ ಬಿಹಾರ ಸರ್ಕಾರದಿಂದ ಸಹಾಯ ಧನ ಘೋಷಣೆ



* ಬಿಹಾರ ಸರ್ಕಾರವು ಹೆಣ್ಣುಮಕ್ಕಳಿಗೆ ಆರ್ಥಿಕ ನೆರವು ಹಾಗೂ ವಿದ್ಯಾಭ್ಯಾಸಕ್ಕಾಗಿ ನೆರವು ನೀಡುವ "ಕನ್ಯಾ ಉತ್ತಮ ಯೋಜನೆ" ಅಡಿಯಲ್ಲಿ ಪಿಯುಸಿ ಮತ್ತು ಡಿಗ್ರಿ ಉತ್ತೀರ್ಣ ಹೊಂದಿದ ಹೆಣ್ಣುಮಕ್ಕಳಿಗಾಗಿ ಸಹಾಯ ಧನ ನೀಡಲಾಗುತ್ತದೆ ಎಂದು ಘೋಷಣೆ ಮಾಡಿದೆ.
* ಪಿಯುಸಿ(PUC) ಉತ್ತೀರ್ಣವಾದ ಅವಿವಾಹಿತ ಹೆಣ್ಣು ಮಕ್ಕಳಿಗೆ 25 ಸಾವಿರ ರೂ. ನೀಡಲಾಗುವದು ಮತ್ತು ಪದವಿ(ಡಿಗ್ರಿ) ಮುಗಿಸಿದ ವಿವಾಹಿತ ಮತ್ತು ಅವಿವಾಹಿತ ಹೆಣ್ಣುಮಕ್ಕಳಿಗೆ 50 ಸಾವಿರ ರೂ. ನೀಡಲಾಗುವುದು ಎಂದು ಬಿಹಾರ ಸರ್ಕಾರ ತಿಳಿಸಿದೆ.
* ಬಿಹಾರ ರಾಜ್ಯದಲ್ಲಿ ಫೆಬ್ರವರಿ 01 ರಿಂದ ಪಿಯುಸಿ ಪರೀಕ್ಷೆಗಳು ಪ್ರಾರಂಭವಾಗಿದ್ದು ಅದರಲ್ಲಿ ಉತ್ತೀರ್ಣ ಹೊಂದಿದ ಹೆಣ್ಣು ಮಕ್ಕಳಿಗೆ ತಲಾ 25 ಸಾವಿರ ರೂ. ಗಳನ್ನು ನೀಡಲಾಗುತ್ತದೆ ಎಂದು ಬಿಹಾರ ರಾಜ್ಯ ಸರ್ಕಾರ ಮಾಹಿತಿಯನ್ನು ನೀಡಿದೆ.

## ಅಮೆಜಾನ್ CEO ಹುದ್ದೆಗೆ "ಜೆಫ್ ಬೆಝೋಸ್" ರಾಜೀನಾಮೆ




* ಅಮೆಜಾನ್'ನ ಸಂಸ್ಥಾಪಕ ಜೆಫ್ ಬೆಝೋಸ್ ಅವರು ಸಿಇಒ(CEO)ಹುದ್ದೆಗೆ ರಾಜೀನಾಮೆಯನ್ನು ನೀಡಿದ್ದಾರೆ, ಪ್ರಸ್ತುತ ಇದು ವಿಶ್ವದ ಪ್ರಸಿದ್ಧ ಇ ಕಾಮರ್ಸ್ ಸಂಸ್ಥೆಯಾಗಿದೆ.
* ಈ ಅಮೆಜಾನ್ ಕಂಪನಿಯು 1990ರಲ್ಲಿ ಕೇವಲ ಆನ್‌ಲೈನ್ ಬುಕ್ ಮಾರಾಟ ಮಾಡುತಿತ್ತು ಇದೀಗ ವಿಶ್ವದ ಅತಿದೊಡ್ಡ ಇ ಕಾಮರ್ಸ್ ಸಂಸ್ಥೆಯಾಗಿದೆ.
* ಪ್ರಸ್ತುತ ಈ ಅಮೆಜಾನ್ ಕಂಪನಿಯ ಮುಂದಿನ ಸಿಇಒ(CEO) ಆಗಿ "ಆಯಂಡಿ ಜೆಸ್ಸಿ" ಅಧಿಕಾರ ಸ್ವೀಕರಿಸಲಿದ್ದಾರೆ ಎಂದು ಅಮೆಜಾನ್ ಮಾಹಿತಿಯನ್ನು ನೀಡಿದೆ.

# 05-02-2021

## ವಿಶ್ವದ ಮೊದಲ ಕಾರ್ಬನ್ ನ್ಯೂಟ್ರಲ್ ಆಯಿಲ್ ಸಂಸ್ಕರಣಾ ಘಟಕ ಪಡೆದ ರಿಲಯನ್ಸ್ ಇಂಡಸ್ಟ್ರೀಸ್




* ವಿಶ್ವದ ಮೊದಲ ಸರಕು 'ಕಾರ್ಬನ್ ನ್ಯೂಟ್ರಲ್ ಆಯಿಲ್'ನ ಸಂಸ್ಕರಣಾ ಘಟಕವನ್ನು U.S ನಿಂದ ರಿಲಯನ್ಸ್ ಇಂಡಸ್ಟ್ರೀಸ್ ಮುಖ್ಯಸ್ಥ ಮುಖೇಶ್ ಅಂಬಾನಿ ನೇತೃತ್ವದಲ್ಲಿ ರಿಲಯನ್ಸ್ ಕಂಪನಿ ಪಡೆದುಕೊಂಡಿದ್ದು, ಹಾಗೂ 2035ನೇ ವರ್ಷದ ಸಮಯಕ್ಕೆ ನಿವ್ವಳ ಶೂನ್ಯ ಕಾರ್ಬನ್ ಕಂಪನಿ ಆಗಿ ಹೊರಹೊಮ್ಮಲಿದೆ ಎಂದು ರಿಲಯನ್ಸ್ ಇಂಡಸ್ಟ್ರೀಸ್ ಮಾಹಿತಿಯನ್ನು ನೀಡಿದೆ.
* ಪ್ರಸ್ತುತ ರಿಲಯನ್ಸ್ ಕಂಪನಿ ವರ್ಷಕ್ಕೆ 68.2 ಮಿಲಿಯನ್ ಟನ್ ತೈಲ ಸಂಸ್ಕರಣೆ ಮಾಡುವ ವಿಶ್ವದ ಅತಿ ದೊಡ್ಡ ಸಂಸ್ಕರಣಾ ಘಟಕವನ್ನು ಗುಜರಾತ್'ನಲ್ಲಿನ ಜಮ್ನಾನಗರ್ ನಲ್ಲಿ ಹೊಂದಿದೆ.
* U.S ಮೂಲದ ಅಂತರರಾಷ್ಟ್ರೀಯ ಇಂಧನ ಕಂಪೆನಿಯಾಗಿರುವ ಒಕ್ಸಿಡೆಂಟಲ್ 2050ರ ವರ್ಷದ ಸಮಯಕ್ಕೆ ನೆಟ್ ಜೀರೋ GHG ಎಮಿಷನ್ ಉತ್ಪನ್ನಗಳನ್ನು ಉತ್ಪಾದಿಸುವ ಗುರಿಯನ್ನು ಒಕ್ಸಿಡೆಂಟಲ್ ಕಂಪನಿ ಹೊಂದಿದೆ.
* 2021ರ ಫೆಬ್ರುವರಿ 3ನೇ ದಿನಾಂಕದಂದು RMLLC ಮತ್ತು NOG ಮಧ್ಯೆ ಖರೀದಿ ಮತ್ತು ಮಾರಾಟಕ್ಕೆ ಪರಸ್ಪರ ಒಪ್ಪಿಗೆಯನ್ನು ನೀಡಿ ಒಪ್ಪಂದಕ್ಕೆ ಸಹಿ ಹಾಕಿವೆ.

## ರಾಷ್ಟ್ರೀಯ ಸುರಕ್ಷತಾ ಮಂಡಳಿಯ ಅಧ್ಯಕ್ಷರಾಗಿ ಸುಬ್ರಹ್ಮಣ್ಯನ್'ರವರು ನೇಮಕ



* ರಾಷ್ಟ್ರೀಯ ಸುರಕ್ಷತಾ ಮಂಡಳಿಯ ಅಧ್ಯಕ್ಷರಾಗಿ ಎಸ್.ಎನ್. ಸುಬ್ರಹ್ಮಣ್ಯನ್ ಅವರನ್ನು ನೇಮಕ ಮಾಡಲಾಗಿದ್ದು, ಹಾಗೂ ಇವರ ಅಧಿಕಾರ ಅವಧಿ 3 ವರ್ಷಗಳ ಕಾಲ ಇರಲಿದೆ ಎಂದು ಕಾರ್ಮಿಕ ಸಚಿವಾಲಯ ಮಾಹಿತಿಯನ್ನು ನೀಡಿದೆ. ಪ್ರಸ್ತುತ ಇವರು ಎಂಜಿನಿಯರ್ ಹಾಗೂ L&T; ಕಂಪನಿಯ ಸಿಇಒ(CEO) ಮತ್ತು ವ್ಯವಸ್ಥಾಪಕ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

## ಅಂಗವಿಕಲರ ವಾಹನಗಳಿಗೆ ಟೋಲ್ ಶುಲ್ಕ ಇಲ್ಲ : ಸಚಿವ ನಿತಿನ್ ಗಡ್ಕರಿ



* ಕೇಂದ್ರ ರಸ್ತೆ ಸಾರಿಗೆ ಸಚಿವರಾದ ನಿತಿನ್ ಗಡ್ಕರಿ ಅವರು ಅಂಗವಿಕಲರು ಹೊಂದಿರುವ ತಮ್ಮ ಸ್ವಂತ ವಾಹನಗಳಿಗೆ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಟೋಲ್ ಶುಲ್ಕ ಪಾವತಿಯಿಂದ ವಿನಾಯಿತಿ ನೀಡಲಾಗಿದೆ ಎಂಬ ಮಾಹಿತಿಯನ್ನು ತಿಳಿಸಿದ್ದಾರೆ.
* ಅಂಗವಿಕಲ ವ್ಯಕ್ತಿಗಳ ಬಳಕೆ ಮಾಡಲು ವಿನ್ಯಾಸಗೊಳಿಸಲಾಗಿರುವ ವಿಶೇಷ ವಾಹನಗಳಿಗೆ ಕೇಂದ್ರ ಮೋಟಾರು ವಾಹನ ಕಾಯ್ದೆ ಅಡಿಯಲ್ಲಿ ವಾಹನಗಳಿಗೆ "ಅಮಾನ್ಯ ವಾಹನಗಳು" ಎಂದು ಪರಿಗಣಿಸಲಾಗುತ್ತಿದೆ.
* ಇದೀಗ 11 ರಾಜ್ಯಗಳು ಅಂಗವಿಕಲರ ವಾಹನಗಳಿಗೆ ರಸ್ತೆ ತೆರಿಗೆ ವಿನಾಯಿತಿ ನೀಡಲು ಸಮ್ಮತಿಯನ್ನು ನೀಡಿವೆ, ಪ್ರಸ್ತುತ ಇದು ರಾಜ್ಯಗಳ ವ್ಯಾಪ್ತಿಗೆ ಬರಲಿದ್ದು ಇದರ ನಿರ್ಧಾರವನ್ನು ಆ ರಾಜ್ಯಗಳೇ ತಗೆದುಕೊಳ್ಳಬೇಕಾಗಿದೆ ಎಂದು ಕೇಂದ್ರ ರಸ್ತೆ ಸಾರಿಗೆ ಸಚಿವರಾದ ನಿತಿನ್ ಗಡ್ಕರಿ ಅವರು ಹೇಳಿದ್ದಾರೆ.

### ಅಮೆರಿಕ ರಷ್ಯ ಜೊತೆಗಿನ ಪರಮಾಣು ಒಪ್ಪಂದ 5 ವರ್ಷ ವಿಸ್ತರಣೆ



* ರಷ್ಯ ಜೊತೆಗಿನ ಪರಮಾಣು ಒಪ್ಪಂದವನ್ನು 5 ವರ್ಷಗಳ ಅವಧಿಗೆ ಅಮೆರಿಕ ಅಧ್ಯಕ್ಷ ಜೋ ಬೈಡನ್‌ರ ಸರಕಾರವು ವಿಸ್ತರಣೆ ಮಾಡಿಕೊಂಡಿದೆ ಎಂದು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಆಯಂಟನಿ ಬ್ಲಿಂಕನ್ ಮಾಹಿತಿಯನ್ನು ನೀಡಿದ್ದಾರೆ.
* ಈ ಒಪ್ಪಂದದಿಂದಾಗಿ ಶಸ್ತ್ರಾಸ್ತ್ರಗಳ ಸಮಸ್ಯೆಯನ್ನು ನೀಗಿಸಲಿದೆ ಹಾಗೂ ಶಸ್ತ್ರಾಸ್ತ್ರ ಸಮರದ ಅಪಾಯಗಳನ್ನೂ ನಿಯಂತ್ರಣದಲ್ಲಿಡಲು ಅಮೆರಿಕ ಒಪ್ಪಿಕೊಂಡಿದೆ ಎಂದು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಆಯಂಟನಿ ಬ್ಲಿಂಕನ್'ರವರು ಅಭಿಪ್ರಾಯಪಟ್ಟಿದ್ದಾರೆ.

### ತಮಿಳುನಾಡು ರಾಜ್ಯದಲ್ಲಿ ಆನ್‌ಲೈನ್ ಜೂಜಿಗೆ ನಿಷೇದ ಕಾಯ್ದೆ ಮಂಡನೆ



* ತಮಿಳುನಾಡು ರಾಜ್ಯದಲ್ಲಿ ಕಂಪ್ಯೂಟರ್ ಮತ್ತು ಮೊಬೈಲ್ ಆಧಾರಿತ ಆನ್ ಲೈನ್ ಜೂಜಿಗೆ ನಿಷೇದ ಕಾಯ್ದೆ ಜಾರಿ, ತಮಿಳುನಾಡು ಸರ್ಕಾರದ ವಿಧಾನಸಭೆ ಅಧಿವೇಶನದಲ್ಲಿ ಈ ಕಾಯ್ದೆಯ ತಿದ್ದುಪಡಿಯನ್ನು ತಮಿಳುನಾಡು ಡಿಸಿಎಂ ಪನ್ನೀರ್ ಸೆಲ್ವಂ ಮಂಡಿಸಿದ್ದಾರೆ, ಆದರೆ ಈ ಕಾಯ್ದೆಯಿಂದ ಲಾಟರಿಯನ್ನು ಹೊರಗಿಡಲಾಗಿದೆ ಎಂದು ತಿಳಿಸಿದ್ದಾರೆ.
* ಈ ಕಾಯ್ದೆ ಅನ್ವಯ ಆನ್ ಲೈನ್ ಜೂಜಿನಲ್ಲಿ ಭಾಗಿಯಾದವರಿಗೆ 5000 ರೂ. ದಂಡ ಹಾಗೂ 6ತಿಂಗಳ ಕಾಲ ಜೈಲು ಶಿಕ್ಷೆ ವಿಧಿಸಲಾಗುವುದು, ಅಲ್ಲದೆ ಆನ್ ಲೈನ್ ಜೂಜಿನ ಗೇಮ್ ಆಯೋಜಿಸುವವರಿಗೆ 10,000 ರೂ. ದಂಡ ಹಾಗೂ 2ವರ್ಷಗಳ ಕಾಲ ಜೈಲು ಶಿಕ್ಷೆಗೆ ಒಳಪಡಿಸಲಾಗುವದು ಎಂದು ತಮಿಳುನಾಡು ಡಿಸಿಎಂ ತಿಳಿಸಿದ್ದಾರೆ.

### ಆಯುಷ್ ಸಚಿವಾಲಯದಿಂದ ಸಾಮಾನ್ಯ ಯೋಗ ಪ್ರೋಟೋಕಾಲ್ ತರಬೇತಿ ಕಾರ್ಯಕ್ರಮ ಪ್ರಾರಂಭ



* ಮೊರಾರ್ಜಿ ದೇಸಾಯಿ ರಾಷ್ಟ್ರೀಯ ಯೋಗ ಸಂಸ್ಥೆಯು, ಆಯುಷ್ ಸಚಿವಾಲಯದ ಜೊತೆಗೂಡಿ ಸಾಮಾನ್ಯ ಯೋಗ ಪ್ರೋಟೋಕಾಲ್ ತರಬೇತಿ ಕಾರ್ಯಕ್ರಮವನ್ನು ಆಯೋಜಿಸುತ್ತಿದೆ.
* ಭಾರತದಲ್ಲಿ ಮತ್ತು ವಿದೇಶಗಳಲ್ಲಿ ಯೋಗಾಭ್ಯಾಸವನ್ನು ಕಲಿಯುವದು ಹಾಗೂ ಒಗ್ಗೂಡಿಸಿಕೊಳ್ಳುವ ಪ್ರಯತ್ನದ ಹಿನ್ನೆಲೆಯಲ್ಲಿ ಈ ಕಾರ್ಯಕ್ರಮವನ್ನು ಆಯುಷ್ ಸಚಿವಾಲಯ ಆರಂಭಿಸಿದೆ.
* ಈ ಕಾರ್ಯಕ್ರಮದಿಂದ ಜನರಲ್ಲಿ ಯೋಗದ ಜ್ಞಾನ ಮತ್ತು ಅಭ್ಯಾಸವನ್ನು ಉತ್ತೇಜಿಸುವ ಸಲುವಾಗಿ ಹಾಗೂ ಜನರ ದೈಹಿಕ, ಭಾವನಾತ್ಮಕ, ಮಾನಸಿಕ ಮತ್ತು ಆಧ್ಯಾತ್ಮಿಕ ಆರೋಗ್ಯವನ್ನು ಬದಲಾಯಿಸುವ ಅಭ್ಯಾಸದ ವಿಧಾನಗಳನ್ನು ಈ ಕಾರ್ಯಕ್ರಮ ಒಳಗೊಂಡಿದೆ, ಇದನ್ನು ಪ್ರತಿವರ್ಷ ಅಂತರರಾಷ್ಟ್ರೀಯ ಯೋಗ ದಿನಾಚರಣೆಯ ಸಂದರ್ಭದಲ್ಲಿ ನಡೆಸಲಾಗುವುದು ಎಂದು ಆಯುಷ್ ಸಚಿವಾಲಯ ತಿಳಿಸಿದೆ.

## 06-02-2021

### ಭಾರತದಲ್ಲಿ 2014 ರಿಂದ ಇಲ್ಲಿ ತನಕ ಒಟ್ಟು 296 ಮೊಬೈಲ್ ಆಯಪ್'ಗಳಿಗೆ ನಿಷೇಧ



* ಭಾರತದಲ್ಲಿ 2000ನೇ ಇಸವಿ ಸೆಕ್ಷನ್ 69ಎ ಅನ್ವಯಗಳ ಅಡಿಯಲ್ಲಿ 2014ರಿಂದ ಇಲ್ಲಿಯವರೆಗೆ ಒಟ್ಟಾರೆ 296 ಮೊಬೈಲ್ ಆಯಪ್'ಗಳನ್ನು ಭಾರತ ಸರ್ಕಾರ ನಿಷೇಧಿಸಿದೆ, ಈ ಆಪ್'ಗಳ ನಿಷೇಧದ ಮುಖ್ಯ ಉದ್ದೇಶ ದೇಶದ ಸಾರ್ವಭೌಮತೆ, ಭದ್ರತೆ ಮತ್ತು ಸಾರ್ವಜನಿಕ ಸುವ್ಯವಸ್ಥೆಯನ್ನು ಕಾಪಾಡುವುದಾಗಿದೆ ಎಂದು ಕೇಂದ್ರ ಸಚಿವ ಸಂಜಯ್ ಧೋತ್ರೆ ರಾಜ್ಯ ಸಭೆಗೆ ಮಾಹಿತಿಯನ್ನು ನೀಡಿದ್ದಾರೆ.

### ಮೈಸೂರಿನ DFRL ನಲ್ಲಿ "ಮಿಷನ್ ಗಗನಯಾನ 2022"ಕ್ಕಾಗಿ, ಆಹಾರ ತಯಾರಿಸಲಾಗುತ್ತಿದೆ




* ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ISRO) ಗಗನಯಾನ 2022, ಯೋಜನೆಯನ್ನು ಹಮ್ಮಿಕೊಂಡಿದ್ದು, ಈ ಬಾಹ್ಯಾಕಾಶ ಯೋಜನೆಯಲ್ಲಿ 3 ಗಗನಯಾತ್ರಿಗಳನ್ನು ಬಾಹ್ಯಾಕಾಶಕ್ಕೆ ಕಳುಹಿಸಲು ಯೋಜನೆ ಹೊಂದಿದೆ, ಈ ಗಗನಯಾತ್ರಿಗಳು 5 ರಿಂದ 7 ದಿನ ಬಾಹ್ಯಾಕಾಶದಲ್ಲಿ ಇರಲಿದ್ದಾರೆ ಎಂದು ಇಸ್ರೊ ಮಾಹಿತಿಯನ್ನು ನೀಡಿದೆ. ಈ ಗಗನಯಾತ್ರಿಗಳಿಗೆ ಸೇವಿಸಲು ಬೇಕಾಗಿರುವ ಆಹಾರ ಪದಾರ್ಥಗಳನ್ನು ಕರ್ನಾಟಕ ರಾಜ್ಯದ ಮೈಸೂರಿನ ರಕ್ಷಣಾ ಆಹಾರ ಸಂಶೋಧನಾ ಪ್ರಯೋಗಾಲಯ (DFRL)ದಲ್ಲಿ ತಯಾರಿಸಲಾಗುತ್ತಿದೆ ಎಂದು ಮಾಹಿತಿ ತಿಳಿದುಬಂದಿದೆ.

## RBI ನಿಂದ "ಒಂದು ದೇಶ, ಒಂದು ಒಂಬುಡ್ಸ್‌ಮನ್" ಜಾರಿ




* RBI ಯಿಂದ ಇದೆ ಜೂನ್ ತಿಂಗಳಿನಿಂದ ಒಂದು ದೇಶ, ಒಂದು ಒಂಬುಡ್ಸ್‌ಮನ್ ವ್ಯವಸ್ಥೆಯನ್ನು ಜಾರಿಗೆ ತರಲಾಗುತ್ತಿದೆ ಎಂದು ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್'ರವರು ಮಾಹಿತಿಯನ್ನು ನೀಡಿದ್ದಾರೆ. ಈ ವ್ಯವಸ್ಥೆಯಿಂದಾಗಿ ಗ್ರಾಹಕರು ಹಣಕಾಸು ಸಂಸ್ಥೆಗಳಾದ ಬ್ಯಾಂಕ್ ಮತ್ತು ಡಿಜಿಟಲ್ ಪಾವತಿಗೆ ಸಂಬಂಧಿಸಿದ ಇತರೆ ದೂರುಗಳನ್ನು ನೀಡಲು ಆರ್‌ಬಿಐ'ನಿಂದ ಈ ಏಕೀಕೃತ ಒಂಬುಡ್ಸ್‌ಮನ್ ವ್ಯವಸ್ಥೆ ಜಾರಿಗೆ ತರಲಾಗುತ್ತಿದೆ.

## ಬೆಂಗಳೂರಿನ ನವೋದ್ಯಮಯಿಂದ ಸೇನಾ ಟ್ಯಾಂಕರ್'ಗಳ ರಾತ್ರಿ ಕಾರ್ಯಾಚರಣೆಗೆ 'ವೂಲ್ಫ್ ಐ'



* ಭಾರತೀಯ ಸೇನೆಯ ಟ್ಯಾಂಕರ್‌ಗಳಿಗೆ ರಾತ್ರಿ ಕಾರ್ಯಾಚರಣೆಗೆ ಅನುಕೂಲವಾಗಲೆಂದು, ಬೆಂಗಳೂರಿನ 'ಟಾಂಬೊ ಇಮೇಜಿಂಗ್' ನವೋದ್ಯಮ ಸಂಸ್ಥೆ "ವೂಲ್ಫ್ ಪ್ಯಾಕ್ "ಅನ್ನು ನೀಡಿದೆ.
* ಈ ವೂಲ್ಫ್‌ಪ್ಯಾಕ್ 'ಥರ್ಮಲ್ ಇಮೇಜಿಂಗ್ ತಂತ್ರಜ್ಞಾನದ ಆಧಾರದಲ್ಲಿ ಕಾರ್ಯನಿರ್ವಹಿಸುತ್ತದೆ ಜೊತೆಗೆ ಇದು ರಾತ್ರಿ ಸಮಯದಲ್ಲಿ 500 ಮೀ. ದೂರದಲ್ಲಿರುವ ಸೈನಿಕರನ್ನು ಮತ್ತು 2 ಕಿ.ಮೀ ದೂರದಲ್ಲಿರುವ ಟ್ಯಾಂಕರ್‌ಗಳನ್ನು ಪತ್ತೆ ಹಚ್ಚುತ್ತದೆ, ಹಾಗೂ ಟ್ಯಾಂಕರ್ ಒಳಗೆ ಇರುವಂತಹ ಯೋಧರು 360 ಡಿಗ್ರಿ ತಮ್ಮ ಸುತ್ತಮುತ್ತಲಿನ ಪ್ರದೇಶಗಳಲ್ಲಿ ನಡೆಯುತ್ತಿರುವ ಕಾರ್ಯ ವೈಖರಿಗಳನ್ನು ವೀಕ್ಷಣೆ ಮಾಡಲು ಸಹಾಯ ಮಾಡುತ್ತದೆ ಎಂದು ತಿಳಿಸಿದೆ.

## ಹೈಕೋರ್ಟ್ ನ್ಯಾಯಮೂರ್ತಿ ಆಗಿ ಬಾಗಲಕೋಟ ಜಿಲ್ಲೆಯ ರಾಜೇಂದ್ರ ಬಾದಾಮಿಕರ್ ನೇಮಕ



* ಬಾಗಲಕೋಟ ಜಿಲ್ಲೆಯ ರಬಕವಿ ನಗರದ ರಾಜೇಂದ್ರ ಬಾದಾಮಿಕರ್ ಅವರನ್ನು ಕರ್ನಾಟಕ ರಾಜ್ಯ ಹೈಕೋರ್ಟ್ ನ್ಯಾಯಮೂರ್ತಿ ಆಗಿ ಸುಪ್ರೀಂಕೋರ್ಟ್ ನೇಮಕ ಮಾಡಿದೆ.
* ಪ್ರಸ್ತುತ ರಾಜೇಂದ್ರ ಬಾದಾಮಿಕರ್'ಅವರು ಬೆಂಗಳೂರಿನಲ್ಲಿ ಹೈಕೋರ್ಟ್ ರಿಜಿಸ್ಟ್ರಾರ್ ಜನರಲ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ ಹಾಗೂ ಈ ಮೊದಲು ಮೈಸೂರು, ಕೋಲಾರ ಹಾಗೂ ತುಮಕೂರು ಜಿಲ್ಲಾ ನ್ಯಾಯಾಲಯಗಳಲ್ಲಿ ನ್ಯಾಯಾಧೀಶರಾಗಿ ಸೇವೆಯನ್ನು ಸಲ್ಲಿಸಿದ್ದಾರೆ.

## ದೇಶದ ಮೊದಲ ಚಂಡಮಾರುತ ಪ್ರಯೋಗಾಲಯ



* ಭಾರತೀಯ ಹವಾಮಾನ ಇಲಾಖೆಯು ದೇಶದಲ್ಲಿ ಮೊಟ್ಟ ಮೊದಲ ಚಂಡಮಾರುತ, ಗುಡುಗು ಸಹಿತ ಮಳೆ ಕುರಿತು ಸಂಶೋಧನೆ ನಡೆಸಲು ಪ್ರಯೋಗಾಲಯವನ್ನು ಒಡಿಶಾದ ಬಾಲಸೋರ್ ಎಂಬಲ್ಲಿ ಪ್ರಾರಂಭ ಮಾಡಲಿದೆ.
* ಈ ಪ್ರಯೋಗಾಲಯದಿಂದ ಚಂಡಮಾರುತ, ಪ್ರಕೃತಿ ವಿಕೋಪ, ಮತ್ತು ಆಸ್ತಿ ಹಾನಿಯಾಗುವದನ್ನು ತಡೆಯಲು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಸಂಶೋಧನೆ ನಡೆಸುವುದು ಈ ಪ್ರಯೋಗಾಲಯದ ಮುಖ್ಯ ಉದ್ದೇಶವಾಗಿದೆ ಎಂದು IMD ಮಹಾ ನಿರ್ದೇಶಕ

ಡಾ.ಮೃತ್ಯುಂಜಯ ಮಹಾಪಾತ್ರ ಅವರು ಮಾಹಿತಿಯನ್ನು ನೀಡಿದ್ದಾರೆ.

# 07-02-2021

## ಉತ್ಸವಕ್ಕೆ ಏಪ್ಯಾದ ಅತಿದೊಡ್ಡ ಸರೋವರ ಉತ್ತರಾಖಂಡ್ ತಯಾರಿ



* ಉತ್ತರಾಖಂಡ್ ರಾಜ್ಯವು ಪುರಾಣ ಪ್ರಸಿದ್ಧ ತೆಹ್ರಿ ಸರೋವರ ಉತ್ಸವವನ್ನು ಇದೆ ತಿಂಗಳು ಫೆಬ್ರವರಿ 16 ಮತ್ತು 17ನೇ ದಿನಾಂಕದಂದು ನಡೆಸಲು ಸಿದ್ಧತೆಯನ್ನು ಉತ್ತರಾಖಂಡ್ ರಾಜ್ಯದ ಪ್ರವಾಸಿ ಇಲಾಖೆ ಮಾಡುತ್ತಿದೆ.
* ಏಪ್ಯಾದ ಅತಿದೊಡ್ಡ ಸರೋವರ ಉತ್ಸವ ಎನ್ನುವ ಹೆಗ್ಗಳಿಕೆಗೆ ಉತ್ತರಾಖಂಡದ ತೆಹ್ರಿ ಸರೋವರ ಉತ್ಸವ ಪಾತ್ರವಾಗಿದೆ. ಈ ಉತ್ಸವಕ್ಕೆ ಪ್ರವಾಸಿಗರ ಆಗಮನಕ್ಕೆ ರಾಜ್ಯ ಪ್ರವಾಸಿ ಇಲಾಖೆ ಸಿದ್ಧವಾಗಿದೆ ಎಂದು ಉತ್ತರಾಖಂಡ್ ಸರ್ಕಾರ ತಿಳಿಸಿದೆ.
* ಈ ತೆಹ್ರಿ ಸರೋವರ ಉತ್ಸವದಲ್ಲಿ ವೈಮಾನಿಕ ಕ್ರೀಡೆ, ಬೆಂಕಿಯ ಸಾಹಸ ಚಟುವಟಿಕೆಗಳು ಹಾಗೂ ಸಂಗೀತ ಪ್ರದರ್ಶನ, ಸಾಂಸ್ಕೃತಿಕ ನೃತ್ಯ, ಯೋಗ ಪ್ರದರ್ಶನ, ಜಲ ಕ್ರೀಡೆ ತೆಹ್ರಿ ಸರೋವರ ಉತ್ಸವದಲ್ಲಿ ಪ್ರಮುಖವಾಗಿವೆ.

# 08-02-2021

## ಉತ್ತರಾಖಂಡದ ಋಷಿಗಂಗಾ ಹಿಮನದಿ ಸ್ಫೋಟ



* ಉತ್ತರಾಖಂಡದ ಚಮೋಲಿ ಜಿಲ್ಲೆಯ ಜೋಶಿಮಠದ ಬಳಿಹಿಮನದಿಯಿಂದ ಸ್ಫೋಟ ಉಂಟಾಗಿದೆ. ಈ ಪ್ರವಾಹದಿಂದಾಗಿ 2 ಜಲವಿದ್ಯುತ್ ಘಟಕಗಳಿಗೆ ಹಾನಿಯಾಗಿದೆ, ಹಲವು ಜನರು ಸಾವನ್ನಪ್ಪಿದ್ದಾರೆ ಹಾಗೂ 125ಕ್ಕೂ ಹೆಚ್ಚು ಜನ ಕಾಣೆಯಾಗಿದ್ದಾರೆ, ಇಂಡೊ ಟಿಬೆಟಿಯನ್ ಗಡಿ ಪೊಲೀಸ್ ಹಾಗೂ NDRF ಪಡೆಯಿಂದ ರಕ್ಷಣಾ ಕಾರ್ಯಾಚರಣೆ ನಡೆದಿದೆ.
* ಈ ಋಷಿಗಂಗಾ ಹಿಮನದಿಯ ಜೋಶಿಮಠದ ಪೂರ್ವದಿಕ್ಕಿನಲ್ಲಿ ಇರುವ ನಂದಾದೇವಿ ಪರ್ವತದಲ್ಲಿದೆ ಋಷಿಗಂಗಾ ಹಿಮನದಿಯ ಮಂಜುಗಡ್ಡೆಯು ನೀರ್ಗಲ್ಲು ಮುರಿದುಬಿದ್ದ ಸ್ಫೋಟ ಉಂಟಾಗಿದೆ.
* ಈ ಹಿಮನದಿಯ ಪ್ರವಾಹದಿಂದ ರೈನಿ ಎಂಬ ಪ್ರದೇಶದಲ್ಲಿರುವ ಋಷಿಗಂಗಾ ಜಲವಿದ್ಯುತ್ ಯೋಜನೆಯ ಹಾಗೂ ತಪೋವನದಲ್ಲಿ ನಿರ್ಮಾಣ ಹಂತದಲ್ಲಿರುವ ಜಲವಿದ್ಯುತ್ ಯೋಜನೆಯ ಅಣೆಕಟ್ಟೆ ಕೂಡ ಈ ಪ್ರವಾಹದಲ್ಲಿ ಕೊಚ್ಚಿಹೋಗಿವೆ.
* ಉತ್ತರಾಖಂಡದಲ್ಲಿ ಈ ಮೊದಲು 2013ರಲ್ಲಿ ಮೇಘಸ್ಫೋಟ ಸಂಭವಿಸಿತ್ತು, ಇದರ ಪರಿಣಾಮವಾಗಿ ಪ್ರವಾಹ ಉಂಟಾಗಿ 5,000ಕ್ಕೂ ಹೆಚ್ಚು ಜನರು ಸಾವನ್ನಪ್ಪಿದರು ಎಂದು ತಿಳಿದು ಬಂದಿದೆ.

## ಲಡಾಖ್‌ನಲ್ಲಿ ಭಾರತದ ಪ್ರಪ್ರಥಮ ಭೂಶಾಖ ಕ್ಷೇತ್ರಾಭಿವೃದ್ಧಿ ಯೋಜನೆ



* ಲಡಾಖ್‌ನಲ್ಲಿ ಭಾರತದ ಪ್ರಪ್ರಥಮ ಭೂಶಾಖ ಕ್ಷೇತ್ರಾಭಿವೃದ್ಧಿ ಯೋಜನೆಯನ್ನು ಆರಂಭಿಸಲು ಐತಿಹಾಸಿಕ ತ್ರಿಪಕ್ಷೀಯ ಒಪ್ಪಂದಕ್ಕೆ ಸಹಿ ಹಾಕಿರುವುದಾಗಿ ಲಡಾಖ್‌ನ ಉಪರಾಜ್ಯಪಾಲ ಆರ್.ಕೆ.ಮಾಥೂರ್'ರವರು ತಿಳಿಸಿದ್ದಾರೆ.
* ಇತ್ತೀಚಿಗೆ ಲಡಾಖ್‌ನಲ್ಲಿ ಮೊಟ್ಟ ಮೊದಲ ಅಭಿವೃದ್ಧಿ ಸಮ್ಮೇಳನ ನಡೆದಿದ್ದು, ಈ ಸಮ್ಮೇಳನದಲ್ಲಿ ಲಡಾಖ್‌ನ ಅಭಿವೃದ್ಧಿ ಕಾರ್ಯಗಳಿಗಾಗಿ ಲಡಾಖ್ ಕೇಂದ್ರಾಡಳಿತ ಪ್ರದೇಶವು 'ಲಡಾಖ್ ಸ್ವಾಯತ್ತ ಪರ್ವತೀಯ ವಿಕಾಸ ಪರಿಷದ್' ಮತ್ತು 'ಒಎನ್‌ಜಿಸಿ ಎನರ್ಜಿ ಸೆಂಟರ್'ಗಳ ನಡುವೆ ಈ ಒಪ್ಪಂದ ಮಾಡಿಕೊಂಡಿರುವುದಾಗಿ ಉಪರಾಜ್ಯಪಾಲ ಆರ್.ಕೆ.ಮಾಥೂರ್ ರವರು ಮಾಹಿತಿಯನ್ನು ನೀಡಿದ್ದಾರೆ.
* ಏನಿದು ಭೂಶಾಖ ಕ್ಷೇತ್ರಾಭಿವೃದ್ಧಿ ಯೋಜನೆ ?

ಈ ಯೋಜನೆಯ ಒಪ್ಪಂದದಿಂದಾಗಿ ಇಲ್ಲಿ ಲಭ್ಯವಿರುವ ಬಿಸಿನೀರಿನ ಬುಗ್ಗೆಗಳಿಂದ ಮನೆಗಳನ್ನು ಬೆಚ್ಚಗಿರಿಸಲು ಹಾಗೂ ಪ್ರವಾಸಿಗರನ್ನು ಆಕರ್ಷಿಸಲು ಬಿಸಿನೀರಿನ ಈಜುಕೊಳಗಳನ್ನು ಸ್ಥಾಪಿಸಲು ಲಡಾಖ್‌ನ ಪ್ರದೇಶಗಳಿಗೆ ದಿನದ 24 ಗಂಟೆಯೂ ವಿದ್ಯುತ್ ಪೂರೈಕೆ

## ಪ್ರಧಾನಿ ಮೋದಿಯಿಂದ ದೋಬಿ ದುರ್ಗಾಪುರ ನೈಸರ್ಗಿಕ ಅನಿಲ ಪೈಪ್‌ಲೈನ್ ಉದ್ಘಾಟಣೆ



* ಭಾರತೀಯ ಪ್ರಧಾನಿ ಮೋದಿಯವರು ಇತ್ತೀಚಿಗೆ ಅಸ್ಸಾಂ ಮತ್ತು ಪಶ್ಚಿಮ ಬಂಗಾಳಕ್ಕೆ ಭೇಟಿ ನೀಡಿ ಹಲವಾರು ಯೋಜನೆಗಳಿಗೆ ಚಾಲನೆ ನೀಡಿದರು.

* ಪ್ರಧಾನಿ ಮೋದಿಯವರು ಪಶ್ಚಿಮ ಬಂಗಾಳದ ಹಲ್ದಿಯಾದ ರಾಣಿಚಾಕ್‌ನಲ್ಲಿ ಗೇಲ್ ಕಂಪನಿ ನಿರ್ಮಿಸಿದ ದೋಬಿ ದುರ್ಗಾಪುರ ನೈಸರ್ಗಿಕ ಅನಿಲ ಪೈಪ್‌ಲೈನ್ ಉದ್ಘಾಟಣೆ ಮಾಡಿದರು, ಪ್ರಸ್ತುತ ಅದು 348 ಕಿ.ಮೀ ಉದ್ದದ ಪೈಪ್‌ಲೈನ್ ಯೋಜನೆಯಾಗಿದ್ದು, ಇದರ ಜೊತೆಗೇನೆ ನಾಲ್ಕು ಪಥದ ರಸ್ತೆಯ ಓವರ್‌ಬ್ರಿಡ್ಜ್ ನ್ನು ಉದ್ಘಾಟಣೆ ಮಾಡಿದರು.

## ಕೇರಳ ಹೈ ಸ್ಪೀಡ್ ರೈಲು ಯೋಜನೆಗೆ ಕೇಂದ್ರ ಒಪ್ಪಿಗೆ



* ಕೇರಳ ರಾಜ್ಯ ರಾಜಧಾನಿಯಾಗಿರುವ ತಿರುವನಂತಪುರ ಮತ್ತು ಕಾಸರಗೋಡು ನಡುವೆ ಸಂಪರ್ಕ ಕಲ್ಪಿಸುವ ಉದ್ದೇಶದಿಂದಾಗಿ ₹64 ಸಾವಿರ ಕೋಟಿ ಯೋಜನೆಯ ಸೆಮಿ ಹೈಸ್ಪೀಡ್ ರೈಲು ಯೋಜನೆಗೆ ಕೇಂದ್ರ ಹಣಕಾಸು ಸಚಿವಾಲಯ ಒಪ್ಪಿಗೆಯನ್ನು ನೀಡಿದೆ.
* ಸೆಮಿ ಹೈ ಸ್ಪೀಡ್ ರೈಲು ಯೋಜನೆಗೆ ಕೇರಳ ಸರ್ಕಾರ ಹಾಗೂ ಜಪಾನ್ ಇಂಟರ್‌ನ್ಯಾಷನಲ್ ಕೋ ಆಪರೇಟಿವ್ ಏಜೆನ್ಸಿ ಜಂಟಿಯಾಗಿ ಕಾರ್ಯ ನಿರ್ವಹಿಸಬೇಕು ಎಂದು ಕೇಂದ್ರ ಸರ್ಕಾರವು ಕೇರಳ ರಾಜ್ಯ ಸರ್ಕಾರಕ್ಕೆ ಹೇಳಿದೆ.
* ಏನಿದು ಯೋಜನೆ? ಈ ರೈಲು ಯೋಜನೆಯಿಂದಾಗಿ 4 ಗಂಟೆಯಲ್ಲಿ 529.45 ಕಿ.ಮೀ ದೂರವನ್ನು ಕ್ರಮಿಸಬಹುದಾಗಿದೆ. ಪ್ರಸ್ತುತ ತಿರುವನಂತಪುರ ಎರ್ನಾಕುಲಂ ಕೊಚ್ಚಿ ಮಾರ್ಗದ ನಗರಗಳನ್ನು ಸೇರಲು 12 ಗಂಟೆಗಳ ಸಮಯ ಬೇಕಾಗುತ್ತೆ, ಇದೀಗ ಈ ದೂರದ ಪಯಣವನ್ನು ಸೆಮಿ ಹೈ ಸ್ಪೀಡ್ ರೈಲಿನ ಮೂಲಕ ಕೇವಲ 90 ನಿಮಿಷಗಳಲ್ಲಿ ಸೇರಬಹುದು ಎಂದು ಕೇರಳ ಸರ್ಕಾರ ಈ ಯೋಜನೆ ಬಗ್ಗೆ ಮಾಹಿತಿಯನ್ನು ನೀಡಿದೆ.

## ಭಾರತ ಅಮೇರಿಕ ಜಂಟಿ ಸಮರಾಭ್ಯಾಸ



* ಭಾರತ ಮತ್ತು ಅಮೇರಿಕಾದ ಸೇನಾ ಪಡೆಗಳು ಪಾಕಿಸ್ತಾನದ ಗಡಿಯಲ್ಲಿ ಹದಿನೈದು ದಿನಗಳ ಕಾಲ ಜಂಟಿಯಾಗಿ ಮಿಲಿಟರಿ ವ್ಯಾಯಾಮದಲ್ಲಿ ಭಾಗವಹಿಸಲಿವೆ, ಪ್ರಸ್ತುತ ಅಮೆರಿಕದ 270 ಸೈನಿಕರು ರಾಜಸ್ಥಾನದ ಸೂರತ್ ನ ಮಹಾಜನ್ ಫೀಲ್ಡ್ ಫೈರಿಂಗ್ ಶ್ರೇಣಿಗೆ ಬಂದು ತಲುಪಿದ್ದಾರೆ ಎಂಬ ಮಾಹಿತಿ ಇದೆ.
* ಭಾರತ ಮತ್ತು ಅಮೇರಿಕಾದ ಮಿಲಿಟರಿ ಪಡೆಗಳ ಸಮರಾಭ್ಯಾಸ ರಾಜಸ್ಥಾನದ ಸೂರತ್'ನ ಮರಳು ಭೂಮಿಯಲ್ಲಿ ಜಂಟಿಯಾಗಿ ನಡೆಯಲಿದೆ ಎಂದು ಭಾರತೀಯ ರಕ್ಷಣಾ ವಕ್ತಾರ ಲೆಫ್ಟಿನೆಂಟ್ ಕರ್ನಲ್ ಅಮಿತಾಬ್ ಶರ್ಮಾ ಮಾಹಿತಿಯನ್ನು ನೀಡಿದ್ದಾರೆ.
* ಈ ಜಂಟಿ ಸಮರಾಭ್ಯಾಸವು ಫೆಬ್ರುವರಿ.21ರ ವರೆಗೆ ನಡೆಯಲಿದ್ದು, ಹಾಗೂ ಇದರಲ್ಲಿ ಭಾಗವಹಿಸಲು ಜಮ್ಮು ಕಾಶ್ಮೀರದ ರೈಫಲ್ಸ್‌ನ ಸಪ್ತ ಶಕ್ತಿ ಕಮಾಂಡ್‌ನ 11ನೆ ಬೆಟಾಲಿಯನ್ ಸೈನಿಕರು ಭಾರತ ಸೇನೆಯ ಹಲವು ಸೈನಿಕರು ಕೂಡ ಭಾಗವಹಿಸಲಿದ್ದಾರೆ ಎಂದು ತಿಳಿದು ಬಂದಿದೆ.

## ಅಮೆರಿಕ ಮೂಲದ ಲಾಕ್‌ಹೀಡ್ ಮಾರ್ಟಿನ್ HAL ಜೊತೆ ಒಪ್ಪಂದ

* ಅಮೆರಿಕದ ರಕ್ಷಣಾ ಕ್ಷೇತ್ರದ ಪ್ರಮುಖ ಸಂಸ್ಥೆಯಾಗಿರುವ ಲಾಕ್‌ಹೀಡ್ ಮಾರ್ಟಿನ್ ಭಾರತದ ವೈಮಾನಿಕ ಉದ್ಯಮದ ಕ್ಷೇತ್ರದಲ್ಲಿ ಅನ್ವೇಷಿಸಲು ಹಿಂದೂಸ್ತಾನ್ ಏರೋನಾಟಿಕಲ್ಸ್ ಲಿಮಿಟೆಡ್ (HAL)ನೊಂದಿಗೆ ಒಪ್ಪಂದಕ್ಕೆ ಸಹಿ ಹಾಕಿದೆ ಎಂದು ಅಮೆರಿಕದ ರಕ್ಷಣಾ ಸಂಸ್ಥೆ ತಿಳಿಸಿದೆ.
* ಈ ಒಪ್ಪಂದದಿಂದಾಗಿ ಅಮೇರಿಕ ದೇಶವು ಭಾರತದ ಜೊತೆಗಿನ ಉದ್ಯಮ ಹಾಗೂ ಬಾಂಧವ್ಯವನ್ನು ಬಲಪಡಿಸಿಕೊಳ್ಳಲಿದೆ, ಹಾಗೂ ಇದು ಏಶ್ಯಾದ ಅತಿ ದೊಡ್ಡ ವೈಮಾನಿಕ ಕಂಪನಿಗಳಲ್ಲಿ ಒಂದಾಗಿರುವ HAL ನೊಂದಿಗೆ ಈ ಅವಕಾಶದಲ್ಲಿ ಕೆಲಸ ಮಾಡಲು ಅಮೇರಿಕ ಸಿದ್ಧವಾಗಿದೆ ಎಂದು ಲಾಕ್‌ಹೀಡ್ ಮಾರ್ಟಿನ್ ಏರೋನಾಟಿಕ್ಸ್ ಇಂಟಗ್ರೇಟೆಡ್ ಫೈಟರ್ ಗ್ರೂಪ್‌ನ ವ್ಯವಹಾರ ಅಭಿವೃದ್ಧಿಯ ಉಪಾಧ್ಯಕ್ಷ ಜೆ.ಆರ್. ಮೆಕ್‌ಡೊನಾಲ್ಡ್ ತಿಳಿಸಿದ್ದಾರೆ.
* ಹಿಂದೂಸ್ತಾನ್ ಏರೋನಾಟಿಕಲ್ಸ್ ಲಿಮಿಟೆಡ್, ಲಾಕ್ ಹೀಡ್ ಮಾರ್ಟಿನ್‌ನೊಂದಿಗೆ ದೇಶೀಯ ಹಾಗೂ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಜೊತೆಯಾಗಿ ಕಾರ್ಯ ನಿರ್ವಹಿಸಲು ಸಿದ್ಧವಾಗಿದೆ ಎಂದು HAL ಅಧ್ಯಕ್ಷ ಹಾಗೂ ಆಡಳಿತ ನಿರ್ದೇಶಕ ಆರ್. ಮಾಧವನ್ ಅಭಿಪ್ರಾಯವನ್ನು ತಿಳಿಸಿದರು.

## ರಾಷ್ಟ್ರಪತಿಗಳಿಂದ ಕೊಡಗು ವಸ್ತು ಸಂಗ್ರಾಲಯವನ್ನು ಉದ್ಘಾಟಣೆ



* ಭಾರತದ ರಾಷ್ಟ್ರಪತಿ ರಾಮನಾಥ್ ಕೋವಿಂದ್ ರವರು ಕೊಡಗಿನಲ್ಲಿ ಸೇನಾ ಪರಂಪರೆ ಮತ್ತು ದೇಶದ ಸೇನಾ ಶಕ್ತಿಯನ್ನು ಸಾರುವ ಅಪರೂಪದ ಯುದ್ಧ ಸ್ಮಾರಕವಾದ ತಿಮ್ಮಯ್ಯ ವಸ್ತು ಸಂಗ್ರಾಲಯವನ್ನು ಲೋಕಾರ್ಪಣೆಗೊಳಿಸಿ ಪ್ರವಾಸಿಗರ ವೀಕ್ಷಣೆಗೆ ಅನುವು ಮಾಡಿಕೊಟ್ಟರು.

* ಕೆ.ಎಸ್ ತಿಮ್ಮಯ್ಯನವರು ಭಾರತ ದೇಶ ಕಂಡ ಮಹಾನ್ ವೀರ ಸೈನಿಕ ಹಾಗೂ ಇವರು ಕೊಡಗಿನ ಎರಡನೇ ಜನರಲ್ ಆಗಿ ಸೇವೆ ಸಲ್ಲಿಸಿದ್ದಾರೆ.
* ಕೆ.ಎಸ್ ತಿಮ್ಮಯ್ಯನವರ ವಸ್ತು ಸಂಗ್ರಾಲಯದಲ್ಲಿ ಯುದ್ಧ ಸ್ಮಾರಕ, ಸೂಪರ್ ಸಾನಿಕ ಯುದ್ಧ ವಿಮಾನ ಮತ್ತು ಯುದ್ಧ ಟ್ಯಾಂಕರ್'ಗಳನ್ನೂ ಹಾಗೂ ತಿಮ್ಮಯ್ಯನವರ ಸೇನಾ ಜೀವನ ಚರಿತ್ರೆ ಬಿಂಬಿಸುವ ಹಲವು ವಸ್ತುಗಳನ್ನು ವೀಕ್ಷಣೆಗೆ ಇಡಲಾಗಿದೆ ಎಂದು ತಿಳಿಸಿದರು.

# 09-02-2021

## ರಿಷಭ್ ಪಂತ್‌ಗೆ 'ಐಸಿಸಿ ತಿಂಗಳ ಆಟಗಾರ' ಪ್ರಶಸ್ತಿ ಲಭಿಸಿದೆ




* ಪ್ರಸ್ತುತ ಅಂತರಾಷ್ಟ್ರೀಯ ಕ್ರಿಕೆಟ್ ಸಂಸ್ಥೆ(ICC)ಯು ಪುರುಷರ ವಿಭಾಗದ 'ತಿಂಗಳ ಆಟಗಾರ ಪ್ರಶಸ್ತಿ'ಯನ್ನು ಟೀಂ ಇಂಡಿಯಾ ವಿಕೆಟ್ ಕೀಪರ್ ಹಾಗೂ ಯಂಗ್ ಬ್ಯಾಟ್ಸ್‌ಮನ್ ಆಗಿರುವ ರಿಷಭ್ ಪಂತ್ ರವರಿಗೆ ನೀಡಲಾಗಿದೆ ಎಂದು ICC ತನ್ನ ಅಧಿಕೃತ ಟ್ವಿಟರ್ ಖಾತೆಯ ಮೂಲಕ ತಿಳಿಸಿದೆ. ಈ ಪ್ರಶಸ್ತಿ ನೀಡಲು ಕಾರಣ:
* ರಿಷಭ್ ಪಂತ್'ಅವರು ಈ ಹಿಂದೆ ಜನೇವರಿಯಲ್ಲಿ ನಡೆದ ಆಸ್ಟ್ರೇಲಿಯಾ ಭಾರತ ಟೆಸ್ಟ್ ಪಂದ್ಯಗಳಲ್ಲಿ ತೋರಿದ ಉತ್ತಮ ಪ್ರದರ್ಶನವನ್ನು ಪರಿಗಣಿಸಿ ICC ವತಿಯಿಂದ ಈ ಪ್ರಶಸ್ತಿಯನ್ನು ನೀಡಲಾಗಿದೆ.
* ಇದು ಐಸಿಸಿ ಘೋಷಿಸಿದ ತಿಂಗಳ ಪ್ರಶಸ್ತಿಯಾಗಿದ್ದು ಈ ಪ್ರಶಸ್ತಿಯನ್ನು ಪ್ರಪ್ರಥಮ ರಿಷಭ್ ಪಂತ್'ಅವರು ಪಡೆದುಕೊಂಡಿದ್ದಾರೆ.
* ಇನ್ನು ಮುಂದೆ ಐಸಿಸಿ ಪ್ರತಿ ತಿಂಗಳು ಉತ್ತಮ ಆಟಗಾರರನ್ನು ಗುರುತಿಸಿ ಈ ತಿಂಗಳ ಪ್ರಶಸ್ತಿಯನ್ನು ನೀಡಲಾಗುತ್ತದೆ ಎಂದು ತಿಳಿಸಿದೆ.
* ಐಸಿಸಿ ಘೋಷಿಸಿದ ತಿಂಗಳ ಪ್ರಶಸ್ತಿಗೆ ಭಾರತದ ರಿಷಭ್ ಪಂತ್ ಹಾಗೂ ಇಂಗ್ಲೆಂಡ್ ನಾಯಕ ಜೋ ರೂಟ್ ಜೊತೆಗೆ ಐರ್ಲೆಂಡ್‌ನ ಪೌಲ್ ಸ್ಟಿರ್ಲಿಂಗ್ ರವರ ಹೆಸರುಗಳನ್ನೂ ಆಯ್ಕೆ ಮಾಡಲಾಗಿತ್ತು ಆದರೆ ಈ ಮೂರೂ ಜನ ಆಟಗಾರರಲ್ಲಿ ರಿಷಭ್ ಪಂತ್ ಅವರಿಗೆ ಈ ಪ್ರಶಸ್ತಿ ಲಭಿಸಿದೆ.

## ಸಿಎಂ ಯಡಿಯೂರಪ್ಪನವರಿಂದ ದೇಶದಲ್ಲೇ ಮೊದಲ ಪ್ರಯೋಗ, ಮಾಡ್ಯೂಲರ್ ಐಸಿಯು ಘಟಕ ಲೋಕಾರ್ಪಣೆ



* ಕರ್ನಾಟಕ ರಾಜ್ಯದಲ್ಲಿ ಸಿಎಂ ಯಡಿಯೂರಪ್ಪನವರು ಬೆಂಗಳೂರಿನ ಮಲ್ಲೇಶ್ವರಂನ ಕೆ.ಸಿ.ಜನರಲ್ ಆಸ್ಪತ್ರೆಯಲ್ಲಿ ಅತ್ಯಾಧುನಿಕ ಮಾಡ್ಯೂಲರ್ ಐಸಿಯು ಘಟಕವನ್ನು ಲೋಕಾರ್ಪಣೆಗೊಳಿಸಿದರು.
* ಈ ಮಾಡ್ಯೂಲರ್ ಐಸಿಯು ಘಟಕದಿಂದಾಗಿ ಕೋವಿಡ್ 19 ಸಂಕಷ್ಟ ಪರಿಸ್ಥಿತಿ ಮತ್ತು ಇತರೆ ತುರ್ತು ಪರಿಸ್ಥಿತಿಗಳಲ್ಲಿ ಉತ್ತಮವಾಗಿ ಬಳಕೆ ಮಾಡಿಕೊಳ್ಳಲು ಈ ಘಟಕ ಸಹಾಯಕಾರಿಯಾಗುತ್ತದೆ ಎಂದು ತಿಳಿಸಿದರು. ಈ ಮಾಡ್ಯೂಲರ್ ಐಸಿಯು ಘಟಕ ವಿಶೇಷತೆ:
* ಕೆ.ಸಿ.ಜನರಲ್ ಆಸ್ಪತ್ರೆಯಲ್ಲಿ ಈ ಐಸಿಯು ಘಟಕವು ಕೇವಲ 3ತಿಂಗಳ ಕಾಲಾವಕಾಶದಲ್ಲಿ ಸ್ಥಾಪಿಸಲಾಗಿದೆ, ಹಾಗೂ ಇದು 100 ಹಾಸಿಗೆಗಳ ಐಸಿಯು ಘಟಕವನ್ನು ಹೊಂದಿದೆ.
* ಪ್ರಸ್ತುತ ಕೆ.ಸಿ ಜನರಲ್ ಆಸ್ಪತ್ರೆಯಲ್ಲಿ 2,100ಕ್ಕೂ ಹೆಚ್ಚು ಕೋವಿಡ್ ರೋಗಿಗಳಿಗೆ ಚಿಕಿತ್ಸೆ ನೀಡಲಾಗಿದೆ ಹಾಗೂ ಕರ್ನಾಟಕ ರಾಜ್ಯವು ಕೋವಿಡ್ ಲಸಿಕೆ ನೀಡುವದರಲ್ಲಿ ಮುಂದೆ ಇದೆ ಎಂದು ತಿಳಿಸಿದ್ದಾರೆ.
* ಕಂಟೇನರ್ ಮಾದರಿ ಐಸಿಯುಗಳನ್ನು ತಯಾರಿಸಲಾಗಿದೆ, ಒಟ್ಟು 100 ಹಾಸಿಗೆಗಳು ಸಾರ್ವಜನಿಕರ ಬಳಕೆಗೆ ಲಭ್ಯ ಇರುತ್ತವೆ.
* ಈ 100 ಹಾಸಿಗೆಗಳ ಐಸಿಯು ಘಟಕದಲ್ಲಿ ಕೆಲಸ ಮಾಡಲು ತಜ್ಞ ವೈದ್ಯರು, ಅರೆವೈದ್ಯ ಸಿಬ್ಬಂದಿ, ನರ್ಸ್‌ಗಳು ಸೇರಿ ಒಟ್ಟಾರೆ 150 ಮಂದಿ ಸಿಬ್ಬಂದಿಗಳನ್ನೂ ನಿಯೋಜನೆ ಮಾಡಲಾಗಿದೆ.
* ಬೆಂಗಳೂರು ಮೂಲದ "ರಿನ್ಯಾಕ್" ಎಂಬ ಕಂಪನಿಯು, ಶಸ್ತ್ರಚಿಕಿತ್ಸಾ ಘಟಕ ಹಾಗೂ ಕ್ಲೀನ್ ರೂಮುಗಳನ್ನು ಒಳಗೊಂಡ ಮಾಡ್ಯೂಲರ್ ಐಸಿಯು ಘಟಕವನ್ನು ತಯಾರಿಸಿದೆ.

## ರಾಜ್ಯ ಸರ್ಕಾರದಿಂದ ವಿಜಯನಗರ ಜಿಲ್ಲೆಗೆ ಅಧಿಕೃತ ಅಧಿಸೂಚನೆ ಪ್ರಕಟ




* ಕರ್ನಾಟಕ ರಾಜ್ಯದ 31ನೇ ಜಿಲ್ಲೆಯಾಗಿ ವಿಜಯನಗರ ಜಿಲ್ಲೆಯನ್ನು ರಾಜ್ಯ ಸರ್ಕಾರ ಅಧಿಕೃತವಾಗಿ ಅಧಿಸೂಚನೆಯನ್ನು ಪ್ರಕಟಿಸಿದೆ.
* ರಾಜ್ಯ ಸರ್ಕಾರವು ಪ್ರಸ್ತುತ ಬಳ್ಳಾರಿ ಜಿಲ್ಲೆಯನ್ನು ವಿಂಗಡಿಸಿ ಹೊಸದಾಗಿ ವಿಜಯನಗರ ಜಿಲ್ಲೆಯನ್ನು ರಚಿಸಲಾಗಿದೆ ಎಂದು ತಿಳಿಸಿದೆ.
* ಪ್ರಸ್ತುತ ಹೊಸದಾಗಿ ರಚನೆಯಾಗಿರುವ ವಿಜಯನಗರ

ಜಿಲ್ಲೆಯು ಆರು ತಾಲೂಕುಗಳನ್ನೂ ಒಳಗೊಂಡಿದೆ.
* ಪ್ರಸ್ತುತ ವಿಜಯನಗರ ಜಿಲ್ಲೆಗೆ ಜಿಲ್ಲಾಕೇಂದ್ರವಾಗಿ ಹೊಸಪೇಟೆಯನ್ನು ಆಯ್ಕೆ ಮಾಡಲಾಗಿದೆ. 6 ತಾಲೂಕುಗಳು ಇಂತಿವೆ:
* ಹೊಸಪೇಟೆ, ಕೂಡ್ಲಿಗಿ, ಹಗರಿಬೊಮ್ಮನಹಳ್ಳಿ, ಕೊಟ್ಟೂರು, ಹೂವಿನಹಡಗಲಿ, ಮತ್ತು ಹರಪನಹಳ್ಳಿ ಈ 6ತಾಲೂಕುಗಳು ವಿಜಯನಗರ ಜಿಲ್ಲೆಯು ಆಡಳಿತದಲ್ಲಿ ಬರಲಿವೆ.
* ಈ ವಿಜಯನಗರ ಜಿಲ್ಲೆಯು ಹೈದರಾಬಾದ್ ಕರ್ನಾಟಕ ಪ್ರದೇಶದ ಈಶಾನ್ಯ ಭಾಗದಲ್ಲಿದೆ. ಈ ಜಿಲ್ಲೆಯನ್ನು 2020ರಲ್ಲಿ ಬಳ್ಳಾರಿ ಜಿಲ್ಲೆಯಿಂದ ಬೇರ್ಪಡಿಸಲಾಗಿದೆ, ಪ್ರಸ್ತುತ ಇದು ರಾಜ್ಯದ 31 ನೇ ಜಿಲ್ಲೆಯಾಗಿದೆ.
* ವಿಜಯನಗರ ಜಿಲ್ಲೆ ಸ್ಥಾಪನೆ ದಿನಾಂಕ: 18 ನವೆಂಬರ್ 2020

## ಆಫ್ರಿಕನ್ ಮೂಲದ ಮಹಿಳೆ ವಿಶ್ವ ವಾಣಿಜ್ಯ ಸಂಸ್ಥೆಯ ಮುಖ್ಯಸ್ಥೆ



* ಇತಿಹಾಸದಲ್ಲೇ ಇದೆ ಮೊದಲ ಬಾರಿಗೆ ವಿಶ್ವ ವಾಣಿಜ್ಯ ಸಂಸ್ಥೆಯ ನೂತನ ಮಹಾ ನಿರ್ದೇಶಕರಾಗಿ ಆಫ್ರಿಕನ್ ಮೂಲದ ಮಹಿಳೆ ನೈಜೀರಿಯಾದ 'ಎನ್ ಗೋಜಿ ಒಕೊಂಜೊ ಇವೇಲಾ' ಇವರನ್ನು ಆಯ್ಕೆಮಾಡಲಾಗುತ್ತದೆ ಎಂದು ತಿಳಿದು ಬಂದಿದೆ.
* ಈ ಆಫ್ರಿಕನ್ ಮೂಲದ ಮಹಿಳೆ ಆಯ್ಕೆಯಾದರೆ ಮುಂದಿನ ನಾಲ್ಕು ವರ್ಷದ ಅವಧಿಗೆ ವಿಶ್ವ ಆರ್ಥಿಕ ವೇದಿಕೆಯ (WTO) ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಲಿದ್ದಾರೆ ಎಂದು ತಿಳಿಸಲಾಗಿದೆ.
* ಈ ಮೊದಲು ಇವರು ವಿಶ್ವಬ್ಯಾಂಕ್‌ನ ಕಾರ್ಯನಿರ್ವಾಹಕ ನಿರ್ದೇಶಕಿಯಾಗಿ ಸೇವೆ ಸಲ್ಲಿಸಿದ್ದಾರೆ, ಹಾಗೂ WTO ಸಾಮಾನ್ಯ ಮಂಡಳಿಯ ಅಧ್ಯಕ್ಷೆಯಾಗಿ ಕೆಲಸ ನಿರ್ವಹಿಸಿದ್ದಾರೆ.
* ಪ್ರಸ್ತುತ ಅಮೆರಿಕ ಹಾಗೂ WTO ನ 164 ಸದಸ್ಯ ರಾಷ್ಟ್ರಗಳು ಆಫ್ರಿಕನ್ ಮೂಲದ ಮಹಿಳೆ ಆಯ್ಕೆಗೆ ಒಪ್ಪಿಗೆಯನ್ನು ನೀಡಿದ್ದು, ಈ ಎಲ್ಲ ರಾಷ್ಟ್ರಗಳ ಅನುಮತಿಯ ಮೇರೆಗೆ ನೈಜೀರಿಯಾದ ಮಾಜಿ ಹಣಕಾಸು ಸಚಿವೆಯನ್ನು ಈ ಹುದ್ದೆಗೆ ಆಯ್ಕೆ ಮಾಡಲು ತೀರ್ಮಾನಿಸಿದೆ ಎನ್ನಲಾಗಿದೆ.

## ಭಾರತದ 'ವರ್ಷದ ಮಹಿಳಾ ಕ್ರೀಡಾಪಟು' ಪ್ರಶಸ್ತಿಗೆ ನಾಮನಿರ್ದೇಶನ




* ಭಾರತದ ವರ್ಷದ ಮಹಿಳಾ ಕ್ರೀಡಾಪಟು ಪ್ರಶಸ್ತಿಗೆ ಹಲವರು ನಾಮನಿರ್ದೇಶನಗೊಂಡಿದ್ದಾರೆ, ಈ ಪ್ರಶಸ್ತಿ ವಿಜೇತರನ್ನು ಅಂತರರಾಷ್ಟ್ರೀಯ ಮಹಿಳಾ ದಿನವಾದ ಮಾರ್ಚ್ 8ರಂದು ಘೋಷಣೆ ಮಾಡಿ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುತ್ತದೆ. ನಾಮನಿರ್ದೇಶನಗೊಂಡವರ ವಿವರ:
* ಭಾರತ ಹಾಕಿ ತಂಡದ ನಾಯಕಿ ರಾಣಿ ರಾಂಪಾಲ್, ಹಾಗೂ ಚೆಸ್ ತಾರೆ ಕೊನೇರು ಹಂಪಿ ಮತ್ತು ಯುವ ಶೂಟಿಂಗ್ ತಾರೆ ಮನು ಭಾಕರ್'ರವರು BBC ಆಯ್ಕೆ ಮಾಡುವ ಭಾರತದ ವರ್ಷದ ಮಹಿಳಾ ಕ್ರೀಡಾಪಟು ಪ್ರಶಸ್ತಿಗೆ ನಾಮನಿರ್ದೇಶನಗೊಂಡಿದ್ದಾರೆ.
* ಕುಸ್ತಿ ಪಟು ವಿನೇಶಾ ಫೋಗಟ್ ಹಾಗೂ ದ್ಯುತಿ ಚಾಂದ್ ಕೂಡ ಈ ಪ್ರಶಸ್ತಿ ಪಡೆಯುವ ಸ್ಪರ್ಧೆಯಲ್ಲಿದ್ದಾರೆ. ಪ್ರಶಸ್ತಿ ನೀಡುವ ವಿಧಾನ: * ಭಾರತದ ವರ್ಷದ ಮಹಿಳಾ ಕ್ರೀಡಾಪಟು' ಪ್ರಶಸ್ತಿಯನ್ನು ಪಡೆಯಲು ನಾಮನಿರ್ದೇಶನಗೊಂಡಿರುವ ಕ್ರೀಡಾಪಟುಗಳನ್ನು ವೋಟಿಂಗ್ ಮಾಡುವ ಮೂಲಕ ಆಯ್ಕೆ ಮಾಡಿ ಪ್ರಶಸ್ತಿ ನೀಡಲಾಗುತ್ತದೆ, ಪ್ರಸ್ತುತ ಈ ಕ್ರೀಡಾಪಟು ಅಭಿಮಾನಿಗಳಿಗೆ ಫೆಬ್ರುವರಿ 24ರವರೆಗೆ ವೋಟಿಂಗ್ ಮಾಡಲು ಅವಕಾಶ ನೀಡಲಾಗಿದೆ.
* ಬಿಬಿಸಿಯು ಈ ಸಾರಿ ಹೊಸ ಪ್ರಶಸ್ತಿಯನ್ನು ನೀಡಲು ನಿರ್ಧರಿಸಿದ್ದು, ಅದುವೇ 'ವರ್ಷದ ಉದಯೋನ್ಮುಖ ಕ್ರೀಡಾಪಟು' ಎಂಬ ಪ್ರಶಸ್ತಿ, ಇದನ್ನು ಬಿಬಿಸಿಯು ನೀಡುತ್ತದೆ ಈ ಪ್ರಶಸ್ತಿ ಆಯ್ಕೆಗೆ ಯಾವುದೇ ರೀತಿಯ ವೋಟಿಂಗ್ ಇರುವುದಿಲ್ಲ ಎಂದು ಬಿಬಿಸಿ ತಿಳಿಸಿದೆ, ಅದರ ಬದಲಾಗಿ ಆಯ್ಕೆ ಮಾಡಲು ಸಮಿತಿಯನ್ನು ರಚಿಸಲಾಗಿದೆ ಎಂದು ತಿಳಿದು ಬಂದಿದೆ.

# 10-02-2021

## ಉತ್ತರಾಖಂಡ ರಾಜ್ಯದ ಸಿಎಂ ಪರಿಹಾರ ನಿಧಿಗೆ ₹11 ಕೋಟಿ ರೂ. ನೀಡಿದ ಹರಿಯಾಣ ಸರ್ಕಾರ



* ಉತ್ತರಾಖಂಡ ರಾಜ್ಯದಲ್ಲಿ ಉಂಟಾದ ಹಿಮನದಿ ಸ್ಫೋಟದಿಂದ ಹಲವು ಸಾವು, ನೋವು ಹಾಗು ಆಸ್ತಿ ಹಾನಿಯನ್ನು ಅರಿತು ಹರಿಯಾಣ ಸರ್ಕಾರದ ಮುಖ್ಯಮಂತ್ರಿಯಾಗಿರುವ ಮನೋಹರ್ ಲಾಲ್ ಖಟ್ಟರ್ ಅವರು ಹರಿಯಾಣ ಸಿಎಂ ಪರಿಹಾರ ನಿಧಿಯಿಂದ ಉತ್ತರಾಖಂಡ ರಾಜ್ಯ ವಿಪತ್ತು ಪರಿಹಾರ ನಿಧಿಗೆ 11ಕೋಟಿ ರೂ.ಗಳನ್ನೂ ನೀಡಿದ್ದಾರೆ, ಇದರಿಂದ ಉತ್ತರಾಖಂಡ ರಾಜ್ಯದ ಜನರಿಗೆ ಅನುಕೂಲವಾಗಲಿದೆ ಎಂದು ತಿಳಿಸಿದ್ದಾರೆ.

## ರಾಜಸ್ಥಾನ ಸರ್ಕಾರದಿಂದ 14,000 ಕೋಟಿ ರೂ.ಗಳ ಕೃಷಿ ಸಾಲ ಮನ್ನಾ ಸಿಎಂ ಅಶೋಕ ಗೆಹ್ಲೋಟ್



* ರಾಜಸ್ಥಾನ ಸರ್ಕಾರವು ರಾಜ್ಯದಲ್ಲಿನ ರೈತರ 14,000 ಕೋಟಿ ರೂ.ಗಳ ಕೃಷಿ ಸಾಲ ಮನ್ನಾ ಮಾಡಿದೆ ಎಂದು ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹ್ಲೋಟ್'ರವರು ಮಾಹಿತಿ ನೀಡಿದ್ದಾರೆ.
* ರಾಜಸ್ಥಾನ ಸರ್ಕಾರವು ರೈತರ ಸಾಲ ಮನ್ನಾ ಮಾಡುವಲ್ಲಿ ವಿಫಲವಾಗಿದೆ ಎಂದು ಈ ಹಿಂದೆ ಬಿಜೆಪಿ ಸರ್ಕಾರವು ಆರೋಪ ಮಾಡಿತ್ತು ಇದೀಗ ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹ್ಲೋಟ್'ರವರು ರೈತರ ಸಾಲ ಮನ್ನಾ ಆಗಿದೆ ಎಂಬ ಸ್ಪಷ್ಟ ಮಾಹಿತಿಯನ್ನು ನೀಡಿದ್ದಾರೆ.

## ಭಾಷಾ ಭಾರತ ಬಲಿಷ್ಠ ಭಾರತ 2020 21 : ಎರಡು ದಿನಗಳ ದುಂಡು ಮೇಜಿನ ಸಭೆ




* ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಬೆಂಗಳೂರಿನಲ್ಲಿ 'ಭಾಷಾ ಭಾರತ ಬಲಿಷ್ಠ ಭಾರತ' ಎನ್ನುವ 2 ದಿನಗಳ ದುಂಡು ಮೇಜಿನ ಸಭೆಯನ್ನು ನಡೆಸಿತು. ಈ ಕಾರ್ಯಕ್ರಮವನ್ನು ಕೇಂದ್ರ ರಾಸಾಯನಿಕ ಮತ್ತು ಗೊಬ್ಬರ ಖಾತೆಯ ಸಚಿವರಾಗಿರುವ ಡಿ.ವಿ.ಸದಾನಂದಗೌಡರು ವಿಡಿಯೋ ಕಾನ್ಫರನ್ಸ್ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ದುಂಡು ಮೇಜಿನ ಸಭೆಯ ವಿವರ:
* 'ಭಾಷಾ ಭಾರತ ಬಲಿಷ್ಠ ಭಾರತ' ಎಂಬ ಎರಡು ದಿನಗಳ ರಾಷ್ಟ್ರೀಯ ದುಂಡು ಮೇಜಿನ ಸಭೆಯನ್ನು, ಭಾಷಾ ಸಮಾನತೆ ಮತ್ತು ಹಕ್ಕುಗಳು ಸಂಸ್ಥೆಯೊಂದಿಗೆ ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಆಯೋಜಿಸಿ ಕಾರ್ಯಕ್ರಮವನ್ನು ನಡೆಸಿದೆ.
* ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಟಿ. ಎಸ್. ನಾಗಾಭರಣರವರು ದುಂಡು ಮೇಜಿನ ಸಭೆಯ ಅಧ್ಯಕ್ಷತೆ ವಹಿಸಿಕೊಂಡು ಚಾಲನೆ ನೀಡಿದರು.
* ಈ ದುಂಡು ಮೇಜಿನ ಸಭೆಯಲ್ಲಿ ದೇಶದ ಬೇರೆ ಬೇರೆ ರಾಜ್ಯಗಳ ಭಾಷೆಗಳ 17 ಪ್ರತಿನಿಧಿಗಳು ಭಾಗವಹಿಸಿದ್ದರು.
* ಭಾರತ ದೇಶವು ಸ್ವಾತಂತ್ರ್ಯ ನಂತರ 1956 ರಲ್ಲಿ ಭಾಷಾಧಾರಿತವಾಗಿ ರಾಜ್ಯಗಳನ್ನು ವಿಂಗಡಿಸಿದೆ.
* ಭಾರತದ ಸಂವಿಧಾನದ 8ನೇ ಅನುಸೂಚಿಯಲ್ಲಿ ಪಟ್ಟಿ ಮಾಡಲಾದ ಭಾಷೆಗಳಿಗೆ ಸಮಾನ ಸ್ಥಾನಮಾನ ನೀಡಬೇಕು, ಇಲ್ಲದಿದ್ದರೆ ದೇಶದ ಗೌರವಕ್ಕೆ ಧಕ್ಕೆ ತರುವಂತಿದೆ ಎಂದು ಈ ಸಭೆಯಲ್ಲಿ ಹೇಳಲಾಗಿದೆ. ಈ ದುಂಡು ಮೇಜಿನ ಸಭೆಯಲ್ಲಿ ಈ ಹಲವು ವಿಷಯಗಳನ್ನು ಚರ್ಚೆಮಾಡಲಾಗಿದೆ.
* ಭಾರತದ ಸಂವಿಧಾನದ 8ನೇ ಅನುಸೂಚಿಯಲ್ಲಿ ಪಟ್ಟಿ ಮಾಡಿರುವ ಎಲ್ಲಾ ಭಾಷೆಗಳಿಗೂ ಸಮಾನ ಸ್ಥಾನಮಾನ ಮತ್ತು ಗೌರವ ಒದಗಿಸಿಕೊಡುವದು.
* ಭಾರತೀಯ ಸಂವಿಧಾನಕ್ಕೆ ಅಗತ್ಯವಿರುವ ತಿದ್ದುಪಡಿಗಳನ್ನು ಜಾರಿ ತರುವದು.
* ಒಕ್ಕೂಟದಲ್ಲಿನ ರಾಜ್ಯಗಳು ತಮ್ಮ ಆಡಳಿತ ಭಾಷೆಗಳನ್ನಷ್ಟೇ ಅಲ್ಲದೆ ರಾಜ್ಯದ ಉಳಿದ ಸ್ಥಳೀಯ ಭಾಷೆಗಳಿಗೂ ಮಾನ್ಯತೆ ಮತ್ತು ಸಮಾನ ಸ್ಥಾನಮಾನ ನೀಡಬೇಕು, ಈ ವಿಷಯಗಳ ಚರ್ಚೆಯನ್ನು ಮಾಡಲಾಯಿತು.

## ಬಾಲಿವುಡ್ ನಟ ರಾಜೀವ್ ಕಪೂರ್ ನಿಧನ



* ಖ್ಯಾತ ಬಾಲಿವುಡ್ ನಟ ರಾಜೀವ್ ಕಪೂರ್ ಅವರು ತಮ್ಮ 58ನೇ ವಯಸ್ಸಿನಲ್ಲಿ ಹೃದಯಾಘಾತದಿಂದಾಗಿ ವಿಧಿವಶರಾಗಿದ್ದಾರೆ. ರಾಜೀವ್ ಕಪೂರ್ ಭಾರತೀಯ ಚಲನಚಿತ್ರ ನಟ, ನಿರ್ಮಾಪಕ, ನಿರ್ದೇಶಕ ಹಾಗೂ ಕಪೂರ್ ಕುಟುಂಬದ ಸದಸ್ಯರಾಗಿದ್ದರು.
* ರಾಜೀವ್ ಕಪೂರ್ ಅವರು 25 ಆಗಸ್ಟ್ 1962, ಮುಂಬೈನಲ್ಲಿ ಜನಿಸಿದರು, ಹಾಗೂ 1983ರಲ್ಲಿ ಮೊದಲ ಬಾರಿಗೆ 'ಏಕ್ ಜಾನ್ ಹೈನ್ ಹಮ್' ಚಿತ್ರದ ಮೂಲಕ ಬಾಲಿವುಡ್ ಸಿನಿ ರಂಗಕ್ಕೆ ಪಾದಾರ್ಪಣೆ ಮಾಡಿದರು, ಹಾಗೂ ಇವರು ರಾಮ್ ತೇರಿ ಗಂಗಾ ಮೈಲಿ ಸಿನಿಮಾದಲ್ಲಿ ಮೊದಲ ಬಾರಿ ನಾಯಕನಾಗಿ ತೆರೆಯಮೇಲೆ ಅಭಿನಯಿಸಿದ್ದರು.

## ಅಮೆರಿಕದ 'ಜಾಗತಿಕ ಪೌರತ್ವ ರಾಯಭಾರಿ' ಯಾಗಿ ಭಾರತದ ರವಿಶಂಕರ್ ಗುರೂಜಿ



* ಅಮೆರಿಕದ ಟಾಪ್ 50 ವಿಶ್ವವಿದ್ಯಾಲಯಗಳಲ್ಲಿ ಒಂದಾದ ನಾರ್ತ್ಈಸ್ಟರ್ನ್ ಯುನಿವರ್ಸಿಟಿ ಸೆಂಟರ್ ವಿಶ್ವವಿದ್ಯಾಲಯ, ಜಾಗತಿಕ ಪೌರತ್ವ ರಾಯಭಾರಿಯನ್ನಾಗಿ ಭಾರತದ ಆಧ್ಯಾತ್ಮಿಕ ಗುರು ರವಿಶಂಕರ್ ಗುರೂಜಿ ಅವರನ್ನು ನೇಮಿಸಿದೆ, ಎಂದು ವಿಶ್ವವಿದ್ಯಾಲಯದ ಕಾರ್ಯಕಾರಿ ನಿರ್ದೇಶಕ ಮತ್ತು ಮುಖ್ಯ ಆಧ್ಯಾತ್ಮಿಕ ಸಲಹೆಗಾರ ಅಲೆಕ್ಸಾಂಡರ್ ಲೆವೆರಿಂಗ್ ಕೆರ್ನ್ ತಿಳಿಸಿದ್ದಾರೆ.
* ಈ ಗೌರವವನ್ನು ಶಾಂತಿ ಕಾರ್ಯ, ಮಾನವೀಯ ಚಟುವಟಿಕೆಗಳು, ಅಧ್ಯಾತ್ಮ ಶಿಕ್ಷಣ ನಾಯಕರಾಗಿ ರವಿಶಂಕರ್ ಅವರ ಕೊಡುಗೆಗೆ ಪರಿಗಣಿಸಿ ಜಾಗತಿಕ ಪೌರತ್ವ ರಾಯಭಾರಿ ಗೌರವವನ್ನು ನೀಡಲಾಗಿದೆ ಎಂದು ತಿಳಿಸಿದ್ದಾರೆ.

* ಜಾಗತಿಕ ಪೌರತ್ವ ಉದ್ಘಾಟನಾ ರಾಯಭಾರಿಯನ್ನಾಗಿ ರವಿಶಂಕರ್ ಗುರೂಜಿಯವರನ್ನು ಗೌರವಿಸಿದೆ ಎಂದು ಆಧ್ಯಾತ್ಮಿಕತೆ, ಮಾತುಕತೆ ಮತ್ತು ಸೇವೆಗಳ ನಾರ್ತ್ ಈಸ್ಟರ್ನ್ ಯುನಿವರ್ಸಿಟಿ ಸೆಂಟರ್ ತಿಳಿಸಿದೆ.

## ವಿಧಾನ ಪರಿಷತ್ ನೂತನ ಸಭಾಪತಿಯಾಗಿ ಬಸವರಾಜ ಹೊರಟ್ಟಿ ಆಯ್ಕೆ



* ಬಿಜೆಪಿ ಹಾಗೂ ಜೆಡಿಎಸ್ ಬೆಂಬಲಿತ ಅಭ್ಯರ್ಥಿ ಬಸವರಾಜ್ ಹೊರಟ್ಟಿ ವಿಧಾನ ಪರಿಷತ್ ಸಭಾಪತಿಯಾಗಿ ಅವಿರೋಧವಾಗಿ ಆಯ್ಕೆಯಾಗಿದ್ದು, ಉಪಸಭಾಪತಿ ಎಂ.ಕೆ. ಪ್ರಾಣೇಶ್ ಅವರು ನೇಮಕಗೊಂಡಿದ್ದಾರೆ.
* ಈ ಮೊದಲು ವಿಧಾನ ಪರಿಷತ್ ಸಭಾಪತಿ ಪ್ರತಾಪ್ ಚಂದ್ರ ಶೆಟ್ಟಿಯವರಿದ್ದರು, ಅವರು ಸಭಾಪತಿ ಸ್ಥಾನಕ್ಕೆ ರಾಜೀನಾಮೆ ನೀಡಿರುವ ಕಾರಣದಿಂದ ಸಭಾಪತಿ ಸ್ಥಾನಕ್ಕೆ ಚುನಾವಣೆ ನಡೆಸಲಾಗಿತ್ತು ಅದರಲ್ಲಿ ಅವಿರೋಧವಾಗಿ ಬಸವರಾಜ್ ಹೊರಟ್ಟಿ ಆಯ್ಕೆಯಾಗಿದ್ದಾರೆ.
* ಕಾಂಗ್ರೆಸ್ ಅಭ್ಯರ್ಥಿಯಾಗಿ ನಜೀರ್ ಅಹ್ಮದ್ ರವರು ಸಭಾಪತಿ ಸ್ಥಾನಕ್ಕೆ ನಾಮಪತ್ರ ಸಲ್ಲಿಸಿದ್ದರು, ಆದರೆ ಕಾಂಗ್ರೆಸ್ ಸದಸ್ಯರು ಜಾನುವಾರು ಹತ್ಯೆ ನಿಷೇಧ ಕಾಯ್ದೆ ಜಾರಿಯ ವಿರುದ್ಧ ಧರಣಿ ಮುಂದುವರಸಿದ್ದರಿಂದಾಗಿ ಕಾಂಗ್ರೆಸ್ ಸದಸ್ಯರು ಸಭಾಪತಿ ಚುನಾವಣೆಯಿಂದ ದೂರ ಉಳಿದುಕೊಂಡ ಕಾರಣದಿಂದಾಗಿ ಬಸವರಾಜ ಹೊರಟ್ಟಿ ಅವರನ್ನು ನೂತನ ಸಭಾಪತಿಯಾಗಿ ಆಯ್ಕೆ ಮಾಡಲಾಗಿದೆ ಎಂದು ಉಪ ಸಭಾಪತಿ ಎಂ.ಕೆ. ಪ್ರಾಣೇಶ್ ಮಾಹಿತಿ ನೀಡಿದ್ದಾರೆ.
* ಬಸವರಾಜ್ ಹೊರಟ್ಟಿಯವರು ಜೆಡಿಎಸ್'ನ MLC ಯಾಗಿದ್ದು, ಇವರು 21 ಜೂನ್ 2018 ರಿಂದ 12 ಡಿಸೆಂಬರ್ 2018 ರವರೆಗೆ ಕರ್ನಾಟಕ ವಿಧಾನ ಪರಿಷತ್ತಿನ ಅಧ್ಯಕ್ಷರಾಗಿಯೂ ಸೇವೆಸಲ್ಲಿಸಿದ್ದಾರೆ.

## LPG ಗ್ಯಾಸ್ ಸಿಲಿಂಡರ್'ಗಳಿಗೆ ವ್ಯಾಲಿಡಿಟಿ ಇರೋದಿಲ್ಲ



* ಎಲ್ ಪಿಜಿ(LPG) ಗ್ಯಾಸ್ ಸಿಲಿಂಡರ್'ಗಳಿಗೆ ಕೊನೆಯ ದಿನಾಂಕ ಇರೋದಿಲ್ಲ ಎಂದು ಇಂಡಿಯನ್ ಆಯಿಲ್ ಕಾರ್ಪೋರೇಶನ್(IOC) ಸ್ಪಷ್ಟನೆಯನ್ನು ನೀಡಿದೆ.
* ಪ್ರತಿ ವರ್ಷ ಗ್ಯಾಸ್ ಸಿಲಿಂಡರ್'ಗಳ ಬಗ್ಗೆ ಹರಡುತ್ತಿರುವ ಸುಳ್ಳು ಸುದ್ದಿಗಳಿಂದ ಗ್ರಾಹಕರಲ್ಲಿ ಆತಂಕವನ್ನು ಸೃಷ್ಟಿಸಿದ್ದವು, ಆದರೆ ಇದೀಗ ತೈಲ ಕಂಪನಿಗಳು ಸಿಲಿಂಡರ್ ಗಳಿಗೆ ಕೊನೆಯ ದಿನಾಂಕ ಇರೋದಿಲ್ಲ ಎಂದು ಸ್ಪಷ್ಟನೆ ನೀಡಿದೆ. ಈ ಗ್ಯಾಸ್ ಸಿಲಿಂಡರ್'ಗಳಿಗೆ ಕಡ್ಡಾಯ ಪರೀಕ್ಷೆಗಳ ದಿನಾಂಕವನ್ನು ಮಾತ್ರ ಮುದ್ರಿಸಲಾಗುತ್ತದೆ ಎಂದು IOC ತಿಳಿಸಿದೆ. ಗ್ಯಾಸ್ ಸಿಲಿಂಡರ್'ಗಳ ಮಾಹಿತಿ:
* ಸಾಮಾನ್ಯವಾಗಿ ಗ್ಯಾಸ್ ಸಿಲಿಂಡರ್'ಗಳು 15 ವರ್ಷಗಳ ಜೀವಿತಾವಧಿಯನ್ನು ಹೊಂದಿರುತ್ತದೆ, ಹಾಗೂ ಅವುಗಳಿಗೆ ಎರಡು ಬಾರಿ ಕಡ್ಡಾಯ ಪರೀಕ್ಷೆಗಳನ್ನು ನಡೆಸಲಾಗುತ್ತದೆ ಎಂದು ಇಂಡಿಯನ್ ಆಯಿಲ್ ಕಾರ್ಪೋರೇಶನ್ ಮಾಹಿತಿಯನ್ನು ನೀಡಿದೆ.
* ಸಿಲಿಂಡರ್'ಗಳನ್ನೂ ಹೈಡ್ರೋ ಟೆಸ್ಟ್ ಮತ್ತು ನ್ಯೂಮ್ಯಾಟಿಕ್ ಟೆಸ್ಟ್ ನೊಂದಿಗೆ ಪರೀಕ್ಷೆ ಮಾಡಲಾಗುತ್ತದೆ, ಈ ಎರಡೂ ಪರೀಕ್ಷೆಗಳಲ್ಲಿ ಸಿಲಿಂಡರ್ ವಿಫಲವಾದರೆ ಅಂತಹ ಗ್ಯಾಸ್ ಸಿಲಿಂಡರ್'ಗಳನ್ನೂ ಬಳಕೆಗೆ ರದ್ದುಮಾಡಲಾಗುತ್ತದೆ ಎಂದು ಇಂಡಿಯನ್ ಆಯಿಲ್ ಕಾರ್ಪೋರೇಶನ್ ಮಾಹಿತಿಯನ್ನು ನೀಡಿದೆ.

# 11-02-2021

## ಅಸ್ಸಾಂ ಸರ್ಕಾರದಿಂದ ಅಥ್ಲೀಟ್ ಹಿಮಾದಾಸ್‌ಗೆ ಗೌರವ




* ಅಸ್ಸಾಂ ಮುಖ್ಯಮಂತ್ರಿಯಾಗಿರುವ ಸರ್ವಾನಂದ ಸೋನೊವಾಲ್ ನೇತೃತ್ವದ ಸಚಿವ ಸಂಪುಟ ಸಭೆಯು ಭಾರತದ ಹೆಮ್ಮೆಯ ವೇಗದ ಓಟಗಾರ್ತಿ ಮತ್ತು ಧಿಂಗ್ ಎಕ್ಸ್‌ಪ್ರೆಸ್ ಎಂದೇ ಪ್ರಖ್ಯಾತಿ ಪಡೆದಿರುವ ಹಿಮಾದಾಸ್ ಅವರನ್ನು ಅಸ್ಸಾಂ ರಾಜ್ಯ ಪೊಲೀಸ್ ಇಲಾಖೆಯಲ್ಲಿ ಪೊಲೀಸ್ ಉಪ ಅಧೀಕ್ಷಕ (DYSP) ಆಗಿ ನೇಮಕ ಮಾಡಿಕೊಳ್ಳಲು ನಿರ್ಧರಿಸಿದೆ ಎಂದು ಅಸ್ಸಾಂ ಸರ್ಕಾರ ತಿಳಿಸಿದೆ.
* ಇತ್ತೀಚಿಗೆ ಅಸ್ಸಾಂ ಸರ್ಕಾರವು ಸಮಗ್ರ ಕ್ರೀಡಾನೀತಿಯ ತಿದ್ದುಪಡಿ ಮಾಡುವ ನಿರ್ಧಾರವನ್ನು ಹೊಂದಿದೆ ಎಂದು ಮುಖ್ಯಮಂತ್ರಿಯಾಗಿರುವ ಸರ್ವಾನಂದ ಸೋನೊವಾಲ್ ನೇತೃತ್ವದ ಸಚಿವ ಸಂಪುಟ ಸಭೆ ಅಂಗೀಕರಿಸಿದ್ದು, ಇದರಿಂದ ಕ್ರೀಡಾಪಟುಗಳನ್ನು ಕ್ಲಾಸ್ 1 ಹಾಗೂ ಕ್ಲಾಸ್ 2 ಅಧಿಕಾರಿಗಳಾಗಿ ಪೊಲೀಸ್, ಅಬಕಾರಿ, ಸಾರಿಗೆ ಹೀಗೆ ಹಲವು ಇಲಾಖೆಗಳಲ್ಲಿ ನೇಮಕ ಮಾಡಿಕೊಳ್ಳಲಾಗುತ್ತದೆ ಎಂದು ಅಸ್ಸಾಂ ಸರ್ಕಾರದ ವಕ್ತಾರ ಹಾಗೂ ಕೈಗಾರಿಕಾ ಸಚಿವ ಚಂದ್ರಮೋಹನ ಪಟೋವರಿ ಸುದ್ದಿಗಾರರಿಗೆ ಮಾಹಿತಿಯನ್ನು ನೀಡಿದ್ದಾರೆ.

## 2019 ರಲ್ಲಿ ಅತೀ ಹೆಚ್ಚು ದೇಶದ್ರೋಹ ಪ್ರಕರಣ ದಾಖಲಾಗಿರುವ ರಾಜ್ಯ




* ಪ್ರಸ್ತುತ ಭಾರತ ದೇಶದಲ್ಲಿ 2019 ರಲ್ಲಿ ಅತಿ ಹೆಚ್ಚು ದೇಶ ದ್ರೋಹ ಪ್ರಕರಣಗಳು ಕರ್ನಾಟಕದಲ್ಲಿ ದಾಖಲಾಗಿವೆ ಎಂದು ರಾಜ್ಯ ಸಭೆಗೆ ಕೇಂದ್ರ ಸರ್ಕಾರ ವರದಿಯನ್ನು ನೀಡಿದೆ. ಈ ವರದಿಯ ಪ್ರಕಾರ ಕರ್ನಾಟಕದಲ್ಲಿ ಒಟ್ಟಾರೆ 2019 ರಲ್ಲಿ 22 ಪ್ರಕರಣಗಳು ದಾಖಲಾಗಿವೆ ಅದರಲ್ಲಿ 18 ಜನರನ್ನು ಬಂಧಿಸಲಾಗಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.
* ಪ್ರಸ್ತುತ 2019 ರಲ್ಲಿ ದೇಶದ ವಿವಿಧ ಕಡೆಗಳಲ್ಲಿ 93 ದೇಶದ್ರೋಹ ಪ್ರಕರಣಗಳು ದಾಖಲಾಗಿವೆ ಅದರಲ್ಲಿ 96 ದೇಶದ್ರೋಹಿ ಜನರನ್ನು ಬಂಧಿಸಲಾಗಿದೆ, ಎಂದು ರಾಜ್ಯ ಗೃಹ ಖಾತೆಯ ಸಚಿವ ಜಿ.ಕೃಷ್ಣ ರೆಡ್ಡಿ ಯವರು ದೇಶದ್ರೋಹ ಪ್ರಕರಣಗಳ ಮಾಹಿತಿಯನ್ನು ರಾಜ್ಯಸಭೆಗೆ ತಿಳಿಸಿದ್ದಾರೆ. ದೇಶದ್ರೋಹ ಪ್ರಕರಣ ದಾಖಲಾಗಿರುವ ರಾಜ್ಯಗಳು: ಕರ್ನಾಟಕ 22 ಪ್ರಕರಣಗಳು ಅಸ್ಸಾಂನಲ್ಲಿ 17 ಪ್ರಕರಣಗಳು ಜಮ್ಮುಕಾಶ್ಮೀರದಲ್ಲಿ 11 ಪ್ರಕರಣಗಳು ಉತ್ತರ ಪ್ರದೇಶದಲ್ಲಿ 10 ಪ್ರಕರಣಗಳು ದಾಖಲಾಗಿವೆ ಎಂದು ತಿಳಿದು ಬಂದಿದೆ.

## 'ನಮ್ಮ ಮೆಟ್ರೋ'ದಲ್ಲಿ ಕನ್ನಡ ಭಾಷೆ ಕಡ್ಡಾಯ : ಉಪ ರಾಷ್ಟ್ರಪತಿ ವೆಂಕಯ್ಯ ನಾಯ್ಡು ಸೂಚನೆ



* ಇತ್ತೀಚಿಗೆ ಕರ್ನಾಟಕ ರಾಜ್ಯದ ಆಡಳಿತದಲ್ಲಿ ತ್ರಿಭಾಷಾ ನೀತಿಯನ್ನು ರಾಜ್ಯ ಅಳವಡಿಸಿಕೊಂಡಿದೆ ಆದರೂ ಕನ್ನಡವನ್ನು ನಿರ್ಲಕ್ಷ ಮಾಡಲಾಗುತ್ತಿದೆ ಎಂಬ ಆರೋಪದ ಹೆಚ್ಚುತ್ತಿದೆ ಎಂದು ರಾಜ್ಯಸಭೆಯಲ್ಲಿ ಕಾಂಗ್ರೆಸ್ ಸದಸ್ಯ ಜಿ.ಸಿ. ಚಂದ್ರಶೇಖರ್' ಆಕ್ರೋಶವನ್ನು ವ್ಯಕ್ತಪಡಿಸಿದರು ಇದೆ ರಾಜ್ಯಸಭೆ ಸಂದರ್ಭದಲ್ಲಿ ಉಪರಾಷ್ಟ್ರಪತಿ ವೆಂಕಯ್ಯ ನಾಯ್ಡು ಅವರು ಬೆಂಗಳೂರಿನ ನಮ್ಮ ಮೆಟ್ರೋ'ದಲ್ಲಿ ಕನ್ನಡವನ್ನು ಕಡ್ಡಾಯವಾಗಿ ಬಳಕೆ ಮಾಡುವಂತೆ ಮಹತ್ವದ ಆದೇಶ ನೀಡಿದ್ದಾರೆ.
* ಉಪ ರಾಷ್ಟ್ರಪತಿ ವೆಂಕಯ್ಯ ನಾಯ್ಡು ಅವರು ರಾಜ್ಯಸಭೆಯಲ್ಲಿ ನಡೆದ ಜಿ.ಸಿ. ಚಂದ್ರಶೇಖರ್ ಅವರ ಪ್ರಸ್ತಾವಣೆಗೆ ಒಪ್ಪಿಕೊಂಡು, ತ್ರಿಭಾಷಾ ನೀತಿಯ ಅನುಸಾರ ಕನ್ನಡವನ್ನು ಕಡ್ಡಾಯವಾಗಿ ಬಳಕೆ ಮಾಡಿ ಎಂದು ಮಹತ್ವದ ಆದೇಶವನ್ನು ಹೊರಡಿಸಿದರು.

## ಭಾರತ ದೇಶದಲ್ಲಿ 5 ವಾಹನ ಕಂಪನಿಗಳ ಕಾರ್ಯಾಚರಣೆ ಸ್ಥಗಿತ




* ಭಾರತ ದೇಶದಲ್ಲಿ ಕಳೆದ 5 ವರ್ಷಗಳಲ್ಲಿ 5 ವಾಹನ ಕಂಪನಿಗಳು ಇತ್ತೀಚಿಗೆ ವಾಹನಗಳ ತಯಾರಿಕಾ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಿವೆ ಎಂದು ಕೇಂದ್ರ ಸರ್ಕಾರವು ಲೋಕಸಭೆಗೆ ವರದಿಯನ್ನು ಸಲ್ಲಿಸಿದೆ. ವಾಹನಗಳ ತಯಾರಿಕೆಯನ್ನು ಸ್ಥಗಿತಗೊಳಿಸಿದ ಕಂಪನಿಗಳ ಮಾಹಿತಿ :
* ಮ್ಯಾನ್ ಟ್ರಕ್ಸ್, ಜನರಲ್ ಮೋಟಾರ್ಸ್, ಹಾರ್ಲೆ ಡೇವಿಡ್ಸನ್, ಯುಎಂ ಮೋಟರ್ ಸೈಕಲ್ಸ್, ಹೋಂಡಾ ಕಾರು ಈ 5 ಕಂಪನಿಗಳು ವಾಹನಗಳ ತಯಾರಿಕೆಯನ್ನು ಸ್ಥಗಿತಗೊಳಿಸಿವೆ ಎಂದು ಭಾರಿ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ಯಮಗಳ ಸಚಿವ ಪ್ರಕಾಶ್ ಜಾವಡೇಕರ್ ಲಿಖಿತ ರೂಪದಲ್ಲಿ ಲೋಕಸಭೆಗೆ ವರದಿಯನ್ನು ನೀಡಿದ್ದಾರೆ. ಈ ಮಾಹಿತಿಯು 'ಸಿಯಾಮ್'ನಿಂದ ಪಡೆದ ಮಾಹಿತಿಯಾಗಿದೆ ಎಂದು ಸಚಿವ ಪ್ರಕಾಶ್ ಜಾವಡೇಕರ್' ತಿಳಿಸಿದ್ದಾರೆ.

## ಭಾರತದ ಮೊದಲ ಆಟಿಕೆ ಮೇಳ (Toy Fair) 2021




* ಭಾರತದ ಮೊದಲ ಆಟಿಕೆ ಮೇಳ 2021ರ ವೆಬ್‌ಸೈಟ್ ಅನ್ನು ಪ್ರಾರಂಭಿಸಲು ಕೇಂದ್ರ ಸರ್ಕಾರ ಮುಂದಾಗಿದ್ದು, ಈ ಮೇಳಕ್ಕೆ ಕೇಂದ್ರ ಜವಳಿ ಸಚಿವ ಸ್ಮೃತಿ ಇರಾನಿ, ಶಿಕ್ಷಣ ಸಚಿವ ರಮೇಶ್ ಪೋಖ್ರಿಯಾಲ್ ರವರು ಚಾಲನೆ ನೀಡಲಿದ್ದಾರೆ.
* ಇದು ಫೆಬ್ರುವರಿ 27 ರಿಂದ ಮಾರ್ಚ್ 2, 2021 ರವರೆಗೆ ನಡೆಯುವ ಭಾರತದ ಮೊದಲ ಆಟಿಕೆ ಮೇಳವಾಗಿದೆ.
* ಈ ಆಟಿಕೆ ಮೇಳವು ಜವಳಿ ಸಚಿವಾಲಯವು ಶಿಕ್ಷಣ ಸಚಿವಾಲಯ ಮತ್ತು ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯದ ಸಹಯೋಗದೊಂದಿಗೆ ನಡೆಯಲಿದೆ ಎಂದು ತಿಳಿದು ಬಂದಿದೆ, ಹಾಗೂ ಈ ಮೇಳದಿಂದ ಮಕ್ಕಳಿಗೆ ಸಂತೋಷದಿಂದ ಕಲಿಕೆಯನ್ನು ನೀಡುವ ಉದ್ದೇಶವಾಗಿದೆ.
* ಪ್ರಸ್ತುತ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಗಾಂಧಿನಗರ ಸೆಂಟರ್ ಫಾರ್ ಕ್ರಿಯೇಟಿವ್ ಲರ್ನಿಂಗ್ ಆಟಿಕೆ

ಮೇಳದಲ್ಲಿ ವೀಕ್ಷಣೆಗಾಗಿಡಲು 200 ಕ್ಕೂ ಹೆಚ್ಚು ಆಟಿಕೆಗಳನ್ನು ಸಮಾಗ್ರಿಗಳನ್ನು ಸಿದ್ಧಪಡಿಸಲಾಗಿದೆ ಹಾಗೂ ಇದರಿಂದ ಸ್ಥಳೀಯ ಆಟಿಕೆ ಉದ್ಯಮವನ್ನು ಕಲಿಸಲು, ಕಲಿಯಲು ಮತ್ತು ಉತ್ತೇಜಿಸಲು ಮಕ್ಕಳನ್ನು ಕಾರ್ಯಕ್ರಮದಲ್ಲಿ ಭಾಗಿಯಾಗಲು ಅವಕಾಶ ನೀಡಲಾಗಿದೆ. ಆಟಿಕೆ ಮೇಳದ ಉದ್ದೇಶ:

* ಪ್ರಧಾನಿ ನರೇಂದ್ರ ಮೋದಿಯವರ ಆಗಸ್ಟ 30, 2020 ಮನ್ ಕಿ ಬಾತ್'ನ ಮೂಲಕ ಆಟಿಕೆ ಮೇಳದ ಆಲೋಚನೆ ತಿಳಿದು ಬಂದಿತ್ತು, ಇದರಿಂದ ಸ್ಥಳೀಯ ಆಟಿಕೆ ಮಾರುಕಟ್ಟೆಯ ಬೃಹತ್ ಸಾಮರ್ಥ್ಯ ಮತ್ತು ಸ್ಥಳೀಯ ಆಟಿಕೆಗಳನ್ನು ಉತ್ತೇಜಿಸುವ ಸಲುವಾಗಿ ಈ ಆಟಿಕೆ ಮೇಳದ ಆಲೋಚನೆಯನ್ನು ತಿಳಿಸಿದ್ದಾರೆ.

# 12-02-2021

## ಪ್ರಧಾನಿ ಮೋದಿಯಿಂದ "ವಿಶ್ವ ಸುಸ್ಥಿರ ಅಭಿವೃದ್ಧಿ ಶೃಂಗಸಭೆ 2021" ಉದ್ಘಾಟನೆ



* 2021ರ ವಿಶ್ವ ಸುಸ್ಥಿರ ಅಭಿವೃದ್ಧಿ ಶೃಂಗಸಭೆಯನ್ನು ಪ್ರಧಾನಿ ನರೇಂದ್ರ ಮೋದಿಯವರು ವಿಡಿಯೋ ಕಾನ್ಫರೆನ್ಸ್ ಮೂಲಕ ಉದ್ಘಾಟಣೆ ಮಾಡಿದರು. ನಮ್ಮ ಸಾಮಾನ್ಯ ಭವಿಷ್ಯವನ್ನು ಮರು ಸೃಷ್ಟಿಸುವದು ಹಾಗೂ ಎಲ್ಲರಿಗೂ ಸುರಕ್ಷಿತ ವಾತಾವರಣ ಒದಗಿಸುವದು' ಈ ಶೃಂಗಸಭೆಯ ಪ್ರಮುಖ ಧ್ಯೇಯವಾಗಿದೆ ಎಂದು ಪ್ರಧಾನಿಯವರು ತಿಳಿಸಿದರು.

* ಪ್ರಸ್ತುತ ಅಮೆರಿಕಾದ ಜೋ ಬೈಡನ್ ಸರ್ಕಾರದಲ್ಲಿ ಹವಾಮಾನ ವಿಚಾರಗಳ ಬಗೆಗಿನ ವಿಶೇಷ ಅಧಿಕಾರಿಯಾಗಿರುವ ಜಾನ್ ಕೆರ್ರಿ'ಯವರು 2021ರ ಅಮೆರಿಕ ರಾಷ್ಟ್ರೀಯ ಭದ್ರತಾ ಸಮಿತಿಯ ವಿಶ್ವ ಸುಸ್ಥಿರ ಅಭಿವೃದ್ಧಿ ಶೃಂಗಸಭೆಯಲ್ಲಿ ಪಾಲ್ಗೊಂಡು ಮಾತನಾಡಿದರು, ಸದ್ಯ ಭಾರತ ದೇಶವು ಹೂಡಿಕೆ ಮಾಡಲು ಅತ್ಯಂತ ಸೂಕ್ತವಾದ ತಾಣವಾಗಿದೆ ಎಂದು ತಿಳಿಸಿದ್ದಾರೆ, ಹಾಗೂ ಭಾರತದ ಪ್ರಧಾನಿ ನರೇಂದ್ರ ಮೋದಿಜೀ ಯವರು ಹವಾಮಾನ ಏರಿಳಿತದಿಂದ ಎದುರಾಗುವ ಸವಾಲುಗಳ ಮತ್ತು ಪರಿಸ್ಥಿತಿಗಳನ್ನೂ ಎದುರಿಸಲು ಬದ್ಧವಾಗಿದ್ದಾರೆ ಹಾಗೆ ಅವರ ಜೊತೆಯಲ್ಲಿ ನಾವು ಕೆಲಸ ಮಾಡಲು ಸಿದ್ಧರಿದ್ದೇವೆ ಎಂದು ಅಮೆರಿಕಾದ ಜಾನ್ ಕೆರ್ರಿ ತಿಳಿಸಿದ್ದಾರೆ.

* ಭಾರತವು ಆರ್ಥಿಕತೆ ಹೊಂದಿರುವ ರಾಷ್ಟ್ರಗಳಿಗೆ ಅತ್ಯಂತ ಸೂಕ್ತವಾಗಿದೆ ಎಂದು ಜಾನ್ ಕೆರ್ರಿ ಎಂದು ತಿಳಿಸಿದರು, ಇದೆ ಸಂದರ್ಭದಲ್ಲಿ ಮಾತನಾಡಿದ ಅಮೆರಿಕಾದ ಜಾನ್ ಕೆರ್ರಿ ಸದ್ಯದಲ್ಲಿ ಭಾರತಕ್ಕೆ ಪ್ರವಾಸ ಬೆಳಸಲು ಸಿದ್ಧರಾಗಿದ್ದೇವೆ ಎಂದು ತಿಳಿಸಿದರು.

## ಪಾಕಿಸ್ತಾನದಿಂದ ಬಾಬರ್ (Babur) ಕ್ಷಿಪಣಿ ಪರೀಕ್ಷೆ ಯಶಸ್ವಿ




* ಪಾಕಿಸ್ತಾನವು ನೆಲದಿಂದ ನೆಲಕ್ಕೆ ದಾಳಿ ಮಾಡಬಲ್ಲ ಬಾಬರ್ ಕ್ರೂಸ್ ಕ್ಷಿಪಣಿಯನ್ನು ಅರೇಬಿಯನ್ ಸಮುದ್ರದಲ್ಲಿ ಯಶಸ್ವಿಯಾಗಿ ಉಡಾವಣೆ ನಡೆಸಿದೆ ಎಂದು ಪಾಕಿಸ್ತಾನ ಸೇನೆ ಮಾಹಿತಿಯನ್ನು ನೀಡಿದೆ. ಕ್ಷಿಪಣಿಯ ವಿಶೇಷತೆ :

* ಈ ಬಾಬರ್ 1 ಎ ಕ್ಷಿಪಣಿ 280 ಮೈಲಿಗಳು ಅಂದರೆ ಸರಿ ಸುಮಾರು 450 ಕಿ.ಮೀ ವ್ಯಾಪ್ತಿಯೊಂದಿಗೆ, ಭೂಮಿ ಮತ್ತು ಸಮುದ್ರದಲ್ಲಿನ ಗುರಿಗಳನ್ನು ನಿಖರವಾಗಿ ತಲಪಲು ಈ ಕ್ಷಿಪಣಿ ಸಮರ್ಥವಾಗಿದೆ ಎಂದು ಪಾಕಿಸ್ತಾನ ಸೇನೆ ತಿಳಿಸಿದೆ.

* ನ್ಯಾಷನಲ್ ಎಂಜಿನಿಯರಿಮಗ್ ಆಯಂಡ್ ಸೈನ್ಸ್ ಕಮಿಷನ್ ನ ಮುಖ್ಯಸ್ಥ ರಾಜಾ ಸಮರ್'ರವರು ಈ ಕ್ಷಿಪಣಿಯಲ್ಲಿ ಅತ್ಯಾಧುನಿಕ ತಂತ್ರಜ್ಞಾನ ಮತ್ತು ಸಮರ್ಥ ಶಸ್ತ್ರಾಸ್ತ್ರಗಳನ್ನು ಬಳಸಲಾಗಿದೆ ಎಂದು ತಿಳಿಸಿದ್ದಾರೆ.

## ಚೀನಾದಿಂದ 'ಬಿಬಿಸಿ' ವರ್ಲ್ಡ್ ನ್ಯೂಸ್'ಗೆ ನಿಷೇಧ ಹೇರಿಕೆ




* ಇತ್ತೀಚಿಗೆ ಚೀನಾ ದೇಶವು ಬಿಬಿಸಿ ವರ್ಲ್ಡ್ ನ್ಯೂಸ್ ಅನ್ನು ತನ್ನ ದೇಶದಲ್ಲಿ ಪ್ರಸಾರ ಮಾಡುವುದನ್ನು ನಿಷೇಧಿಸಿದೆ ಎಂದು ಚೀನಾದ ದೂರದರ್ಶನ ಮತ್ತು ರೇಡಿಯೋ ನಿಯಂತ್ರಕ ಪ್ರಕಟಿಸಿದೆ, ಚೀನಾದ ಸರ್ಕಾರಿ ಸ್ವಾಮ್ಯದ ಬ್ರಾಡ್‌ಕಾಸ್ಟರ್ ಚೀನಾ ಗ್ಲೋಬಲ್ ಟೆಲಿವಿಷನ್ ನೆಟ್‌ವರ್ಕ್‌ನ ಪರವಾನಗಿಯನ್ನು UK ರದ್ದುಪಡಿಸಿದೆ. BBC ನಿಷೇಧದ ಕಾರಣ:

* ಬ್ರಿಟಿಷ್ ಬ್ರಾಡ್ಕಾಸ್ಟಿಂಗ್ ಕಾರ್ಪೊರೇಷನ್ (BBC) ಸಾರ್ವಜನಿಕ ಸೇವಾ ಪ್ರಸಾರವಾಗಿದ್ದು, ಇದರ ಪ್ರಧಾನ ಕಚೇರಿ ಲಂಡನ್'ನಲ್ಲಿದ್ದು, ಬಿಬಿಸಿ ವರ್ಲ್ಡ್ ನ್ಯೂಸ್ ವರದಿ ಮಾಡುವ ಮಾರ್ಗಸೂಚಿಗಳನ್ನು ಗಂಭೀರವಾಗಿ ಉಲ್ಲಂಘಿಸಿದ್ದಕ್ಕಾಗಿ ನಿಷೇಧ ಹೇರಲಾಗಿದೆ ಎಂದು ಚೀನಾ ತಿಳಿಸಿದೆ.

## ಸೌದಿ ಅರೇಬಿಯಾ 20 ದೇಶಗಳ ಜನರಿಗೆ ತಾತ್ಕಾಲಿಕ ನಿರ್ಬಂಧ



* ಸೌದಿ ಅರೇಬಿಯಾ ರಾಷ್ಟ್ರವು 20 ದೇಶಗಳ ಜನರಿಗೆ ತಾತ್ಕಾಲಿಕ ನಿರ್ಬಂಧವನ್ನು ಹೇರಲಾಗಿದೆ ಎಂದು ರಿಯಾದ್ ನಲ್ಲಿರುವ ಭಾರತೀಯ ರಾಯಭಾರ ಕಚೇರಿ ಮಾಹಿತಿಯನ್ನು ನೀಡಿದೆ. ತಾತ್ಕಾಲಿಕ ನಿರ್ಬಂಧವಾದ ದೇಶಗಳು ಮತ್ತು ಕಾರಣ:
* ದೇಶದಲ್ಲಿ ಕೊರೊನಾ ಸೋಂಕಿನ ಪ್ರಕರಣಗಳು ಹೆಚ್ಚುತ್ತಿರುವ ಕಾರಣಗಳಿಂದಾಗಿ ಸೌದಿ ಅರೇಬಿಯಾ ರಾಷ್ಟ್ರವು ಒಟ್ಟಾರೆ 20 ದೇಶಗಳ ಜನರಿಗೆ ನಿರ್ಬಂಧ ಹೇರಿದೆ ಎಂದು ತಿಳಿಸಿದೆ.
* ಸೌದಿ ಅರೇಬಿಯಾದ ಜಾನ್ಸ್ ಹಾಪ್‌ಕಿನ್ಸ್ ವಿಶ್ವವಿದ್ಯಾಲಯ ನೀಡಿದ ವರದಿಯ ಪ್ರಕಾರ 3,71,356 ಕೋವಿಡ್ 19 ಸೋಂಕಿನ ಪ್ರಕರಣಗಳು ದಾಖಲಾಗಿವೆ ಎಂದು ಮಾಹಿತಿಯನ್ನು ನೀಡಿದೆ.
* ನಿರ್ಬಂಧವಾದ ದೇಶಗಳು: ಭಾರತ, ಅರ್ಜೆಂಟಿನಾ, ಯುನೈಟೆಡ್ ಅರಬ್ ಎಮಿರೇಟ್ಸ್, ಜರ್ಮನಿ, ಅಮೆರಿಕ, ಇಂಡೋನೇಷ್ಯಾ, ಐರ್ಲೆಂಡ್, ಇಟಲಿ, ಪಾಕಿಸ್ತಾನ, ಬ್ರೆಜಿಲ್, ಪೋರ್ಚುಗಲ್, ಬ್ರಿಟನ್, ಟರ್ಕಿ, ದಕ್ಷಿಣ ಆಫ್ರಿಕಾ, ಸ್ವೀಡನ್, ಸ್ವಿಡ್ಜರ್ಲೆಂಡ್, ಫ್ರಾನ್ಸ್, ಲೆಬನಾನ್, ಈಜಿಪ್ಟ್, ಜಪಾನ್, ಈ ಎಲ್ಲ ದೇಶಗಳ ಜನರಿಗೆ ಸೌದಿ ಅರೇಬಿಯಾ ತಾತ್ಕಾಲಿಕ ನಿರ್ಬಂಧ ಹೇರಿದೆ.

## ಜಪಾನಿನ 2020ರ ಒಲಿಂಪಿಕ್ಸ್ ಅಧ್ಯಕ್ಷ ರಾಜೀನಾಮೆ




* ಜಪಾನಿನ ರಾಜಕಾರಣಿಯಾಗಿರುವ ಯೊಶಿರೋ ಮೋರಿ ಅವರು 2020ರ ಒಲಿಂಪಿಕ್ಸ್ ಅಧ್ಯಕ್ಷರು ಇದೀಗ ತಮ್ಮ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.
* ಈ ಮೊದಲು ಇವರು ಏಪ್ರಿಲ್ 2000 ಮತ್ತು ಏಪ್ರಿಲ್ 2001 ರ ನಡುವೆ ಜಪಾನ್ ಪ್ರಧಾನಿಯಾಗಿ ಸೇವೆ ಸಲ್ಲಿಸಿದ್ದಾರೆ.
* ಇತ್ತೀಚಿಗೆ ನಡೆದ ಒಲಿಂಪಿಕ್ಸ್ ಸಭೆಯಲ್ಲಿ ಯೊಶಿರೋ ಮೋರಿಯವರು, ಮಹಿಳೆಯರ ಕಾರ್ಯಕ್ರಮಗಳಲ್ಲಿ ಮಾತನಾಡಲು ಅತಿ ಹೆಚ್ಚು ಸಮಯ ತಗೆದುಕೊಳ್ಳುತ್ತಾರೆ ಇದರಿಂದ ಕಾರ್ಯಕ್ರಮದ ಸಮಯ ಹಾಳಾಗುತ್ತದೆ ಎಂಬ ವಿವಾದಾತ್ಮಕ ಹೇಳಿಕೆಯನ್ನು ಸಭೆಯಲ್ಲಿ ನೀಡಿ ವ್ಯಾಪಕವಾಗಿ ಜನರ ಟೀಕೆಗೆ ಗುರಿಯಾಗಿದ್ದರು.

## ಆಂಧ್ರಪ್ರದೇಶದ ಮದನಪಲ್ಲಿಯಲ್ಲಿರುವ ಸತ್ಸಂಗ ಆಶ್ರಮಕ್ಕೆ ರಾಷ್ಟ್ರಪತಿ ಭೇಟಿ



* ಆಂಧ್ರಪ್ರದೇಶದ ಮದನಪಲ್ಲಿಯಲ್ಲಿರುವ ಸತ್ಸಂಗ ಫೌಂಡೇಷನ್ ಆಶ್ರಮಕ್ಕೆ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರು ಭೇಟಿ ನೀಡಿ ಯೋಗ ತರಬೇತಿಯ ವಿದ್ಯಾರ್ಥಿಗಳೊಂದಿಗೆ ಚರ್ಚಿಸಿದರು.
* ಪ್ರಸ್ತುತ ಆಂಧ್ರಪ್ರದೇಶದ ಮದನಪಲ್ಲಿಯಲ್ಲಿರುವ ಸತ್ಸಂಗ ಫೌಂಡೇಷನ್ ಆಶ್ರಮವು ಆಧ್ಯಾತ್ಮಿಕ ಚಿಂತಕ ಶ್ರೀ ಎಂ ಅವರು ಸ್ಥಾಪಿಸಿರುವ ಆಶ್ರಮವಾಗಿದೆ, ಭಾರತದ ರಾಷ್ಟ್ರಪತಿ ರಾಮನಾಥ ಕೋವಿಂದ್'ರವರು ಈ ಆಶ್ರಮಕ್ಕೆ ಭೇಟಿ ನೀಡಿದ ಸಮಯದಲ್ಲಿ ಭಾರತ ಯೋಗ ವಿದ್ಯಾಕೇಂದ್ರದ ಯೋಗಶಾಲೆಗೆ ಚಾಲನೆಯನ್ನು ನೀಡಿದರು, ಜೊತೆಗೆ ಸತ್ಸಂಗ ಫೌಂಡೇಷನ್ ವತಿಯಿಂದ ನಿರ್ಮಾಣವಾಗುತ್ತಿರುವ ಸ್ವಾಸ್ಥ್ಯ ಆಸ್ಪತ್ರೆಗೆ ಭೂಮಿಪೂಜೆಯನ್ನು ಕೈಗೊಂಡರು. ಸತ್ಸಂಗ ಆಶ್ರಮದ ಪ್ರಯೋಜನ:
* ಈ ಆಶ್ರಮದಲ್ಲಿ ಮೊದಲ ಬಾರಿಗೆ ಯೋಗ ಶಿಕ್ಷಕ ತರಬೇತಿ ವರ್ಗಗಳನ್ನೂ ಪ್ರಾರಂಭಮಾಡಲಾಗಿದೆ, ಹಾಗೂ ಈ ಆಶ್ರಮಕ್ಕೆ ದೇಶದ ವಿವಿಧ ಪ್ರದೇಶಗಳಿಂದ ಯೋಗ ತರಬೇತಿಯನ್ನು ಕಲಿಯಲು ವಿದ್ಯಾರ್ಥಿಗಳು ಆಗಮಿಸುತ್ತಿದ್ದಾರೆ ಎಂದು ಸತ್ಸಂಗ ಫೌಂಡೇಷನ್ ತಿಳಿಸಿದೆ.

# 13-02-2021

## ಭಾರತದ ಸಂಸತ್ ಭವನಕ್ಕೆ 100 ವರ್ಷಗಳ (ಶತಮಾನದ) ಸಂಭ್ರಮಾಚರಣೆ



* ಭಾರತದ ಸಂಸತ್ ಭವನಕ್ಕೆ ದಿನಾಂಕ 12 ಫೆಬ್ರುವರಿ 1921 ರಂದು ಶತಮಾನೋತ್ಸವ ಆಚರಿಸಿಕೊಳ್ಳುತ್ತಿದ್ದು, ಬ್ರಿಟನ್‌ನ ಡ್ಯೂಕ್ ಆಫ್ ಕನ್ನಾಟ್'ರವರು ಸಂಸತ್ ಭವನಕ್ಕೆ ಅಡಿಗಲ್ಲು ಹಾಕಿದ್ದರು, ಇವರು ಕೆನಡಾದ ಗವರ್ನರ್ ಜನರಲ್ ಆಗಿ ಸೇವೆ ಸಲ್ಲಿಸಿದ್ದರು, ಪ್ರಸ್ತುತ ಈ ಭಾರತದ ಸಂಸತ್ ಭವನಕ್ಕೆ 100 ವರ್ಷಗಳ(ಶತಮಾನದ) ಸಂಭ್ರಮಾಚರಣೆ.
* ಭಾರತದ ಈ ಸಂಸತ್ ಭವನಕ್ಕೆ ಸರ್ ಹರ್ಬರ್ಟ್ ಬೇಕರ್ ಮತ್ತು ಸರ್ ಎಡ್ವಿನ್ ಲೂಟೆನ್ಸ್'ರವರು ನೀಲ ನಕ್ಷೆಯನ್ನು ವಿನ್ಯಾಸಗೊಳಿಸಿದ್ದರು, ಇವರ ಮಾರ್ಗದ ಅನುಸಾರ ಬ್ರಿಟಿಷ್

ಇಂಡಿಯಾದ ಅನುಕೂಲಕ್ಕಾಗಿ ದೆಹಲಿಯ ಹೃದಯ ಭಾಗ ಎನಿಸಿಕೊಂಡಿರುವ ರೈಸಿನಾ ಹಿಲ್ ಎಂಬಲ್ಲಿ ಸಂಸತ್ ಕಟ್ಟಡದ ನಿರ್ಮಾಣದ ಕೆಲಸಗಳಿಗೆ ಚಾಲನೆಯನ್ನು ನೀಡಲಾಯಿತು.
* 1927ರಲ್ಲಿ ಭಾರತದ ಸಂಸತ್ ಭವನದ ಕಟ್ಟಡವನ್ನು ಲೋಕಾರ್ಪಣೆಗೊಳಿಸಿದರು, ಈ ಸಂಸತ್ ಭವನದ ಕಾಮಗಾರಿ 6 ವರ್ಷಗಳ ಸಮಯಕಾಶವನ್ನು ತಗೆದುಕೊಂಡಿತು.

## ಮಾರ್ಕ್ ಲಿಸ್ಪೋಸೆಲ್ಲಾ, ಟಾಟಾ ಮೋಟಾರ್ಸ್ ನೂತನ CEO ಮತ್ತು MDಯಾಗಿ ಆಯ್ಕೆ




* ಭಾರತ ದೇಶದ ವಾಹನ ಉತ್ಪಾದನೆಯ ಬಹುದೊಡ್ಡ ಸಂಸ್ಥೆಗಳಲ್ಲಿ ಒಂದಾಗಿರುವ ಟಾಟಾ ಮೋಟಾರ್ಸ್ ಕಂಪನಿಯ ತನ್ನ ಸಂಸ್ಥೆಗೆ ನೂತನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ(CEO) ಮತ್ತು ಮ್ಯಾನೇಜಿಂಗ್ ಡೈರೆಕ್ಟರ್ (MD)ಯನ್ನಾಗಿ ಮಾರ್ಕ್ ಲಿಸ್ಪೋಸೆಲ್ಲಾ ಅವರನ್ನು ನೇಮಕ ಮಾಡುವದಾಗಿ ಪ್ರಕಟಿಸಿದೆ.
* ಪ್ರಸ್ತುತ ಇವರು 2021 ಜುಲೈ 1 ರಿಂದ ಅಧಿಕಾರ ಸ್ವೀಕರಿಸಲಿದ್ದಾರೆ. ಮಾರ್ಕ್ ಲಿಸ್ಪೋಸೆಲ್ಲಾ'ಅವರ ಮಾಹಿತಿ:
* ಮಾರ್ಕ್ ಲಿಸೊಟ್ಸೆಲ್ಲಾ'ಅವರು ಆಟೋಮೋಟಿವ್ ಉದ್ಯಮಿಯಾಗಿದ್ದು, ಇತ್ತೀಚೆಗೆ ಪುಸೊ ಟ್ರಕ್ ಮತ್ತು ಬಸ್ ಕಾರ್ಪೊರೇಶನ್‌ನ ಅಧ್ಯಕ್ಷ ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿ ಕಾರ್ಯ ನಿರ್ವಹಿಸಿದ್ದಾರೆ ಮತ್ತು ವಹಿವಾಟು ನಿರ್ವಹಣೆ ಮತ್ತು ಪ್ರಮುಖ ಸಂಸ್ಥೆಗಳಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ವ್ಯವಸ್ಥಾಪಕ ನಿರ್ದೇಶಕರಾಗಿ ಸೇವೆ ಸಲ್ಲಿಸಿರುತ್ತಾರೆ.
* ಟಾಟಾ ಮೋಟಾರ್ಸ್ ಲಿಮಿಟೆಡ್‌ನ ಪ್ರಸ್ತುತ ಅಧ್ಯಕ್ಷರು : ಎನ್. ಚಂದ್ರಶೇಖರನ್

## ಭಾರತದ ಮೊದಲ 'CNG' ಟ್ರ್ಯಾಕ್ಟರ್' ಬಿಡುಗಡೆ



* ಇತ್ತೀಚಿಗೆ ಕೇಂದ್ರ ಸಚಿವ ನಿತಿನ್ ಗಡ್ಕರಿಯವರು ಭಾರತದ ಮೊದಲ ಸಿಎನ್‌ಜಿ (CNG) ಟ್ರ್ಯಾಕ್ಟರ್ ಅನ್ನು ಬಿಡುಗಡೆ ಮಾಡಿದರು. ಏನಿದು 'CNG' (Compressed Natural Gas) ಟ್ರ್ಯಾಕ್ಟರ್' :
* ಸಿಎನ್‌ಜಿ ಟ್ರಾಕ್ಟರುಗಳು ಡೀಸೆಲ್ ಟ್ರ್ಯಾಕ್ಟರ್'ಗಳಿಗಿಂತ ಹೆಚ್ಚು ಪರಿಸರ ಸ್ನೇಹಿಯಾಗಿರುತ್ತವೆ, ಮತ್ತು ಇವುಗಳು ಡೀಸೆಲ್ ಟ್ರ್ಯಾಕ್ಟರ್'ಗಳಿಗಿಂತ ಕಡಿಮೆ ದರದಲ್ಲಿ ರೈತರ ದೊರೆಯುತ್ತವೆ ಹಾಗೂ ರೈತರ ಉಳಿತಾಯವನ್ನು ಹೆಚ್ಚಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ.
* ಈ ಸಂಕುಚಿತ ನೈಸರ್ಗಿಕ ಅನಿಲ (CNG) ಟ್ರ್ಯಾಕ್ಟರ್ ಗಳನ್ನು ರಾವ್ಮಾಟ್ ಟೆಕ್ನೋ ಸೊಲ್ಯೂಷನ್ಸ್ ಮತ್ತು ತೋಮಸೆಟ್ಟೊ ಅಚಿಲ್ಲೆ ಇಂಡಿಯಾ ಜಂಟಿಯಾಗಿ ಸಂಯೋಜಿಸಿವೆ.
* ಈ ಸಿಎನ್‌ಜಿ ಟ್ರಾಕ್ಟರುಗಳನ್ನು ಬಳಸುವುದರ ಮೂಲಕ ರೈತರು ಇಂಧನ ವೆಚ್ಚದಲ್ಲಿ ವಾರ್ಷಿಕವಾಗಿ ಒಂದು ಲಕ್ಷ ರೂ. ಗಳನ್ನೂ ಉಳಿಸಬಹುದು ಎಂದು ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯದ ಮಾಹಿತಿಯನ್ನು ನೀಡಿದೆ.

## ಭಾರತೀಯ ವಾಯುಸೇನೆಯಲ್ಲಿ ಮುಧೋಳ ಶ್ವಾನ ಬಳಕೆ



* ಭಾರತೀಯ ವಾಯುಸೇನೆಗೆ ಬಾಗಲಕೋಟೆ ಜಿಲ್ಲೆಯ ಮುಧೋಳ ತಳಿಯ ನಾಯಿಗಳುನ್ನು ಸೇರ್ಪಡೆ ಮಾಡಿಕೊಳ್ಳಲಾಗಿದೆ ಎಂದು ವಾಯುಸೇನೆಯ ಅಧಿಕಾರಿಗಳು ಇತ್ತೀಚಿಗೆ ತಿಳಿಸಿದ್ದಾರೆ.
* ಈ ಮುಧೋಳ ತಳಿಯ ನಾಯಿಗಳುನ್ನು ಮುಧೋಳ ಹೌಂಡ್, ಮರಾಠಾ ಹೌಂಡ್, ಪಾಶ್ಮಿ ಹೌಂಡ್ ಮತ್ತು ಕ್ಯಾಥೆವಾರ್ ಡಾಗ್ ಎಂದೂ ಕರೆಯುತ್ತಾರೆ.
* ಪ್ರಸ್ತುತ ಮುಧೋಳ ತಳಿಯ 6 ನಾಯಿಗಳ ಬೇಡಿಕೆಯನ್ನು ಉತ್ತರ ಪ್ರದೇಶದ ಆಗ್ರಾದ ಏರ್ ಫೋರ್ಸ್ ಘಟಕವು ಬಾಗಲಕೋಟೆ ಜಿಲ್ಲೆಯ ಮುಧೋಳ ಶ್ವಾನ ಸಂವರ್ಧನೆ ಕೇಂದ್ರಕ್ಕೆ ಬೇಡಿಕೆಇಟ್ಟಿದ್ದು, ಪ್ರಸ್ತುತ ಇದೀಗ 4 ನಾಯಿ ಮರಿಗಳನ್ನು ಅಧಿಕೃತವಾಗಿ ಅಧಿಕಾರಿಗಳಿಗೆ ಹಸ್ತಾಂತರಿಸಿದೆ. ಇನ್ನು 2 ನಾಯಿ ಮರಿಗಳನ್ನು ಮುಂದಿನ ವರ್ಷ ಆಗ್ರಾದ ಏರ್ ಫೋರ್ಸ್ ಘಟಕಕ್ಕೆ ನೀಡುವುದಾಗಿ ಮುಧೋಳ ಶ್ವಾನ ಸಂವರ್ಧನೆ ಕೇಂದ್ರ ತಿಳಿಸಿದೆ.
* ಈಗಾಗಲೇ ಬಾಗಲಕೋಟೆ ಜಿಲ್ಲೆಯ ಮುಧೋಳ ತಳಿಯ ನಾಯಿಗಳು ಭಾರತೀಯ ಭೂಸೇನೆ ಮತ್ತು CRPFನಲ್ಲಿ ಬಳಕೆ ಮಾಡಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

## ಆಕ್ಸ್‌ಫರ್ಡ್ ಸ್ಟೂಡೆಂಟ್ಸ್ ಯೂನಿಯನ್‌ನ ಅಧ್ಯಕ್ಷೆಯಾಗಿ ರಶ್ಮಿ ಆಯ್ಕೆ



* 2021 ಫೆಬ್ರುವರಿ 11 ರಂದು ಆಕ್ಸ್‌ಫರ್ಡ್ ಸ್ಟೂಡೆಂಟ್ಸ್ ಯೂನಿಯನ್‌ನ ಅಧ್ಯಕ್ಷೆಯಾಗಿ ರಶ್ಮಿಯವರು ಅಧಿಕಾರ ಸ್ವೀಕರಿಸಿದ್ದಾರೆ, ಇವರು ಮೂಲತಃ ಮಣಿಪಾಲ ಎಂಐಟಿಯ ಹಳೆ ವಿದ್ಯಾರ್ಥಿಯಾಗಿದ್ದರು, ಇದೇ ಪ್ರಥಮಬಾರಿಗೆ ಅಧ್ಯಕ್ಷೆ ಸ್ಥಾನ ಪಡೆದ ಭಾರತೀಯ ಯುವತಿಯಾಗಿದ್ದಾರೆ. ರಶ್ಮಿ ಸಾಮಂತ್ ಅವರ ಬಗ್ಗೆ :

* ಮಣಿಪಾಲ ಮೂಲದ ಇವರು ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದ ಲಿನಾಕ್ರ ಕಾಲೇಜಿನ ಎಂಎಸ್ಸಿ ಪದವಿ ಪಡೆದಿದ್ದು, 2016 2020 ವರ್ಷದಲ್ಲಿ ಎಂಐಟಿಯಲ್ಲಿ ಮೆಕ್ಯಾನಿಕಲ್ ಎಂಜಿನಿಯರಿಂಗ್ ಪದವಿ ಪಡೆದುಕೊಂಡಿದ್ದಾರೆ. ಎಂಐಟಿಯಲ್ಲಿ ರಶ್ಮಿ ಅವರು ವಿದ್ಯಾರ್ಥಿ ಪರಿಷತ್ತಿನ ತಾಂತ್ರಿಕ ಕಾರ್ಯದರ್ಶಿಯಾಗಿ ಕೆಲಸ ಮಾಡಿದ್ದಾರೆ.

* ಈ ಆಕ್ಸ್‌ಫರ್ಡ್ ಸ್ಟೂಡೆಂಟ್ಸ್ ಯೂನಿಯನ್‌ನ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆಯನ್ನು ನಡೆಸಲಾಗಿತ್ತು, ಈ ಚುನಾವಣೆಗೆ 3 ಜನ ನಾಮನಿರ್ದೇಶನಗೊಂಡಿದ್ದರು ಆ ಮೂವರಲ್ಲಿ ಅಧಿಕ ಮತಗಳುನ್ನು ಮಣಿಪಾಲನ ರಶ್ಮಿ ಅವರು ಪಡೆದುಕೊಂಡಿದ್ದಾರೆ ಆದರಿಂದ ಅವರನ್ನು ಅಧ್ಯಕ್ಷ ಸ್ಥಾನಕ್ಕೆ ಆಯ್ಕೆ ಮಾಡಲಾಗಿದೆ ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯ ತಿಳಿಸಿದೆ.

## BMTC ಯಿಂದ ಮಹಿಳಾ ಕಂಡಕ್ಟರ್'ಗಳಿಗೆ ಶಿಫ್ಟ್ ಪ್ರಕಾರ ಕೆಲಸ ಮಾಡಲು ಅನುಮತಿ



* ಇತ್ತೀಚೆಗೆ ಮಹಿಳಾ ಕಂಡಕ್ಟರ್'ಗಳು ತಮ್ಮ ಕೆಲಸದ ಕಷ್ಟಕರ ಸನ್ನಿವೇಶಗಳ ಬಗ್ಗೆ ವಿಡಿಯೋವನ್ನು ಮಾಡಿದ್ದರು ಅಲ್ಲದೇ ಕೆಲಸದ ಸಮಯವನ್ನು ಕಡಿಮೆ ಮಾಡುವಂತೆ ಮನವಿಯನ್ನು ಕೂಡ ಮಾಡಿದ್ದರು. ಈ ಮಹಿಳಾ ಕಂಡಕ್ಟರ್'ಗಳ ಮನವಿಗೆ ಬಿಎಂಟಿಸಿ ಸ್ಪಂದಿಸಿ ಇದೀಗ ಮಹಿಳಾ ಕಂಡಕ್ಟರ್'ಗಳಿಗೆ ಶಿಫ್ಟ್ ಹಾಕಲು ತೀರ್ಮಾನಿಸಿದೆ ಎಂದು BMTC ತಿಳಿಸಿದೆ.

* ಇದೀಗ ಮಹಿಳಾ ಕಂಡಕ್ಟರ್'ಗಳಿಗೆ ಮಾರ್ನಿಂಗ್ ಹಾಗೂ ಜನರಲ್ ಶಿಫ್ಟ್ ನೀಡಲಾಗುವದು ಮತ್ತು ಗರ್ಭಿಣಿಯರು, ಚಿಕ್ಕ ಮಕ್ಕಳಿರುವ ಮಹಿಳಾ ಸಿಬ್ಬಂದಿಗಳು ತಮಗೆ ಅನುಕೂಲವಾಗುವ ಶಿಫ್ಟ್'ಗೆ ಕೆಲಸಕ್ಕೆ ಬರಲು BMTC ತಿಳಿಸಿದೆ.

# 15-02-2021

## ಆಹಾರ ಸಚಿವ ಉಮೇಶ್ ಕತ್ತಿ, ಟಿವಿ, ಬೈಕ್, ಫ್ರಿಡ್ಜ್ ಹೊಂದಿರುವ ಜನಗಳ BPLಕಾರ್ಡ್‌ರದ್ದು!



* ಇತ್ತೀಚಿಗೆ ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಉಮೇಶ್ ಕತ್ತಿ 5 ಎಕರೆಗಿಂತ ಹೆಚ್ಚಿನ ಜಮೀನು ಹೊಂದಿದ, ಮತ್ತು ಮನೆಗಳಲ್ಲಿ ಬೈಕ್, ಟೀವಿ, ಫ್ರಿಡ್ಜ್ ಹೊಂದಿದವರ ಪಡಿತರ ಚೀಟಿ(BPL)ರದ್ದು ಮಾಡಲಾಗುತ್ತದೆ ಎಂಬ ಮಾಹಿತಿಯನ್ನು ನೀಡಿದ್ದಾರೆ.

* ವಾರ್ಷಿಕ 1.20 ಲಕ್ಷಕ್ಕಿಂತ ಹೆಚ್ಚು ಆದಾಯವನ್ನು ಹೊಂದಿದ ಸರ್ಕಾರಿ ಹಾಗೂ ಖಾಸಗಿ ಕಂಪನಿಗಳಲ್ಲಿ ಕೆಲಸ ಮಾಡುವ ಜನರು ಮತ್ತು 5 ಎಕರೆಗಿಂತ ಹೆಚ್ಚಿನ ಜಮೀನು, ಮನೆಯಲ್ಲಿ ಬೈಕ್, ಟೀವಿ, ಫ್ರಿಡ್ಜ್ ಇದ್ದವರ ಪಡಿತರ ಚೀಟಿ ರದ್ದು ಮಾಡಲಾಗುತ್ತದೆ. ಸರ್ಕಾರವು ವಾರ್ಷಿಕ ಆದಾಯ ಮತ್ತು ಅಸ್ತಿಯನ್ನು ಹೊಂದಿದ ಜನರು ಬಿಪಿಎಲ್(BPL)ಕಾರ್ಡ್ ಹೊಂದಿದ್ದರೆ ಸರ್ಕಾರಕ್ಕೆ ಹಿಂದಿರುಗಿಸಲು ಮಾರ್ಚ್ ತಿಂಗಳಿನ ಅಂತ್ಯದವರೆಗೆ ಸಮಯ ನೀಡಲಾಗಿದೆ ಎಂದು ತಿಳಿಸಿದ್ದಾರೆ.

## ಅತಿಯಾದ ಡ್ರಗ್ಸ್ ಸೇವನೆಯಿಂದ ದೇಶದಲ್ಲಿ ಸಾವು, ಕರ್ನಾಟಕ 2ನೇ ಸ್ಥಾನ



* ರಾಷ್ಟ್ರೀಯ ಅಪರಾಧಗಳ ದಾಖಲೆ ಬ್ಯೂರೋ (NC RB) ವರದಿಯ ಪ್ರಕಾರ ಪ್ರಸ್ತುತ 2017 ರಿಂದ 2019ರಲ್ಲಿ ಭಾರತದ ದೇಶದಲ್ಲಿ ಡ್ರಗ್ ಓವರ್‌ಡೋಸ್ (ಅಧಿಕ ಮಾದಕದ್ರುವ್ಯ ಸೇವನೆಯಿಂದಾಗಿ) 2,300ಕ್ಕೂ ಹೆಚ್ಚು ಜನರು ಸಾವನ್ನಪಿದ್ದಾರೆ ಎಂದು ವರದಿಯನ್ನು ನೀಡಿದೆ.

* ಭಾರತದ ದೇಶದಲ್ಲಿ ಡ್ರಗ್ ಓವರ್‌ಡೋಸ್'ನಿಂದ ಮೃತಪಟ್ಟವರು 2017ರಲ್ಲಿ 745 ಜನರು, 2018ರಲ್ಲಿ 875 ಜನರು, 2019ರಲ್ಲಿ 704 ಜನರು ಸಾವನ್ನಪಿದ್ದಾರೆ. ಅತಿಯಾಗಿ ಡ್ರಗ್ಸ್ ಸೇವನೆಯಿಂದ ಸಾವು ದಾಖಲಾಗಿರುವ ರಾಜ್ಯಗಳು ಮೊದಲ ಸ್ಥಾನ ರಾಜಸ್ಥಾನ, 338 ಜನರ ಸಾವು ಎರಡನೇ ಸ್ಥಾನ ಕರ್ನಾಟಕ, 238 ಜನರ ಸಾವು ಮೂರನೇ ಸ್ಥಾನ ಉತ್ತರಪ್ರದೇಶ, 236 ಜನರ ಸಾವು

* ಕೇಂದ್ರ ಸರ್ಕಾರವು ಡ್ರಗ್ಸ್ ಸೇವನೆಯನ್ನು ನಿಯಂತ್ರಿಸಲು 272 ಜಿಲ್ಲೆಗಳಲ್ಲಿ 'ನಶಾಮುಕ್ತಿ ಭಾರತ್ ಅಭಿಯಾನ' ಯೋಜನೆಯನ್ನು ಆರಂಭಿಸಲಾಗಿದೆ ಎಂದು ಮಾದಕವಸ್ತು ನಿಯಂತ್ರಣ ದಳ ತಿಳಿಸಿದೆ, ಈ ಯೋಜನೆಯು ಡ್ರಗ್ಸ್ ಸೇವನೆಯ ಕಾರ್ಯಾಚರಣೆ ಸಹಾಯವಾಗಲಿದೆ ಎಂದು ತಿಳಿಸಲಾಗಿದೆ

## ದೇಶಿ ನಿರ್ಮಿತ ಅರ್ಜುನ್ ಸಮರ ಟ್ಯಾಂಕ್ ಭಾರತೀಯ ಸೇನೆಗೆ ಸೇರ್ಪಡೆ



ದೇಶಿ ನಿರ್ಮಿತ ಅರ್ಜುನ್ ಸಮರ ಟ್ಯಾಂಕ್ ಭಾರತೀಯ ಸೇನೆಗೆ ಸೇರ್ಪಡೆ

* ಪ್ರಧಾನಿ ನರೇಂದ್ರ ಮೋದಿ ಅವರು ದೇಶಿಯವಾಗಿ ನಿರ್ಮಿಸಿದ ಯುದ್ಧ ವಿಮಾನ ಅರ್ಜುನ್ ಟ್ಯಾಂಕ್ ಮಾರ್ಕ್ 1ಎ ಅನ್ನು ಚೆನ್ನೈಯಲ್ಲಿ ಭಾರತೀಯ ಸೇನಾ ವರಿಷ್ಠ ಎಂ.ಎಂ. ನರವಾಣೆ ಅವರ ಮೂಲಕ ಭಾರತೀಯ ಸೇನೆಗೆ ಹಸ್ತಾಂತರಿಸಿದರು.

ಅರ್ಜನ್ ಟ್ಯಾಂಕ್ ಮಾರ್ಕ್ 1ಎ ಮಾಹಿತಿ:

* ಅತ್ಯಾಧುನಿಕ ಅರ್ಜನ್ ಟ್ಯಾಂಕ್'ಅನ್ನು ಚೆನ್ನೈಯಲ್ಲಿರುವ DRDOನ ಸಮರ ವಾಹನಗಳ ಸಂಶೋಧನೆ ಹಾಗೂ ಅಭಿವೃದ್ಧಿ ಸಂಸ್ಥೆ ದೇಶೀಯವಾಗಿ ನಿರ್ಮಿಸಿದೆ.
* ಭಾರತೀಯ ರಕ್ಷಣಾ ಸಚಿವಾಲಯವು ದೇಶೀ ನಿರ್ಮಿತ ಅರ್ಜನ್ ಟ್ಯಾಂಕ್'ಅನ್ನು ಸರಿ ಸುಮಾರು 8,400 ಕೋಟಿ ರೂ. ವೆಚ್ಚದಲ್ಲಿ 118 ಅರ್ಜುನ್ ಮಾರ್ಕ್ 1ಎ ಟ್ಯಾಂಕ್‌ಗಳನ್ನು ಭಾರತೀಯ ಸೇನೆಗೆ ನಿಯೋಜಿಸಲು ಅನುಮೋದನೆ ನೀಡಿದೆ.

# 16-02-2021

## ಮಾರಿಯೊ ದ್ರಾಘಿ, ಇಟಲಿಯ ನೂತನ ಪ್ರಧಾನಿ



* ಇಟಲಿಯ ನೂತನ ಪ್ರಧಾನಿಯಾಗಿ ಮಾರಿಯೋ ದ್ರಾಘಿ ಅವರು ಫೆಬ್ರುವರಿ 13, 2021ರಂದು ಅಧಿಕಾರ ವಹಿಸಿಕೊಂಡರು, ಇವರು ಇಟಾಲಿಯನ್ ಅರ್ಥಶಾಸ್ತ್ರಜ್ಞ, ಕೇಂದ್ರ ಬ್ಯಾಂಕರ್, ಶೈಕ್ಷಣಿಕ ಮತ್ತು ನಾಗರಿಕ ಸೇವಕರಾಗಿದ್ದು, ಅವರು ಈ ಹಿಂದೆ ಅವರು ಯುರೋಪಿಯನ್ ಸೆಂಟ್ರಲ್ ಬ್ಯಾಂಕಿನ ಅಧ್ಯಕ್ಷರಾಗಿ 2011 ರಿಂದ 2019 ರವರೆಗೆ ಸೇವೆ ಸಲ್ಲಿಸಿದ್ದಾರೆ.
* ಈ ಹಿಂದಿನ ಇಟಲಿ ಪ್ರಧಾನಿಯಾಗಿರುವ ಗಿಸೆಪ್ಪೆ ಕಾಂಟೆ ಅವರು ಸಾಂಕ್ರಾಮಿಕ ರೋಗವಾಗಿರುವ ಕೊರೊನಾ ನಿಯಂತ್ರಣದಲ್ಲಿ ವಿಫಲರಾಗಿ ರಾಜೀನಾಮೆ ನೀಡಿದರು, ಇದರ ಹಿನ್ನಲೆಯಲ್ಲಿ ನೂತನ ಪ್ರಧಾನಿಯಾಗಿ ಮಾರಿಯೋ ದ್ರಾಘಿ ಅವರು ಅಧಿಕಾರ ವಹಿಸಿಕೊಂಡರು.

## ಮಾಜಿ ರಾಜ್ಯಪಾಲ, ನಿವೃತ್ತ ಮುಖ್ಯ ನ್ಯಾಯಮೂರ್ತಿ, ರಾಮಾ ಜೋಯಿಸ್ ನಿಧನ



* ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ರಾಮಾ ಜೋಯಿಸ್'ರವರು ತಮ್ಮ 89ನೇ ವಯಸ್ಸಿನಲ್ಲಿ ವಿಧಿವಶರಾದರು, ರಾಮಾ ಜೋಯಿಸ್'ರವರು ಜಾರ್ಖಂಡ್ ಮತ್ತು ಬಿಹಾರ ರಾಜ್ಯಗಳ ರಾಜ್ಯಪಾಲರಾಗಿ ಕಾರ್ಯ ನಿರ್ವಹಿಸಿದ್ದಾರೆ, ಮತ್ತು ಆರ್‌ಎಸ್‌ಎಸ್‌ನ(RSS) ಸ್ವಯಂ ಸೇವಕರಾಗಿ ಕೂಡ ಸೇವೆ ಸಲ್ಲಿಸಿದ್ದಾರೆ.
* ಕರ್ನಾಟಕದಿಂದ ರಾಜ್ಯಸಭೆಯ ಸದಸ್ಯರೂ ಹಾಗೂ ಭಾರತೀಯ ಜನತಾ ಪಕ್ಷದಿಂದ ರಾಜ್ಯಸಭೆಗೆ ಆಯ್ಕೆಯಾಗಿದ್ದರು.
* ನಿವೃತ್ತ ಮುಖ್ಯ ನ್ಯಾಯಮೂರ್ತಿಯಾಗಿರುವ ರಾಮಾ ಜೋಯಿಸ್'ರವರು ಶಿವಮೊಗ್ಗ ಜಿಲ್ಲೆಯಲ್ಲಿ ಜುಲೈ 27,1931ರಂದು ಜನಿಸಿದ್ದರು, ಪ್ರಸ್ತುತ ಇವರು ಸುಪ್ರೀಂಕೋರ್ಟ್ ವಕೀಲರಾಗಿಯೂ ಕಾರ್ಯ ನಿರ್ವಹಿಸುತ್ತಿದ್ದರು.
* ರಾಮಾ ಜೋಯಿಸ್'ರವರು, 'ಸರ್ವೀಸ್ ಅಂಡರ್ ಸ್ಟೇಟ್ ಹಿಸ್ಟಾರಿಕಲ್ ಬ್ಯಾಟಲ್', 'ನೀಡ್ ಫಾರ್ ಅಮೆಂಡಿಂಗ್ ದಿ ಕಾನ್ಸ್‌ಟಿಟ್ಯೂಷನ್', 'ರಾಜ ಧಾರ್ಮ ವಿಥ್ ದಿ ಲೆಸೆನ್ಸ್ ಆಫ್ ರಾಜ ನೀತಿ' ಹೀಗೆ ಹಲವು ಪುಸ್ತಕಗಳನ್ನು ರಚಿಸಿದ್ದಾರೆ.

## 2020ನೇ ಸಾಲಿನ ಮಾಸ್ತಿ ಪ್ರಶಸ್ತಿ 6 ಜನರಿಗೆ ಲಭಿಸಿದೆ



* 2020ನೇ ಸಾಲಿನ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಟ್ರಸ್ಟ್ ನೀಡುವ"ಮಾಸ್ತಿ ಪ್ರಶಸ್ತಿ'ಯನ್ನು ಪ್ರಕಟಣೆ ಮಾಡಲಾಗಿದ್ದು, ಇದು ಮಾಸ್ತಿ ವೆಂಕಟೇಶ ಅಯ್ಯಂಗಾರ್'ರವರ 129ನೇ ಸಂಸ್ಮರಣ ವರ್ಷವಾಗಿದೆ ಹಾಗೂ ಮಾಸ್ತಿ ಪ್ರಶಸ್ತಿಯ 28ನೇ ವರ್ಷದ ಅಂಗವಾಗಿ ಈ ಪ್ರಶಸ್ತಿಗಳನ್ನು ನೀಡಲಾಗುತ್ತಿದೆ. ಈ ಮಾಸ್ತಿ ಪ್ರಶಸ್ತಿ 6 ಜನರಿಗೆ ಲಭಿಸಿದೆ. ಮಾಸ್ತಿ ಪ್ರಶಸ್ತಿ ಪಡೆದವರ ಮಾಹಿತಿ:
* ಹಿರಿಯ ಲೇಖಕಿ ಡಾ.ಸಂಧ್ಯಾ ಎಸ್. ಪೈ ಶಿಶು ಸಾಹಿತ್ಯ ಕ್ಷೇತ್ರ , ವಿಮರ್ಶಕ ಎಸ್.ಆರ್. ವಿಜಯಶಂಕರ್ ವಿಮರ್ಶೆ ಕ್ಷೇತ್ರ, ಪ್ರೊ. ಪುರುಷೋತ್ತಮ ಬಿಳಿಮಲೆ ಸಂಶೋಧನೆ ಕ್ಷೇತ್ರ, ಸುಬ್ರಾಯ ಚೊಕ್ಕಾಡಿ ಕಾವ್ಯ ಕ್ಷೇತ್ರ, ಕೇಶವ ರೆಡ್ಡಿ ಹಂದ್ರಾಳ

ಕಥೆ ಕ್ಷೇತ್ರ, ಸ. ರಘುನಾಥ ಸೃಜನಶೀಲ ಕ್ಷೇತ್ರ, ಈ ಆರು ಜನ ಸಾಹಿತಿಗಳಿಗೆ ಮಾಸ್ತಿ ಪ್ರಶಸ್ತಿ ಲಭಿಸಿದೆ.
* ಈ ಮಾಸ್ತಿ ಪ್ರಶಸ್ತಿಯು 25 ಸಾವಿರ ರೂ. ನಗದು ಮತ್ತು ಮಾಸ್ತಿ ಫಲಕ ಒಳಗೊಂಡಿರುತ್ತದೆ.

## ಮಮತಾ ಬ್ಯಾನರ್ಜಿ 'ಮಾ' ಯೋಜನೆಗೆ ಚಾಲನೆ



* ಪ್ರಸ್ತುತ ಪಶ್ಚಿಮ ಬಂಗಾಳದ ಮುಖ್ಯ ಮಂತ್ರಿಯಾಗಿರುವ ಮಮತಾ ಬ್ಯಾನರ್ಜಿ'ಯವರು ಕೇವಲ ₹5ಕ್ಕೆ ಊಟ ನೀಡುವ 'ಮಾ' ಯೋಜನೆಗೆ ಚಾಲನೆ ನೀಡಿದ್ದಾರೆ, ಈ ಯೋಜನೆಯಿಂದ ಬಡಜನರಿಗೆ ಅತೀ ಕಡಿಮೆ ದರದಲ್ಲಿ ಊಟ ಸಿಗಲಿದೆ ಎಂದು ಮುಖ್ಯಮಂತ್ರಿಗಳು ತಿಳಿಸಿದ್ದಾರೆ.
* ಸ್ವಸಹಾಯ ಶಕ್ತಿ ಗುಂಪುಗಳು ಈ 'ಮಾ' ಯೋಜನೆಯ ಅಡುಗೆಮನೆಗಳ ಕಾರ್ಯ ನಿರ್ವಹಿಸಲಿವೆ, ಇವುಗಳು ಪ್ರಾರಂಭವಾದ ನಂತರ ಪ್ರತಿ ದಿನ ಮಧ್ಯಾಹ್ನ 1 ರಿಂದ 3 ಗಂಟೆಯವರೆಗೆ ಊಟವನ್ನು ಬಡಜನರಿಗೆ ನೀಡಲಾಗುವದು, ಮತ್ತು ಪಶ್ಚಿಮ ಬಂಗಾಳ ರಾಜ್ಯದ ಎಲ್ಲ ಪ್ರದೇಶಗಳಲ್ಲಿ 'ಮಾ' ಯೋಜನೆಯ ಅಡುಗೆ ಮನೆಗಳನ್ನು ಪ್ರಾರಂಭಮಾಡಲಾಗುವದಾಗಿ ಮಾಹಿತಿ ನೀಡಿದ್ದಾರೆ.

## ಭಾರತದ ಕ್ರಿಕೆಟರ್ ನಮನ್ ಓಜಾ ಎಲ್ಲ ಮಾದರಿಯ ಕ್ರಿಕೆಟಿಗೆ ವಿದಾಯ



* ಭಾರತದ ವಿಕೆಟ್ ಕೀಪರ್ ಬ್ಯಾಟ್ಸ್ ಮನ್'ಆಗಿದ್ದ ನಮನ್ ಓಜಾ ಸದ್ಯ ಎಲ್ಲ ಮಾದರಿಯ ಕ್ರಿಕೆಟ್'ಗೆ ವಿದಾಯ ಹೇಳಿದ್ದಾರೆ, ನಮನ್ ಓಜಾ 2010ರಲ್ಲಿ ಅಂತರ್ ರಾಷ್ಟ್ರೀಯ ಕ್ರಿಕೆಟಿಗೆ ಪಾದಾರ್ಪಣೆ ಮಾಡಿದ್ದರು, ಇವರು ಇತ್ತೀಚಿಗೆ ಹರಾರೆಯಲ್ಲಿ ನಡೆದ ಶ್ರೀಲಂಕಾ ವಿರುದ್ಧ ಏಕೈಕ ಏಕದಿನ ಪಂದ್ಯವನ್ನು ಆಡುವ ಮೂಲಕ ಕ್ರಿಕೆಟ್'ಗೆ ವಿದಾಯ ಹೇಳಿದ್ದಾರೆ.
* ನಮನ್ ಓಜಾ ರವರು 7,861 ರನ್'ಗಳನ್ನೂ ರಣಜಿ ಟ್ರೋಫಿಯಲ್ಲಿ ಗಳಿಸಿದ್ದರು, ಹಾಗೂ ವಿಕೆಟ್ ಕೀಪರ್ ಆಗಿ 351 ಬ್ಯಾಟ್ಸ್ ಮನ್ ಗಳನ್ನು ರಣಜಿ ಟ್ರೋಫಿಯಲ್ಲಿ ಔಟ್ ಮಾಡಿದ್ದರು ಇದು ಇವರು ರಣಜಿ ಇತಿಹಾಸದಲ್ಲಿ ಉತ್ತಮ ಸಾಧನೆ.
* ನಮನ್ ಓಜಾ ರವರು ಐಪಿಎಲ್ ನಲ್ಲಿ ಸನ್ ರೈಸರ್ಸ್ ಹೈದರಾಬಾದ್, ರಾಜಸ್ಥಾನ ರಾಯಲ್ಸ್ ಹಾಗೂ ಡೆಲ್ಲಿ ಕ್ಯಾಪಿಟಲ್ಸ್ ತಂಡಗಳಲ್ಲಿ ಭಾಗವಹಿಸಿ ಉತ್ತಮ ಆಟವನ್ನು ಆಡಿದ್ದರು.

## ಮಾಜಿ ನ್ಯಾಯಮೂರ್ತಿ ಪಿ. ಬಿ. ಸಾವಂತ್ ವಿಧಿವಶ



* ಸುಪ್ರೀಂಕೋರ್ಟ್‌ನ ಮಾಜಿ ನ್ಯಾಯಮೂರ್ತಿ ಮತ್ತು ಭಾರತೀಯ ಪತ್ರಿಕಾ ಮಂಡಳಿಯ ಮಾಜಿ ಅಧ್ಯಕ್ಷರಾಗಿದ್ದ ಪಿ. ಬಿ. ಸಾವಂತ್'ರವರು ತಮ್ಮ 91ನೇ ವಯಸ್ಸಿನಲ್ಲಿ ನಿಧನರಾದರು.
* ಪಿ.ಬಿ.ಸಾವಂತ್ ರವರು ಬಾಂಬೆ ವಿಶ್ವವಿದ್ಯಾಲಯದಿಂದ ಕಾನೂನು (LLB) ಪದವಿ ಪಡೆದುಕೊಂಡರು, ನಂತರದ ದಿನಗಳಲ್ಲಿ ಇವರು ಬಾಂಬೆ ಹೈಕೋರ್ಟ್ ಮತ್ತು ಭಾರತದ ಸುಪ್ರೀಂ ಕೋರ್ಟ್‌ನಲ್ಲಿ ವಕೀಲರಾಗಿ ಅಭ್ಯಾಸ ಮಾಡಲು ಆರಂಭಿಸಿದ್ದರು.
* 1973 ರಲ್ಲಿ ಪಿ. ಬಿ. ಸಾವಂತ್ ಅವರನ್ನು ಬಾಂಬೆ ಹೈಕೋರ್ಟ್‌ನ ನ್ಯಾಯಾಧೀಶರನ್ನಾಗಿ ನೇಮಿಸಲಾಯಿತು, ನಂತರ ಅವರನ್ನು 1989 ರಲ್ಲಿ ಸುಪ್ರೀಂ ಕೋರ್ಟ್‌ನಲ್ಲಿ ನ್ಯಾಯಾಧೀಶರನ್ನಾಗಿ ನೇಮಿಸಲಾಯಿತು.

## ವಿಜಯಪುರ ಜಿಲ್ಲೆಯ ವಿಮಾನ ನಿಲ್ದಾಣ ನಿರ್ಮಾಣ ಕಾರ್ಯಕ್ಕೆ ಚಾಲನೆ



* ಸಿಎಂ ಬಿ. ಎಸ್. ಯಡಿಯೂರಪ್ಪನವರು ವಿಜಯಪುರ ನಗರ ಮದಭಾವಿ ಪ್ರದೇಶದ ಬಳಿ ವಿಮಾನ ನಿಲ್ದಾಣ ನಿರ್ಮಾಣ ಕಾಮಗಾರಿಗೆ ವಿಡಿಯೋ ಕಾನಫರನ್ಸ್ ಮೂಲಕ ಚಾಲನೆ ನೀಡಿದರು.
* ವಿಜಯಪುರ ನಗರದ ಮದಭಾವಿ ಎಂಬಲ್ಲಿ 727 ಎಕರೆಯ ವಿಸ್ತೀರ್ಣ ಜಾಗದಲ್ಲಿ ಖಾಸಗಿ ಕಂಪನಿಯ ಜೊತೆಯಾಗಿ 220 ಕೋಟಿ ರೂ. ವೆಚ್ಚದಲ್ಲಿ ಗ್ರೀನ್ ಫೀಲ್ಡ್ ವಿಮಾನ ನಿಲ್ದಾಣ ನಿರ್ಮಾಣವಾಗುತ್ತದೆ ಎಂದು ತಿಳಿಸಿದರು. ವಿಮಾನ ನಿಲ್ದಾಣ ಮೊದಲ ಹಂತದ ಕಾಮಗಾರಿಗೆ 95 ಕೋಟಿ ರೂ. ನೀಡಿ ನಿರ್ಮಾಣದ ಕಾಮಗಾರಿಗೆ ಚಾಲನೆ ನೀಡಲಾಗುತ್ತದೆ ಎಂದು ತಿಳಿಸಿದರು.

# 17-02-2021

## ಹಿರಿಯ ಪತ್ರಕರ್ತ ನಿರಂಜನ್ ನಿಕ್ಕಂ ವಿಧಿವಶ



* ಮೈಸೂರಿನ ಹಿರಿಯ ಪತ್ರಕರ್ತ ಹಾಗೂ ಬರಹಗಾರರಾದ ನಿರಂಜನ್ ನಿಕ್ಕಂ ಅವರು ತಮ್ಮ 66ನೇ ವಯಸ್ಸಿನಲ್ಲಿ ವಿಧಿವಶರಾಗಿದ್ದಾರೆ.
* ಬರಹಗಾರ ಮತ್ತು ಪತ್ರಕರ್ತರಾಗಿರುವ ನಿರಂಜನ್ ನಿಕ್ಕಂ ಅವರು ಡೆಕ್ಕನ್ ಹೆರಾಲ್ಡ್ ಪತ್ರಿಕೆಯ ಮೈಸೂರು ಬ್ಯೂರೋ ಮುಖ್ಯಸ್ಥರಾಗಿ ನಿವೃತ್ತಿ ಹೊಂದಿದ್ದಾರೆ.

## RBIನಿಂದ ಹೊಸ 20 ರೂ. ಮುಖಬೆಲೆಯ ನಾಣ್ಯ ಚಲಾವಣೆ




* ಭಾರತೀಯ ರಿಸರ್ವ್ ಬ್ಯಾಂಕ್ (RBI) ಹೊಸದಾಗಿ 20 ರೂ. ಮುಖಬೆಲೆಯ ನಾಣ್ಯ ಚಲಾವಣೆಗೆ ಸಮ್ಮತಿಯನ್ನು ನೀಡಿದೆ, ಸದ್ಯ RBIನಿಂದ 20 ರೂ. ಮುಖಬೆಲೆಯ ನಾಣ್ಯಗಳನ್ನು ಪ್ರಾದೇಶಿಕ ಕಚೇರಿಗಳ ಮೂಲಕ ಬ್ಯಾಂಕ್'ಗಳಿಗೆ ಜನರ ಬಳಕೆಗಾಗಿ ರವಾನಿಸಲಾಗುತ್ತಿದೆ.
* ಈ 20 ರೂ. ಮುಖಬೆಲೆಯ ನಾಣ್ಯಗಳು 2020ರ ಏಪ್ರಿಲ್ ತಿಂಗಳಿನಲ್ಲಿ ಸಾರ್ವಜನಿಕರ ಬಳಕೆಗೆ ಬರಬೇಕಿತ್ತು ಆದರೆ ಕೋವಿಡ್ 19 ಸಾಕ್ರಾಮಿಕ ರೋಗದಿಂದಾಗಿ ಲಾಕ್‌ಡೌನ್ ಜಾರಿಯಾಗಿದ್ದರಿಂದ ನಾಣ್ಯಗಳನ್ನು ತಾತ್ಕಾಲಿಕವಾಗಿ ತಡೆ ಹಿಡಿಯಲಾಗಿತ್ತು, ಪ್ರಸ್ತುತ ಕರ್ನಾಟಕ ರಾಜ್ಯ ಸೇರಿ ದೇಶದ ಬಹುತೇಕ ಪ್ರದೇಶಗಳಲ್ಲಿ ಈ ನಾಣ್ಯಗಳು ಚಲಾವಣೆಗೆ ಬರಲಿವೆ, ಹಾಗೂ ಇದರಿಂದ ಚಿಲ್ಲರೆ ಪರಿಸ್ಥಿತಿಯನ್ನು ಸರಿದೂಗಿಸಲು ಅನುಕೂಲವಾಗುತ್ತದೆ ಎಂದು RBI ಅಭಿಪ್ರಾಯಪಟ್ಟಿದೆ. ಈ ನಾಣ್ಯದ ಮಾಹಿತಿ:
* RBIನಿಂದ ಬಿಡುಗಡೆಗೊಂಡಿರುವ 20 ರೂ. ಮುಖಬೆಲೆಯ ನಾಣ್ಯವು 8.54 ಗ್ರಾಂ ತೂಕವಿದೆ, ಈ ನಾಣ್ಯವನ್ನು ನಿಕ್ಕಲ್, ಸತು ಹಾಗೂ ತಾಮ್ರವನ್ನು ಬಳಸಿ ತಯಾರಿಸಲಾಗಿದೆ ಎಂದು ಮಾಹಿತಿಯಿದೆ.
* RBIನಿಂದ ಬಿಡುಗಡೆಗೊಂಡಿರುವ ಈ 20 ರೂ. ಮುಖಬೆಲೆಯ ನಾಣ್ಯವೂ ಕಾನೂನು ಪ್ರಕಾರ ಪ್ರಸ್ತುತ ದೇಶದಲ್ಲಿ ಚಲಾವಣೆಯಲ್ಲಿರುವ ಎಲ್ಲಾ ನಾಣ್ಯಗಳು ಹಾಗೂ ನೋಟುಗಳಿಗೆ ಇರುವ ಬೆಲೆಯನ್ನು ಈ ನಾಣ್ಯ ಕೂಡ ಹೊಂದಿದೆ ಎಂದು RBI ತಿಳಿಸಿದೆ.
* ಈ ಹಿಂದೆ RBIನಿಂದ 10 ರೂ. ಮುಖ ಬೆಲೆಯ ನಾಣ್ಯವನ್ನು ಬಿಡುಗಡೆ ಮಾಡಿತ್ತು, ಆದರೆ ಕೆಲ ಸುಳ್ಳು ಸುದ್ದಿಗಳಿಂದ ಆ ನಾಣ್ಯದ ಬಳಕೆಯಾಗುತ್ತಿಲ್ಲ ಎಂದು RBI ಆರೋಪ ಮಾಡಿತ್ತು ಇನ್ನು ಮುಂದೆ ಸುಳ್ಳು ಸುದ್ದಿ ಹರಡಿದ ವ್ಯಕ್ತಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುತ್ತದೆ ಎಂದು RBI ತಿಳಿಸಿದೆ.
* ಪ್ರಸ್ತುತ RBI ಬಿಡುಗಡೆ ಮಾಡಿರುವ 10 ರೂ. ಹಾಗೂ 20 ರೂ. ಮುಖ ಬೆಲೆಯ ನಾಣ್ಯಗಳು ಚಲಾವಣೆಯಲ್ಲಿ ಇರಲಿವೆ ಎಂದು ತಿಳಿಸಲಾಗಿದೆ, ಹೆಚ್ಚಿನ ವಿವರಗಳಿಗಾಗಿ ಆರ್‌ಬಿಐ ವೆಬ್‌ಸೈಟ್‌ಗೆ ಭೇಟಿ ನೀಡಿ ಮಾಹಿತಿಯನ್ನು ಪಡೆಯಬಹುದಾಗಿದೆ.

## ವಿಶ್ವದ ನಂಬರ್ 01 ಶ್ರೀಮಂತ ಉದ್ಯಮಿ ಜೆಫ್ ಬೆಜೋಸ್



* ವಿಶ್ವದ ಶ್ರೀಮಂತ ಉದ್ಯಮಿಗಳ ಪಟ್ಟಿಯಲ್ಲಿ ಮೊದಲ ಪಡೆದುಕೊಂಡ ಜೆಫ್ ಬೆಜೋಸ್.
* ಪ್ರಸ್ತುತ ಇವರು ಅಮೆರಿಕದ ಅಂತರ್ಜಾಲ ಉದ್ಯಮಿ, ಕೈಗಾರಿಕೋದ್ಯಮಿ, ಮಾಧ್ಯಮ ಮಾಲೀಕ ಮತ್ತು ಹೂಡಿಕೆದಾರ, ಮತ್ತು ಅವರು ಬಹುರಾಷ್ಟ್ರೀಯ ತಂತ್ರಜ್ಞಾನ ಕಂಪನಿ ಅಮೆಜಾನ್‌ನ ಸ್ಥಾಪಕ ಮತ್ತು ಸಿಇಒ(CEO) ಆಗಿದ್ದಾರೆ.
* ಈಗೀನ ಶ್ರೀಮಂತ ಉದ್ಯಮಿಯಾಗಿರುವ ಜೆಫ್ ಬೆಜೊಸ್ ಅವರು ಪ್ರಸ್ತುತ 191.2 ಬಿಲಿಯನ್ ಡಾಲರ್ ಆಸ್ತಿಯನ್ನು ಹೊಂದಿದ್ದಾರೆ.
* ಕಳೆದ ತಿಂಗಳು ವಿಶ್ವದ ಶ್ರೀಮಂತ ಉದ್ಯಮಿಯಾಗಿರುವ ಎಲಾನ್ ಮಸ್ಕ್ ಮೊದಲ ಸ್ಥಾನದಿಂದ ಹಿಂದೆ ಸರಿದಿದ್ದಾರೆ, ಪ್ರಸ್ತುತ ಎಲಾನ್ ಮಸ್ಕ್ ಅವರ ಟೆಸ್ಲಾ ಇಂಕ್ ಶೇರುಗಳು ಶೇಕಡ 2.4 ಕುಸಿತ ಕಂಡ ಪರಿಣಾಮವಾಗಿ 4.6 ಬಿಲಿಯನ್ ಡಾಲರ್ ನಷ್ಟು ಆಸ್ತಿ ಕರಗಿದೆ, ಇದರಿಂದಾಗಿ ಎಲಾನ್ ಮಸ್ಕ್ ರವರು ಮೊದಲ ಸ್ಥಾನದಿಂದ ಕೆಳಗಿಳಿದಿದ್ದಾರೆ ಎಂದು ಬ್ಲೂಂಬರ್ಗ್ ಬಿಲಿಯನೇರ್ ಸೂಚ್ಯಂಕ ಶ್ರೇಯಾಂಕ ಮಾಹಿತಿಯನ್ನು ನೀಡಿದೆ.

## ಶೀಘ್ರದಲ್ಲಿ ಭಾರತದ ಅತೀ ದೊಡ್ಡ ಹಾಕಿ ಸ್ಟೇಡಿಯಂ ಒಡಿಶಾದಲ್ಲಿ ಪ್ರಾರಂಭ



* ಭಾರತದಲ್ಲೇ ಅತೀ ದೊಡ್ಡ ಹಾಕಿ ಕ್ರೀಡಾಂಗಣವು ಒಡಿಶಾದ ರೂರ್ಕೆಲಾ ಎಂಬಲ್ಲಿ ಸ್ಥಾಪನೆಯಾಗಲಿದೆ ಎಂದು ಒಡಿಶಾ ರಾಜ್ಯದ ಮುಖ್ಯಮಂತ್ರಿ ನವೀನ್ ಪಟ್ನಾಯಕ್ ಶಿಲಾನ್ಯಾಸ ನೆರವೇರಿಸಿ ಈ ಮಾಹಿತಿ ನೀಡಿದರು.

* ಈ ಹಾಕಿ ಕ್ರೀಡಾಂಗಣಕ್ಕೆ ಸ್ವಾತಂತ್ರ್ಯ ಹೋರಾಟಗಾರ ಬಿರ್ಸಾ ಮುಂಡಾ ಅವರ ಹೆಸರನ್ನು ನೇಮಕ ಮಾಡಲಾಗುವದು ಜೊತೆಗೆ ಈ ಕ್ರೀಡಾಂಗಣವು 20 ಸಾವಿರ ವೀಕ್ಷಕರ ಸಾಮರ್ಥ್ಯದ ಹೊಂದಿರಲಿದೆ.
* ಒಡಿಶಾ ರಾಜ್ಯದ ಮುಖ್ಯಮಂತ್ರಿ ನವೀನ್ ಪಟ್ನಾಯಕ್'ಅವರ ಪ್ರಕಾರ 2023ರ ಹಾಕಿ ವಿಶ್ವಕಪ್ ಪಂದ್ಯಗಳನ್ನು ಈ ಹಾಕಿ ಕ್ರೀಡಾಂಗಣದಲ್ಲಿ ನಡೆಸುವ ಯೋಜನೆಯನ್ನು ಹೊಂದಲಾಗಿದೆ.

## ರಾಜ್ಯಸಭೆಯ ಪ್ರತಿಪಕ್ಷ ನಾಯಕನಾಗಿ ಮಲ್ಲಿಕಾರ್ಜುನ ಖರ್ಗೆ ನೇಮಕ



* ಈ ಮೊದಲಿನ ಪ್ರತಿಪಕ್ಷ ನಾಯಕರಾಗಿದ್ದ ಗುಲಾಂ ನಬಿ ಆಜಾದ್ ರವರ ಅಧಿಕಾರಾವಧಿ ಮುಕ್ತಾಯಗೊಂಡ ಹಿನ್ನೆಲೆಯಿಂದಾಗಿ, ಕರ್ನಾಟಕದ ಕಾಂಗ್ರೆಸ್‌ನ ಹಿರಿಯ ನಾಯಕರಾಗಿರುವ ಮಲ್ಲಿಕಾರ್ಜುನ ಖರ್ಗೆಅವರನ್ನು ರಾಜ್ಯಸಭೆಯ ಪ್ರತಿಪಕ್ಷ ನಾಯಕನಾಗಿ ಅಧಿಕೃತವಾಗಿ ನೇಮಕ ಮಾಡಲಾಗಿದೆ ಎಂದು ರಾಜ್ಯಸಭಾ ಅಧ್ಯಕ್ಷರು ಹಾಗೂ ಉಪರಾಷ್ಟ್ರಪತಿ ಎಂ. ವೆಂಕಯ್ಯ ನಾಯ್ಡು ಅವರು ಪ್ರಕಟಣೆ ಹೊರಡಿಸಿದ್ದಾರೆ.

## ಪುದುಚೇರಿ ಲೆಫ್ಟಿನೆಂಟ್ ಗವರ್ನರ್ ಹುದ್ದೆಯಿಂದ ಕಿರಣ್ ಬೇಡಿ ವಜಾ




* ನಿವೃತ್ತ ಐಪಿಎಸ್ ಅಧಿಕಾರಿಯಾಗಿರುವ ಕಿರಣ್ ಬೇಡಿ ಅವರನ್ನು ಪುದುಚೇರಿ ಲೆಫ್ಟಿನೆಂಟ್ ಗವರ್ನರ್ ಹುದ್ದೆಯಿಂದ ವಜಾಗೊಳಿಸಲಾಗಿದೆ, ಎಂದು ರಾಷ್ಟ್ರಪತಿ ಭವನದಿಂದ ಆದೇಶ ಹೊರಡಿಸಿದೆ.
* ಕಿರಣ್ ಬೇಡಿ ಅವರು 2016 ರಲ್ಲಿ ಪುದುಚೇರಿ ಲೆಫ್ಟಿನೆಂಟ್ ಗವರ್ನರ್ ಆಗಿ ನೇಮಕಗೊಂಡಿದ್ದರು, ಇವರ ಖಡಕ್ ಆದೇಶಗಳಿಂದ ಎಲ್ಲರ ಗಮನ ಸೆಳೆದಿದ್ದರು.
* ಪ್ರಸ್ತುತ ತೆಲಂಗಾಣದ ರಾಜ್ಯದ ರಾಜ್ಯಪಾಲರಾದ ಡಾ. ತಮಿಳ್ ಸಾಯಿ ಅವರಿಗೆ ಸದ್ಯ ಪುದುಚೇರಿಯ ಲೆಫ್ಟಿನೆಂಟ್ ಗವರ್ನರ್ ಆಗಿ ಕಾರ್ಯ ನಿರ್ವಹಿಸಲು ನೇಮಕ ಮಾಡಲಾಗಿದೆ.

# 18-02-2021

## ಭಾರತದಲ್ಲಿ ಮೊಟ್ಟ ಮೊದಲ ಬಾರಿ ಮಹಿಳೆಗೆ ಗಲ್ಲು ಶಿಕ್ಷೆ



* ಪ್ರಸ್ತುತ ಭಾರತಕ್ಕೆ ಸ್ವಾತಂತ್ರ ಬಂದು ಸರಿ ಸುಮಾರು 74 ವರ್ಷಗಳು ಕಳೆದವು ಆದರೆ ಇದೆ ಮೊದಲ ಬಾರಿಗೆ ಭಾರತದಲ್ಲಿ ಉತ್ತರ ಪ್ರದೇಶದ ಮಹಿಳೆಯೊಬ್ಬಳಿಗೆ ಗಲ್ಲು ಶಿಕ್ಷೆಯನ್ನು ನೀಡಲಾಗುತ್ತಿದೆ. ಮಹಿಳೆಯನ್ನು ಗಲ್ಲಿಗೇರಿಸಲು ಕಾರಣ:
* ಉತ್ತರ ಪ್ರದೇಶದ ಅಮ್ರೋಹಾ ಮೂಲದ ಮಹಿಳೆಯಾಗಿರುವ ಶಬ್ನಮ್ ನನ್ನು ಮಥುರಾ ಜೈಲಿನಲ್ಲಿ ನೇಣುಗಂಬ ಏರಲ್ಲಿದಾಳೆ, ಈಕೆ ನೇಣುಗಂಬ ಏರಲಿರುವ ಸ್ವತಂತ್ರ ಭಾರತದ ಮೊದಲ ಮಹಿಳೆಯಾಗಿದ್ದಾಳೆ.
* ಉತ್ತರ ಪ್ರದೇಶದ ಮಹಿಳೆಯಾಗಿರುವ ಶಬ್ನಮ್ 2008ರ ಏಪ್ರಿಲ್'ನಲ್ಲಿ ತನ್ನ ಪ್ರಿಯತಮ ಸಲೀಂ ಜೊತೆ ಸೇರಿ ತನ್ನದೆ ಆದ ಕುಟುಂಬದ 7 ಸದಸ್ಯರನ್ನ ಕೊಲೆ ಮಾಡಿದ್ದಳು, ಆದ ಕಾರಣ ಈ ಪ್ರೇಮಿಗಳಿಗೆ ನ್ಯಾಯಾಲಯವು ಗಲ್ಲು ಶಿಕ್ಷೆಯನ್ನು ನೀಡಿದೆ, ಸದ್ಯ ಶಬ್ನಮ್ ಬರೇಲಿಯ ಸೆರೆಮನೆ ಮತ್ತು ಸಲೀಂ ಆಗ್ರಾ ಜೈಲಿನಲ್ಲಿದ್ದಾರೆ.
* ಈ ಹಿಂದೆ ಅಂದರೆ ಸುಮಾರು 150 ವರ್ಷಗಳ ಹಿಂದೆ ಮಥುರಾ ಜೈಲಿನಲ್ಲಿ ಹೆಣ್ಣು ಮಕ್ಕಳನ್ನು ಗಲ್ಲಿಗೇರಿಸುವ ಕೋಣೆ ನಿರ್ಮಿಸಲಾಗಿತ್ತು, ಆದರೆ ಇಲ್ಲಿಯತನಕ ಯಾವಬ್ಬ ಮಹಿಳೆಯನ್ನು ಗಲ್ಲಿಗೇರಿಸಿರಲಿಲ್ಲ ಆದರೆ ಇದೀಗ ಉತ್ತರ ಪ್ರದೇಶದ ಶಬ್ನಮ್'ನನ್ನು ಗಲ್ಲಿಗೇರಿಸಲಾಗುತ್ತಿದೆ.
* ಉತ್ತರ ಪ್ರದೇಶದ ಶಬ್ನಮ್'ನ ಪ್ರಕರಣವು ಅಮ್ರೋಹಾ ನ್ಯಾಯಾಲಯದಲ್ಲಿ 2 ವರ್ಷ 3 ತಿಂಗಳ ಕಾಲ ವಿಚಾರಣೆ ನಡೆದಿತ್ತು, 2010 ಜುಲೈ 15ರಂದು ಜಿಲ್ಲಾ ನ್ಯಾಯಾಧೀಶ ಸಾ.ಎ.ಹುಸ್ಸೈನಿ ರವರು ಆರೋಪಿಗಳಾಗಿರುವ ಶಬ್ನಮ್ ಮತ್ತು ಸಲೀಂಗೆ ಗಲ್ಲು ಶಿಕ್ಷೆ ವಿಧಿಸಿ ತೀರ್ಪು ನೀಡಿದರು.

## ದೆಹಲಿ ಸರ್ಕಾರದಿಂದ ಸರ್ಕಾರಿ ಕಟ್ಟಡಗಳಲ್ಲಿ ಮಂಗಳಮುಖಿಯರಿಗೆ ಪ್ರತ್ಯೇಕ ಶೌಚಾಲಯ ನಿರ್ಮಾಣ



* ದೆಹಲಿ ಸರ್ಕಾರದಿಂದ ಮಂಗಳಮುಖಿಯರಿಗೆ ಎಲ್ಲಾ ಸರ್ಕಾರಿ ಇಲಾಖೆಗಳಲ್ಲಿ, ಮತ್ತು ಮಹಾನಗರ ಪಾಲಿಕೆಗಳು ಮತ್ತು ಸ್ವಾಯತ್ತ ಸಂಸ್ಥೆಗಳಿಗೆ ಆಯಾ ಕಚೇರಿಗಳಲ್ಲಿ ಪ್ರತ್ಯೇಕ ಶೌಚಾಲಯಗಳನ್ನೂ ನಿರ್ಮಾಣ ಮಾಡಲು ಆದೇಶ ಸೂಚಿಸಿದೆ.

ಒಂದು ವೇಳೆ ಮಂಗಳಮುಖಿಯರಿಗೆ ತಕ್ಷಣವೇ ಪ್ರತ್ಯೇಕ ಶೌಚಾಲಯಗಳನ್ನು ನಿರ್ಮಿಸಲು ಸಾಧ್ಯವಾಗದಿದ್ದರೆ, ಅಂಗವಿಕಲರಿಗೆ ಲಭ್ಯವಿರುವ ಶೌಚಾಲಯಗಳನ್ನು ಬಳಕೆಗಾಗಿ ನೀಡಬೇಕೆಂದು ತಿಳಿಸಲಾಗಿದೆ.
* ಮಂಗಳಮುಖಿ ಹಕ್ಕುಗಳ ಸಂರಕ್ಷಣೆ ಕಾಯ್ದೆ 2019 ರ ಸೆಕ್ಷನ್ 22 ರ ನಿಬಂಧನೆಗಳಿಗೆ ಅನುಸಾರವಾಗಿ ಮಂಗಳಮುಖಿಯರಿಗೆ ಪ್ರತ್ಯೇಕವಾಗಿ ಶೌಚಾಲಯಗಳನ್ನೂ ನಿರ್ಮಾಣ ಮಾಡಲು ದೆಹಲಿ ಸರ್ಕಾರ ತಿಳಿಸಿದೆ.

## ಮಲೇಷ್ಯಾದಿಂದ ಮ್ಯಾನ್ಮಾರ್‌ನ 1200 ಮಂದಿ ವಲಸಿಗರ ಗಡಿಪಾರು



* ಮಲೇಷ್ಯಾದಿಂದ ಮ್ಯಾನ್ಮಾರ್‌ನ 1200 ಮಂದಿ ವಲಸಿಗರನ್ನು ಗಡಿಪಾರು ಮಾಡಲು ಆದೇಶ ನೀಡಲಾಗಿದೆ ಎಂದು ಮಲೇಷ್ಯಾದ ವಲಸೆ ಮುಖ್ಯಸ್ಥ ಖೈರುಲ್ ಝೈಮಿ ದೌಡ ರವರು ಮಾಹಿತಿಯನ್ನು ನೀಡಿದ್ದಾರೆ. ವಲಸಿಗರನ್ನು ಗಡಿಪಾರು ಮಾಡಲು ಕಾರಣ:
* ಮ್ಯಾನ್ಮಾರ್‌ನ 1200 ಜನ ವಲಸಿಗರನ್ನು ಸೂಕ್ತ ಪ್ರಯಾಣದ ದಾಖಲಾತಿಗಳ ಕೊರತೆ, ಸಾಮಾಜಿಕ ಭೇಟಿಗಾಗಿ ನೀಡಿದ್ದ ಅನುಮತಿಯನ್ನು ಉಲ್ಲಂಘಿಸಿ, ದೀರ್ಘಕಾಲ ಮಲೇಷ್ಯಾ ದೇಶದಲ್ಲಿ ಉಳಿದುಕೊಂಡ ಹೀಗೆ ಹಲವು ಅಪರಾಧಗಳಿಗಾಗಿ ಮ್ಯಾನ್ಮಾರ್‌ನ ವಲಸಿಗರನ್ನು ಬಂಧಿಸಲಾಗಿದೆ ಎಂದು ಮಲೇಷ್ಯಾ ತಿಳಿಸಿತ್ತು.
* ಇದೆ ಫೆಬ್ರುವರಿ 23 ರಂದು ಮ್ಯಾನ್ಮಾರ್ ನೌಕಾಪಡೆಯ ಹಡಗುಗಳಲ್ಲಿ ಮ್ಯಾನ್ಮಾರ್‌ನ 1200 ಜನ ಬಂಧಿತ ವಲಸಿಗರನ್ನು ಗಡಿಪಾರು ಮಾಡಲಾಗುವುದು ಎಂಬ ಮಾಹಿತಿ ತಿಳಿದು ಬಂದಿದೆ.

## ಈ ವರ್ಷ ಆನ್‌ಲೈನ್‌ನಲ್ಲಿ 'ಪರೀಕ್ಷಾ ಪೆ ಚರ್ಚಾ'



* ಕೇಂದ್ರ ಶಿಕ್ಷಣ ಸಚಿವ ರಮೇಶ್ ಪೋಖ್ರಿಯಾಲ್ ನಿಶಾಂಕ್'ರವರು ಈ ವರ್ಷ ಆನ್‌ಲೈನ್‌ನಲ್ಲಿ ಪರೀಕ್ಷಾ ಪೆ ಚರ್ಚಾ ಕಾರ್ಯಕ್ರಮ ನಡೆಯಲಿದೆ ಎಂದು ಟ್ವೀಟ್ ಮಾಡುವ ಮೂಲಕ ತಿಳಿಸಿದ್ದಾರೆ, ಈ ಪರೀಕ್ಷಾ ಪೆ ಚರ್ಚಾ ಕಾರ್ಯಕ್ರಮವು ಪ್ರಧಾನಿ ನರೇಂದ್ರ ಮೋದಿ ಮತ್ತು ವಿದ್ಯಾರ್ಥಿಗಳೊಂದಿಗೆ ಪರೀಕ್ಷೆ ಕುರಿತು ನಡೆಸುವ ಸಂವಾದವಾಗಿದೆ.
* ಈ ಪರೀಕ್ಷಾ ಪೆ ಚರ್ಚಾ ಕಾರ್ಯಕ್ರಮಕ್ಕೆ ನೋಂದಣಿ ಪ್ರಾರಂಭವಾಗಿ ಇದು ಮಾರ್ಚ್ 14 ರಂದು ನೋಂದಣಿ ಮುಕ್ತಾಯಗೊಳ್ಳಲಿದೆ.
* ಕಳೆದ ವರ್ಷ ಫೆ.16ರಂದು ಈ ಪರೀಕ್ಷಾ ಪೆ ಚರ್ಚಾ ಕಾರ್ಯಕ್ರಮದ ಮೊದಲ ಆವೃತ್ತಿ ತಾಲ್‌ಕಟೋರಾ ಸ್ಟೇಡಿಯಂನಲ್ಲಿ ನಡೆಸಲಾಗಿತ್ತು, ಈ ಕಾರ್ಯಕ್ರಮವು ಪ್ರಧಾನಿ ಮೋದಿಯವರು ಶಾಲೆ ಮತ್ತು ಕಾಲೇಜು ವಿದ್ಯಾರ್ಥಿಗಳೊಂದಿಗೆ ನಡೆಸಿದ ಸಂವಾದವಾಗಿತ್ತು.

## ರಷ್ಯಾ ಇರಾನ್ ನೌಕಾಪಡೆ ತರಬೇತಿಯಲ್ಲಿ ಭಾರತ ಭಾಗವಹಿಸುತ್ತಿಲ್ಲ



* ಇರಾನ್ ಮತ್ತು ರಷ್ಯಾ ದೇಶಗಳು ಹಿಂದೂ ಮಹಾಸಾಗರ ಪ್ರದೇಶದಲ್ಲಿ ಆಯೋಜಿಸಿರುವ ಎರಡು ದಿನಗಳ ತರಬೇತಿಯಲ್ಲಿ ಭಾರತೀಯ ನೌಕಾಪಡೆ ಭಾಗವಹಿಸಿಲ್ಲ ಎಂದು ಭಾರತೀಯ ನೌಕಾಪಡೆ ಮಾಹಿತಿಯನ್ನು ನೀಡಿದೆ.
* ಈ ಹಿಂದೆ 2019 ರಲ್ಲಿ ಇರಾನ್, ರಷ್ಯಾ ಮತ್ತು ಚೀನಾ ದೇಶಗಳಿಂದ ನೌಕಾ ತರಬೇತಿಯನ್ನು ನಡೆಸಲಾಗಿತ್ತು.
* ಇರಾನ್ ಮತ್ತು ರಷ್ಯಾದ ನೌಕಾ ತರಬೇತಿ ಫೆಬ್ರುವರಿ 16 ರಂದು ಪ್ರಾರಂಭವಾಗಿದೆ ಹಾಗು ಇದನ್ನು ಇರಾನ್ ರಷ್ಯಾ ಮ್ಯಾರಿಟೈಮ್ ಸೆಕ್ಯುರಿಟಿ ಬೆಲ್ಟ್ 2021 ಎಂದು ಕರೆಯಲಾಗುತ್ತದೆ, ಈ ತರಬೇತಿಯಲ್ಲಿ ಭಾರತ ಭಾಗವಹಿಸುತ್ತಿಲ್ಲ ಎಂದು ಭಾರತೀಯ ನೌಕಾಪಡೆ ತಿಳಿಸಿದೆ.
* ಇರಾನ್ ಮತ್ತು ರಷ್ಯಾದ ಈ ನೌಕಾಪಡೆ ತರಬೇತಿಯು 17,000 ಚದರ ಕಿ.ಮೀ ವಿಸ್ತೀರ್ಣದ ವ್ಯಾಪ್ತಿಯಲ್ಲಿ ಹಿಂದೂ ಮಹಾಸಾಗರದ ಉತ್ತರ ಭಾಗದಲ್ಲಿ ನಡೆಯಿತು.
* ಈ ನೌಕಾಪಡೆ ತರಬೇತಿಯಲ್ಲಿ ವಾಯು ಗುರಿಗಳನ್ನು ಕೇಂದ್ರವಾಗಿರಿಸಿಕೊಂಡು ಗುರಿನಾಶ ಪಡಿಸುವುದು ಮತ್ತು ಸಮುದ್ರದಲ್ಲಿನ ಗುರಿಗಳನ್ನು ನಾಶಪಡಿಸುವುದು, ಹಾಗೂ ಕಡಲ್ಗಳ್ಳರಿಂದ ಅಪಹರಿಸಿದ ಹಡಗುಗಳನ್ನು ಮುಕ್ತಗೊಳಿಸುವುದು, ಈ ತರಬೇತಿಯಲ್ಲಿ ನಡೆಸಲಾಗಿತ್ತು.

## ಕ್ವಾಡ್ ಸಚಿವರ ಸಭೆ



* ಅಮೆರಿಕ, ಜಪಾನ್ ಮತ್ತು ಆಸ್ಟ್ರೇಲಿಯಾ ದೇಶಗಳನ್ನೊಳಗೊಂಡ ಕ್ವಾಡ್ ಒಕ್ಕೂಟದ ವಿದೇಶಾಂಗ ಸಚಿವರ ಸಭೆಯಲ್ಲಿ ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅವರು ವರ್ಚುವಲ್ ಸಭೆಯ ಮೂಲಕ ಪಾಲ್ಗೊಳ್ಳಲಿದ್ದಾರೆ. ಈ

ಸಭೆಯಲ್ಲಿ ಇಂಡೋ ಪೆಸಿಫಿಕ್ ವಲಯದ ಪ್ರಾದೇಶಿಕ ಮತ್ತು ಜಾಗತಿಕ ವಿಷಯಗಳ ಮಾಹಿತಿಯನ್ನು ಮುಕ್ತವಾಗಿ ಚರ್ಚೆ ಮಾಡಲಾಗುತ್ತದೆ.

* ಕ್ವಾಡ್ ಸಭೆಯು ಅಮೆರಿಕದಲ್ಲಿ ಜೋ ಬೈಡನ್ ಅವರು ಅಧ್ಯಕ್ಷರಾದ ನಂತರ ಜರುಗುತ್ತಿರುವ ಮೊದಲ ಕ್ವಾಡ್ ಸದಸ್ಯ ರಾಷ್ಟ್ರಗಳ ಸಭೆಯಾಗಿದೆ.
* ಭಾರತ, ಆಸ್ಟ್ರೇಲಿಯಾ, ಜಪಾನ್ ಮತ್ತು ಯುಎಸ್ ಅನ್ನು ಒಳಗೊಂಡಿರುವ ಗುಂಪಿನ ವಿದೇಶಾಂಗ ಮಂತ್ರಿಗಳ ಮೂರನೇ ಸಭೆಯು 2020 ರ ಅಕ್ಟೋಬರ್ 6 ರಂದು ಟೋಕಿಯೊದಲ್ಲಿ ನಡೆದ ಅವರ ಕೊನೆಯ ಸಭೆಯಿಂದ ಉಪಯುಕ್ತವಾದ ವಿನಿಮಯವನ್ನು ಮುಂದುವರಿಸಲು ಒಂದು ಅವಕಾಶವನ್ನು ಒದಗಿಸುತ್ತದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ತಿಳಿಸಿದೆ.
* ಕೋವಿಡ್ 19 ಸಾಂಕ್ರಾಮಿಕ ರೋಗವನ್ನು ಎದುರಿಸಲು, ಜಾಗತಿಕ ಹವಾಮಾನ ಬದಲಾವಣೆ ಮತ್ತು ಪರಸ್ಪರ ಹಿತಾಸಕ್ತಿಯ ಇತರ ಸಮಸ್ಯೆಗಳನ್ನು ಬಗೆಹರಿಸಲು ವಿದೇಶಾಂಗ ವ್ಯವಹಾರಗಳ ಸಚಿವ ಎಸ್ ಜೈಶಂಕರ್ ಮತ್ತು ಕ್ವಾಡ್‌ನ ಇತರ ಸದಸ್ಯರಿಂದ ಅವರ ಸಹವರ್ತಿಗಳು ಚರ್ಚಿಸಲಿದ್ದಾರೆ ಎಂದು ತಿಳಿಸಲಾಗಿದೆ.

### ಕೇಂದ್ರ ಮಾಜಿ ಸಚಿವ ಕ್ಯಾಪ್ಟನ್ ಸತೀಶ್ ಶರ್ಮಾ ವಿಧಿವಶ



* ಕಾಂಗ್ರೆಸ್ ಮುಖಂಡ ಹಾಗೂ ಕೇಂದ್ರದ ಮಾಜಿ ಸಚಿವ ಕ್ಯಾಪ್ಟನ್ ಸತೀಶ್ ಶರ್ಮಾರವರು ತಮ್ಮ 73ನೇ ವಯಸ್ಸಿನಲ್ಲಿ ನಿಧನರಾಗಿದ್ದಾರೆ.
* ಸತೀಶ್ ಸಿ. ಶರ್ಮಾ ರವರು 11 ಅಕ್ಟೋಬರ್ 1947 ರಂದು ತೆಲಂಗಾಣದ ಸಿಕಂದರಾಬಾದ್ನಲ್ಲಿ ಜನಿಸಿದ್ದರು ಇವರು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷವನ್ನು ಪ್ರತಿನಿಧಿಸಿದ್ದರು ಮತ್ತು ಭಾರತ ಸರ್ಕಾರದಲ್ಲಿ ಕೇಂದ್ರ ಸಚಿವ ಸಂಪುಟದ ಮಾಜಿ ಸದಸ್ಯರಾಗಿದ್ದರು. ಸತೀಶ್ ಶರ್ಮಾ ರಾಜಕೀಯ ವೃತ್ತಿ :
* 1991 ರಲ್ಲಿ ರಾಜೀವ್ ಗಾಂಧಿಯವರ ಅಮೆಥಿಯ ಕ್ಷೇತ್ರದಿಂದ ನಡೆದ ಉಪಚುನಾವಣೆಯಲ್ಲಿ ಅವರು ಲೋಕಸಭೆಗೆ ಆಯ್ಕೆಯಾದರು. ಜನವರಿ 1993 ರಿಂದ ಡಿಸೆಂಬರ್ 1996 ರವರೆಗೆ ಅವರು ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವರಾಗಿದ್ದರು, ಮತ್ತು 1996 ರಲ್ಲಿ ಮತ್ತೆ ಅಮೆಥಿಯಿಂದ ಲೋಕಸಭೆಗೆ ಆಯ್ಕೆಯಾದರು, ಮತ್ತು 1998 ರಲ್ಲಿ ಅಮೆಥಿಯಲ್ಲಿ ಸೋತ ನಂತರ, 1999 ರಲ್ಲಿ ರಾಯ್ಬರೇಲಿಯಿಂದ ಮತ್ತೆ ಲೋಕಸಭೆಗೆ ಆಯ್ಕೆಯಾಗಿದ್ದರು.

## 19-02-2021

### ಆಸ್ಟ್ರೇಲಿಯಾದಲ್ಲಿ ಸುದ್ದಿಗಳ ವೀಕ್ಷಣೆಗೆ ಫೇಸ್ ಬುಕ್ ತಡೆ




ಕ್ಯಾನ್‌ಬೆರಾ: ಇತ್ತೀಚಿಗೆ ಆಸ್ಟ್ರೇಲಿಯಾದಲ್ಲಿ ಸಾಮಾಜಿಕ ಮಾಧ್ಯಮಗಳು ಒದಗಿಸುವ ಸುದ್ದಿಗಳಿಗನುಗುಣವಾಗಿ ಆಯಾಯ ಮಾಧ್ಯಮ ಸಂಸ್ಥೆಗಳಿಗೆ ಹಣ ಪಾವತಿಸಬೇಕೆಂಬ ಆಸ್ಟ್ರೇಲಿಯ ಸರಕಾರದ ನಿಯಮಕ್ಕೆ ತೀವ್ರವಾಗಿ ವಿರೋಧ ವ್ಯಕ್ತಪಡಿಸಿರುವ ಫೇಸ್‌ಬುಕ್ ಸಂಸ್ಥೆಯು ಆಸ್ಟ್ರೇಲಿಯಾದಲ್ಲಿ ಸುದ್ದಿಗಳ ವೀಕ್ಷಣೆ ಮತ್ತು ಹಂಚಿಕೆ ಮಾಡುವುದಕ್ಕೆ ಫೇಸ್‌ಬುಕ್ ನಿರ್ಬಂಧ ವಿಧಿಸಿರುವುದಾಗಿ ತಿಳಿಸಿದೆ.

* ಇನ್ನು ಗೂಗಲ್ ಸಂಸ್ಥೆಯೂ ಈ ನಿರ್ಧಾರವನ್ನು ವಿರೋಧಿಸಿದ್ದು, ಆಸ್ಟ್ರೇಲಿಯಾದಲ್ಲಿ ಈ ಕಾನೂನು ಜಾರಿಗೊಳಿಸಲು ಮುಂದಾದರೆ ಸರ್ಚ್ ಎಂಜಿನ್‌ಗಳನ್ನು ತೆಗೆದುಹಾಕಬೇಕಾಗುತ್ತದೆ ಬೆದರಿಕೆ ಹಾಕಿದೆ.

### 31 ವರ್ಷಗಳ ಬಳಿಕ ಬಾಗಿಲು ತೆಗೆದ ಶ್ರೀನಗರದ ಶೀತಲ್‌ನಾಥ್ ದೇಗುಲ



* 1990ರ ಸಮಯದಲ್ಲಿ ಈ ಪ್ರದೇಶದಲ್ಲಿ ಉಗ್ರರ ಉಪಟಳ ಹೆಚ್ಚಿದ ಕಾರಣದಿಂದ ಶ್ರೀನಗರದ ಶೀತಲ್‌ನಾಥ್ ದೇಗುಲದ ಬಾಗಿಲನ್ನು ಮುಚ್ಚಲಾಗಿತ್ತು. ಪ್ರಸ್ತುತ ಕ್ರಲಾಖುದ್ ಪ್ರದೇಶದಲ್ಲಿರುವ ಶೀತಲ್‌ನಾಥ್ ದೇಗುಲವನ್ನು ವಸಂತ ಪಂಚಮಿಯ ಹಿನ್ನಲೆ ಬಾಗಿಲು ತೆರೆದು ಭಕ್ತರಿಗೆ ದರ್ಶನವನ್ನು ಆರಂಭಿಸಲಾಗಿದೆ.
* 1990 ರಿಂದ ಇಲ್ಲಿಯವರೆಗೂ ಈ ದೇಗುಲದಲ್ಲಿ ಯಾವುದೇ ಪೂಜೆ, ಹವನಗಳು ನಡೆದಿರಲಿಲ್ಲ. ಆದರೆ, ಸತತ 31 ವರ್ಷಗಳ ನಂತರ ದೇಗುಲ ತೆರೆದಿರುವದು ಕಣಿವೆ ಪ್ರದೇಶದಲ್ಲಿ ಶಾಂತಿ ನೆಲೆಸುತ್ತಿರುವುದರ ಸಂಕೇತವಾಗಿದೆ.

### ಭಾರತೀಯ ಸೇನೆಗೆ ಕೆ 9 ವಜ್ರ ಹೊವಿಟ್ಸರ್ ಸೇರ್ಪಡೆ



ನವದೆಹಲಿ : ಇತ್ತೀಚಿಗೆ ಭಾರತೀಯ ಸೇನೆಗೆ ಅತ್ಯಾಧುನಿಕ ಕೆ 9 ವಜ್ರ ಹೊವಿಟ್ಜರ್ ಹೆಸರಿನ ತೋಪನ್ನು ಭೂಸೇನಾ ಮುಖ್ಯಸ್ಥ ಜನರಲ್ ಎಂ.ಎಂ. ನರವಾಣೆ ಅವರು ಸೇನಾ ಸೇವೆಗೆ ಚಾಲನೆಗೊಳಿಸಿದರು.

* ಭಾರತೀಯ ಸೇನೆಯು ಒಟ್ಟು 100 'ಕೆ 9 ವಜ್ರ ಹೊವಿಟ್ಜರ್' ಗಳಿಗೆ ಬೇಡಿಕೆ ಸಲ್ಲಿಸಿತ್ತು. ಈ ಪೈಕಿ ಈಗಾಗಲೇ ಮೂರನ್ನು ಲಡಾಖ್‌ನ ಎತ್ತರದ ಸ್ಥಳದಲ್ಲಿ ಪ್ರಾಯೋಗಿಕವಾಗಿ ಸೇವೆಗೆ ನಿಯೋಜಿಸಲಾಗಿದೆ.

* ಇವುಗಳು ಸ್ವಯಂಚಾಲಿತವಾಗಿ ತಿರುಗಬಲ್ಲ ಸಾಮರ್ಥ್ಯವನ್ನು ಹೊಂದಿದ್ದು, ಈ ಸಮಾರಾ ನೌಕೆಗಳನ್ನು L&T; ಸಂಸ್ಥೆಯೂ ಅಭಿವೃದ್ಧಿ ಪಡಿಸಿದೆ.

## ನಾಸಾದ ರೋವರ್ ಮಂಗಳ ಯಾನ ಯಶಸ್ವಿ



ವಾಷಿಂಗ್ಟನ್ : ಅಮೆರಿಕಾದ ಬಾಹ್ಯಾಕಾಶ ಸಂಸ್ಥೆ NASA ವು ಮಂಗಳ ಗ್ರಹಕ್ಕೆ ಉಡಾವಣೆಗೊಳಿಸಿದ್ದ ನೌಕೆಯು ಸುಮಾರು 203 ದಿನಗಳ ಬಾಹ್ಯಾಕಾಶ ಪ್ರಯಾಣದ ನಂತರ ದಿನಾಂಕ 18 ಫೆಬ್ರುವರಿ 2021 ರಂದು ಯಶಸ್ವಿಯಾಗಿ ಮಂಗಳ ಗ್ರಹದ ಮೇಲೆ ಇಳಿಯಿತು. ಅತಿ ದೊಡ್ಡ ಹಾಗೂ ಅತ್ಯಾಧುನಿಕ ಪರ್ಸವೆರೆನ್ಸ್ ರೋವರ್ ಮಂಗಳ ಗ್ರಹದ ಮೇಲೆ ಜೀವಿಗಳ ಅಸ್ತಿತ್ವದ ಕುರಿತು ಮಹತ್ವದ ಅಧ್ಯಯನ ಮಾಡಲಿದೆ. ಈ ರೋವರ್ ನ ಕೆಲಸ : ಈ ರೋವರ್ ನೌಕೆಯು ಸುಮಾರು ಏಳು ವರ್ಷಗಳ ಕಾಲ ಮಂಗಳ ಗ್ರಹದಲ್ಲಿ ಓಡಾಟ ನಡೆಸಿ, ಇಲ್ಲಿ ಜೀವಿಗಳ ಅಸ್ತಿತ್ವದ ಕುರಿತ ಸಂಶೋಧನೆ ನಡೆಸಲಿದೆ.

* 30 ಕಲ್ಲುಗಳು ಹಾಗೂ ಮಣ್ಣಿನ ಮಾದರಿಗಳನ್ನು ಸಂಗ್ರಹಿಸಿ 2030ರ ವೇಳೆಗೆ ಭೂಮಿಗೆ ಕಳುಹಿಸಲಿದೆ.

* ಈ ನೌಕೆಯು ಸುಮಾರು ಒಂದು ಟನ್ ತೂಕವಿದ್ದು, ಇದರಲ್ಲಿ ಏಳು ಅಡಿ ಎತ್ತರದ ರೊಬೊಟಿಕ್ ಕ್ಯಾಮೆರಾ, 19 ಕ್ಯಾಮೆರಾಗಳು, ಎರಡು ಮೈಕ್ರೋಫೋನ್‌ಗಳು ಸೇರಿ ವಿವಿಧ ಸಾಧನಗಳನ್ನು ಅಳವಡಿಸಲಾಗಿದೆ.

* ಇನ್ನು ಮಂಗಳ ಗ್ರಹಕ್ಕೆ ಕಾಲಿಟ್ಟ ಕೂಡಲೇ ಈ ನೌಕೆಯು ಇಲ್ಲಿನ ಎರಡು ಚಿತ್ರಗಳನ್ನು ಸೆರೆಹಿಡಿದು ಭೂಮಿಗೆ ರವಾನಿಸಿದೆ ಎಂದು ನಾಸಾ ತಿಳಿಸಿದೆ.

## ಭಾರತದಿಂದ ವಿಶ್ವಸಂಸ್ಥೆ ಶಾಂತಿಪಾಲನಾ ಸಿಬ್ಬಂದಿಗೆ 2 ಲಕ್ಷ ಡೋಸ್ ಕೊರೊನಾ ಲಸಿಕೆ

* ಪ್ರಸ್ತುತ ವಿಶ್ವದಾದ್ಯಂತ ವಿಶ್ವಸಂಸ್ಥೆಯ ಶಾಂತಿಪಾಲನಾ ಪಡೆಯು 12 ಘಟಕಗಳು ಕಾರ್ಯನಿರ್ವಹಿಸುತ್ತಿದ್ದು, ಸರಿ ಸುಮಾರು 95,000 ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದಾರೆ. ಈ ಶಾಂತಿಪಾಲನಾ ತಂಡದ ಸಿಬ್ಬಂದಿಗೆ ಕೋವಿಡ್ 19 ಲಸಿಕೆಯ 2 ಲಕ್ಷ ಡೋಸ್ ಲಸಿಕೆಯನ್ನು ಒದಗಿಸಲಾಗುತ್ತದೆ ಎಂದು ವಿದೇಶಾಂಗ ಸಚಿವ ಎಸ್. ಜೈಶಂಕರ್ ಮಾಹಿತಿ ನೀಡಿದ್ದಾರೆ.

* ವಿಶ್ವಸಂಸ್ಥೆಯ ಶಾಂತಿಪಾಲನಾ ಸಿಬ್ಬಂದಿಗಳಿಗೆ 2 ಲಕ್ಷ ಡೋಸ್ ಕೊರೊನಾ ಲಸಿಕೆಯನ್ನು ನೀಡಲಾಗುವದು ಎಂದು ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಸಭೆಯಲ್ಲಿ ವಿದೇಶಾಂಗ ಸಚಿವ ಎಸ್. ಜೈಶಂಕರ್ ಘೋಷಣೆ ಮಾಡಿದ್ದಾರೆ.

# 20-02-2021

## ಜಿಲ್ಲಾಧಿಕಾರಿಗಳ ನಡೆ ಹಳ್ಳಿ ಕಡೆ ಯೋಜನೆಗೆ ಸಚಿವ ಆಶೋಕ್‌ರಿಂದ ಚಾಲನೆ



* ಕರ್ನಾಟಕ ರಾಜ್ಯದ ಕಂದಾಯ ಸಚಿವರಾಗಿರುವ ಆರ್.ಅಶೋಕ್'ರವರು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ತಾಲೂಕಿನ ಹೊಸಹಳ್ಳಿ ಗ್ರಾಮದಲ್ಲಿ ಫೆಬ್ರುವರಿ20, 2021ರಂದು ಚಾಲನೆ ನೀಡಿದರು.

* ರಾಜ್ಯ ಸರ್ಕಾರದ ಆದೇಶದಂತೆ ಪ್ರತಿ ತಿಂಗಳ ಮೂರನೇಯ ಶನಿವಾರ ಜಿಲ್ಲಾಧಿಕಾರಿಗಳು ಮತ್ತು ತಾಲೂಕುಗಳ ತಹಶೀಲ್ದಾರರು ಜಿಲ್ಲೆಯ ಗ್ರಾಮಗಳಲ್ಲಿ ಬೆಳಿಗ್ಗೆ 10 ರಿಂದ ಸಂಜೆ 5 ಗಂಟೆ ವರೆಗೆ ಗ್ರಾಮ ವಾಸ್ತವ್ಯ ಮಾಡಲಿದ್ದಾರೆ. ಜಿಲ್ಲಾಧಿಕಾರಿಗಳ ನಡೆ ಹಳ್ಳಿ ಕಡೆ ಕಾರ್ಯಗಳು:

* ಜಿಲ್ಲಾಧಿಕಾರಿಗಳು ಮತ್ತು ತಹಶೀಲ್ದಾರರು ಭೇಟಿ ನೀಡಿದ ಗ್ರಾಮದಲ್ಲಿನ ಎಲ್ಲಾ ಪಹಣಿಯಲ್ಲಿನ ಲೋಪದೋಷಗಳನ್ನು ಬಗ್ಗೆ ಎಚ್ಚರವಹಿಸುವದು ಮತ್ತು ಗ್ರಾಮದ ಎಲ್ಲಾ ಅರ್ಹ ವ್ಯಕ್ತಿಗಳಿಗೆ ಪಿಂಚಣಿ ಸೌಲಭ್ಯವನ್ನು ಕಲ್ಪಿಸಿಕೊಡುವದು, ಹಾಗೂ ಗ್ರಾಮದಲ್ಲಿ ಸ್ಮಶಾನವಿಲ್ಲದಿದ್ದಲ್ಲಿ ಸರ್ಕಾರದ ಆದೇಶದಂತೆ ಕ್ರಮವಹಿಸುವುದು, ಸರ್ಕಾರಿ ಜಮೀನು ಅಕ್ರಮ ಒತ್ತುವರಿ ತೆರವುಗೊಳಿಸುವುದು. ಆಧಾರ ಕಾರ್ಡಿನ ಅನೂಕೂಲತೆಯ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು, ಪ್ರವಾಹದ ಹಾನಿ ತಡೆಗಟ್ಟಲು ಸಲಹೆ ನೀಡುವುದು, ಅತಿವೃಷ್ಟಿ, ಅನಾವೃಷ್ಟಿ ಎದುರಿಸಲು ಮುಂಜಾಗೃತೆ ಕ್ರಮವಹಿಸುವುದು.

## ಭಾರತದ ಸರ್ಕಾರದಿಂದ ದೇಶಿ ಸಂದೇಶ್ ಅಪ್ಲಿಕೇಶನ್

Sandes
Government Instant Messaging System

* ಭಾರತದ ಸರ್ಕಾರದಿಂದ ದೇಶಿ ಸಂದೇಶ್ ಅಪ್ಲಿಕೇಶನ್ ಅಭಿವೃದ್ಧಿ ಪಡಿಸಲಾಗಿದೆ. ಇದನ್ನು ಭಾರತ ಸರ್ಕಾರದಿಂದ ತ್ವರಿತ ಸಂದೇಶ ಸೇವಾ ಕಿರು ತಂತ್ರಾಂಶವನ್ನು ರಾಷ್ಟ್ರೀಯ ಮಾಹಿತಿ ಕೇಂದ್ರ ಬಿಡುಗಡೆ ಮಾಡಿದೆ.
* ಈ ಅಪ್ಲಿಕೇಶನ್ ವಾಟ್ಸಾಪ್ ಗೆ ಪರ್ಯಾಯವಾಗಿ ಕಾರ್ಯ ನಿರ್ವಹಿಸುತ್ತದೆ, ಇದರಿಂದ ಸರ್ಕಾರಿ ಅಧಿಕಾರಿಗಳಿಗೆ ವಾಟ್ಸಾಪ್ ರೀತಿಯ ಸಂಪರ್ಕದ ಕಿರು ತಂತ್ರಾಂಶದ ಮಾಹಿತಿಯನ್ನು ಇದು ಒದಗಿಸುತ್ತದೆ.
* ಭಾರತದ ಸರ್ಕಾರದಿಂದ ದೇಶಿ ಸಂದೇಶ್ ಕಿರು ಅಪ್ಲಿಕೇಶನ್ ಸರ್ಕಾರಿ ಅಧಿಕಾರಿಗಳಲ್ಲದೇ ಸಾಮಾನ್ಯ ಜನರು ಬಳಕೆಗೆ ಅನುಮತಿಯನ್ನು ನೀಡಿದೆ, ಇದನ್ನು ಮೊಬೈಲ್ ಸಂಖ್ಯೆ ಅಥವಾ ಸರ್ಕಾರಿ ಇ ಮೆಲ್ ಬಳಸಿಕೊಂಡು ಸಂದೇಶ್ ಅಪ್ಲಿಕೇಶನ್ ಡೌನ್ಲೋಡ್ ಮಾಡಿಕೊಂಡು ಬಳಸಬಹುದಾಗಿದೆ.
* ಈ ಅಪ್ಲಿಕೇಶನ್'ನಿಂದಾಗಿ ಚಿತ್ರಗಳು ಮತ್ತು ದಾಖಲೆಗಳನ್ನೂ ಹಾಗೂ ಇನ್ನಿತರ ಮಾಹಿತಿಗಳನ್ನು ರವಾನಿಸಲು ಉಪಯೋಗವಾಗಲಿದೆ ಎಂದು ತಿಳಿಸಲಾಗಿದೆ.
* ಈ ಅಪ್ಲಿಕೇಶನ್'ನಿಂದ ಬಳಕೆದಾರರ ಖಾಸಗಿತನದ ಹಿತಾಸಕ್ತಿ ಕಾಪಾಡಲು ಅಗತ್ಯ ವಿರುವ ಕ್ರಮಗಳನ್ನೂ ತೆಗೆದುಕೊಳ್ಳಲಾಗಿದೆ ಎಂದು ತಿಳಿದು ಬಂದಿದೆ.
* ಭಾರತ ಸರ್ಕಾರವು ಸಂದೇಶ್ ಅಪ್ಲಿಕೇಶನ್ ಜೊತೆಗೇನೆ ಮತ್ತೊಂದು ಕಿರು ಅಪ್ಲಿಕೇಶನ್ 'ಸಂವಾದ್' ಅನ್ನು ಅಭಿವೃದ್ಧಿಪಡಿಸಲಾಗುತ್ತಿದೆ ಎಂದು ಸರ್ಕಾರಿ ಅಧಿಕಾರಿಗಳು ತಿಳಿಸಿದ್ದಾರೆ.

## IOCL'ನ ಕಾರ್ಯನಿರ್ವಾಹಕ ನಿರ್ದೇಶಕರಾಗಿ ಕೆ. ಶೈಲೇಂದ್ರ




* ಇಂಡಿಯನ್ ಆಯಿಲ್ ಕಾರ್ಪೊರೇಷನ್ ಲಿಮಿಟೆಡ್‌ನ ದಕ್ಷಿಣ ವಲಯದ ಪ್ರಾದೇಶಿಕ ಸೇವೆಗಳ ವಿಭಾಗದ ಕಾರ್ಯನಿರ್ವಾಹಕ ನಿರ್ದೇಶಕರಾಗಿ ಕೆ. ಶೈಲೇಂದ್ರ ಅವರು ಅಧಿಕಾರ ಸ್ವೀಕರಿಸಿದ್ದಾರೆ.
* ಕೆ. ಶೈಲೇಂದ್ರ ರವರು LPG ಮತ್ತು ಇಂಧನ ಸಾಗಣೆ, ಒಪ್ಪಂದ ಹಾಗೂ ಗುಣಮಟ್ಟ ನಿಯಂತ್ರಣ, ಮಾನವ ಸಂಪನ್ಮೂಲ, ಹಣಕಾಸು, ಸೇರಿದಂತೆ ಪ್ರಮುಖ ವಿಭಾಗಗಳ ಪ್ರಾದೇಶಿಕ ಉಸ್ತುವಾರಿಯನ್ನು ವಹಿಸಿಕೊಂಡಿದ್ದಾರೆ. ದಕ್ಷಿಣ ವಲಯದ ಆಯಿಲ್ ಕಂಪನಿಗಳು:
* ತಮಿಳುನಾಡು ಮತ್ತು ಪುದುಚೇರಿ, ತೆಲಂಗಾಣ, ಆಂಧ್ರಪ್ರದೇಶ, ಕರ್ನಾಟಕ, ಕೇರಳ ಹಾಗೂ ಲಕ್ಷದ್ವೀಪದ ಈ ಎಲ್ಲ ಪ್ರದೇಶಗಳು ಇಂಡಿಯನ್ ಆಯಿಲ್ ಕಂಪನಿಗಳು ದಕ್ಷಿಣವಲಯದಅಧಿಪತ್ಯದಲ್ಲಿ ಬರುತ್ತವೆ.

## ಕರ್ನಾಟಕ ಬ್ಯಾಂಕಿನ CEOಗೆ "ವರ್ಷದ ಸಿಇಒ" ಪ್ರಶಸ್ತಿ



* ವರ್ಲ್ಡ್ ಲೀಡರ್‌ಶಿಪ್ ಕಾಂಗ್ರೆಸ್ ಆಯಂಡ್ ಅವಾರ್ಡ್ಸ್ ನೀಡುವ "ವರ್ಷದ ಸಿಇಒ" ಪ್ರಶಸ್ತಿಯನ್ನು ಸಿಇಒ ಆಫ್ ದ ಇಯರ್ ಎಂದು ಕರೆಯುತ್ತಾರೆ, ಪ್ರಸಕ್ತ ಸಾಲಿನ ಈ ಪ್ರಶಸ್ತಿಯನ್ನು ಕರ್ನಾಟಕ ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕ, CEO ಮಹಾಬಲೇಶ್ವರ ಎಂ.ಎಸ್. ಅವರಿಗೆ ನೀಡಲಾಯಿತು,
* ಇತ್ತೀಚಿಗೆ ಮುಂಬೈನಲ್ಲಿ ನಡೆದ 19ನೇ 'ಗ್ಲೋಬಲ್ ಎಡಿಷನ್ ಆಫ್ ಬಿಸಿನೆಸ್ ಲೀಡರ್ ಆಫ್ ದ ಇಯರ್' ಸಮಾರಂಭದಲ್ಲಿ ಸಿಇಒ ಆಫ್ ದ ಇಯರ್ ಪ್ರಶಸ್ತಿಯನ್ನು ನೀಡಲಾಯಿತು.

## ಕರ್ನಾಟಕದಲ್ಲಿ ಜನಸೇವಕ ಕಾರ್ಯಕ್ರಮಕ್ಕೆ ಚಾಲನೆ



* ಸಕಾಲ ಮಿಷನ್ ಯೋಜನೆಯಡಿ 'ಜನಸೇವಕ' ಕಾರ್ಯಕ್ರಮಕ್ಕೆ ಯಶವಂತಪುರ ವಿಧಾನಸಭಾ ಕ್ಷೇತ್ರದ ಉಳ್ಳಾಲ ವಾರ್ಡ್‌ನಲ್ಲಿ ಸಚಿವ ಎಸ್. ಸುರೇಶ್ ಕುಮಾರ್, ಸಾರ್ವಜನಿಕರ ಮನೆ ಬಾಗಿಲಿಗೆ ಸರ್ಕಾರಿ ಸೇವೆಗಳ ಯೋಜನೆಗೆ ಚಾಲನೆ ನೀಡಿದರು.
* ಈ ಜನಸೇವಕ ಯೋಜನೆಯನ್ನು ರಾಜಧಾನಿಯ (ಬೆಂಗಳೂರಿನ)ಐದು ವಿಧಾನಸಭಾ ಕ್ಷೇತ್ರಗಳಲ್ಲಿ ಜನಸೇವಕ ಯೋಜನೆಯು ರಾಜಾಜಿನಗರ, ಮಹದೇವಪುರ, ಬೊಮ್ಮನಹಳ್ಳಿ, ದಾಸರಹಳ್ಳಿ, ಯಶವಂತಪುರ ವಿಧಾನಸಭಾ ಕ್ಷೇತ್ರಗಳಲ್ಲಿ ಜಾರಿಗೆ ತರಲಾಗಿದೆ, ಮುಂದಿನ ದಿನಗಳಲ್ಲಿ ರಾಜ್ಯದ ಇತರೆ ಪ್ರದೇಶಗಳಲ್ಲಿ ಜಾರಿಗೆತರಲು ಸರ್ಕಾರ ಮುಂದಾಗುವದು ಎಂದು ತಿಳಿಸಿದ್ದಾರೆ. ಜನಸೇವಕ ಯೋಜನೆಯ ಲಾಭಗಳು: ಆಧಾರ್ ಕಾರ್ಡ್, ಜಾತಿ ಆದಾಯ ಪ್ರಮಾಣ ಪತ್ರ, ಅಂಗವಿಕಲ, ವಿಧವಾ ಪಿಂಚಣಿ, ವೃದ್ಧಾಪ್ಯ ವೇತನ, ಸಂಧ್ಯಾ ಸುರಕ್ಷಾ ಯೋಜನೆ ಹಾಗೂ ಕಂದಾಯ ಇಲಾಖೆಯ 21 ಸೇವೆಗಳು, ಕರ್ನಾಟಕ ಕಟ್ಟಡ ಮತ್ತು

ಕಾರ್ಮಿಕ ಕಲ್ಯಾಣ ಮಂಡಳಿ ಸೇವೆಗಳು, ಬಿಬಿಎಂಪಿ ವ್ಯಾಪ್ತಿಯ 18 ಸೇವೆಗಳು ಈ ಯೋಜನೆಯಲ್ಲಿ ಸಿಗಲಿವೆ.

## ಇರಾನ್‌ನೊಂದಿಗೆ ರಾಜತಾಂತ್ರಿಕವಾಗಿ ಚರ್ಚಿಸಲು ಸಿದ್ಧವಾದ ಅಮೆರಿಕ




* ಅಮೇರಿಕ ದೇಶವು ಪರಮಾಣು ಕಾರ್ಯಕ್ರಮದ ಬಗೆಗಿನ ಮಾಹಿತಿಯನ್ನು ಜಗತ್ತಿನ ಪ್ರಮುಖ ರಾಷ್ಟ್ರಗಳು ಹಾಗೂ ಇರಾನ್ ರಾಷ್ಟ್ರದೊಂದಿಗೆ ಚರ್ಚಿಸಲು ಅಮೆರಿಕ ಸಿದ್ಧವಾಗಿದೆ ಎಂದು ಅಧ್ಯಕ್ಷ ಜೋ ಬೈಡನ್ ತಿಳಿಸಿದರು.
* 2018ರಲ್ಲಿ ಅಮೇರಿಕ ದೇಶವು ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು 2015ರ ಪರಮಾಣು ಒಪ್ಪಂದಿಂದ ಹೊರ ನಡೆದಿದ್ದರೂ, ಆದರೆ ಇದೀಗ ಜೋ ಬೈಡನ್'ರವರು ಸರ್ಕಾರವು ಈ ಒಪ್ಪಂದದಲ್ಲಿ ಮರು ಸೇರ್ಪಡೆಯಾಗಲು ಸಿದ್ಧವಾಗಿದೆ ಎಂದು ತಿಳಿದು ಬಂದಿದೆ.

## ಬೆಂಗಳೂರಿನಲ್ಲಿ 13ನೇ ಆವೃತ್ತಿ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ



* ಬೆಂಗಳೂರಿನಲ್ಲಿ 13ನೇ ಆವೃತ್ತಿ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವವು 2021ರ ಮಾರ್ಚ್ 24ರಿಂದ 31ರವರೆಗೆ ನಡೆಯಲಿದೆ.
* ಈ ಚಲನಚಿತ್ರೋತ್ಸವದಲ್ಲಿ ಈ ಸಾರಿ ಭಾರತೀಯ ಪ್ರದರ್ಶನ ಕಲೆಗಳ ಮಹತ್ವದ ವಿಷಯಗಳ ಮೇಲೆ ಏರ್ಪಡಿಸಲು ತೀರ್ಮಾನಿಸಲಾಗಿದೆ ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮುಖ್ಯಮಂತ್ರಿ B. S. ಯಡಿಯೂರಪ್ಪನವರ ವಹಿಸಿಕೊಂಡಿದ್ದರು.
* ಈ ಚಲನಚಿತ್ರೋತ್ಸವವನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಕರ್ನಾಟಕ ಚಲನಚಿತ್ರ ಅಕಾಡೆಮಿ ನಡೆಸುತ್ತಿದೆ.
* ಬೆಂಗಳೂರು ಅಂತಾರಾಷ್ಟ್ರೀಯ ಚಿತ್ರೋತ್ಸವಕ್ಕೆ ಅಂತಾರಾಷ್ಟ್ರೀಯ FIAPF ಮಾನ್ಯತೆ ದೊರೆಯುಬಹುದು ಎನ್ನಲಾಗಿದೆ.


## ಭೂಮಿ ದಶಕಗಳಲ್ಲೇ 2020ರಲ್ಲಿ ಮೌನವಾಗಿತ್ತು ಭೂ ವಿಜ್ಞಾನಿಗಳ ಮಾಹಿತಿ



* 2020ರಲ್ಲಿ ಸಾಂಕ್ರಾಮಿಕ ರೋಗ ಕೋವಿಡ್ 19 ನಿಯಂತ್ರಿಸಲು ವಿಧಿಸಲಾಗಿದ್ದ ಲಾಕ್‌ಡೌನ್'ನಿಂದಾಗಿ ಭೂಮಿಯು ದಶಕಗಳಲ್ಲೇ ಮೊದಲ ಬಾರಿಗೆ ಅಂದರೆ 2020ರಲ್ಲಿ ಅತ್ಯಂತ ಮೌನದ ಅವಧಿಯನ್ನು ಕಳೆಯಿತು ಎಂದು ಬೆಲ್ಜಿಯಮ್‌ನ ರಾಯಲ್ ಅಬ್ಸರ್ವೇಟರಿಯ ಥಾಮಸ್ ಲೆಕಾಕ್ ನೇತೃತ್ವದ ವಿಜ್ಞಾನಿಗಳು ತಂಡವು ಮಾಹಿತಿಯನ್ನು ನೀಡಿದ್ದಾರೆ.
* ಲಾಕ್ ಡೌನ್ ಸಮಯಗಳಲ್ಲಿ ಶೇಕಡಾ 50ರಷ್ಟು ಕಾರ್ಖಾನೆಗಳು ಹಾಗೂ ಕಂಪನಿಗಳು ಮುಚ್ಚಿದ್ದವು, ಪ್ರಸ್ತುತ 33 ದೇಶಗಳ ಭೂ ವಿಜ್ಞಾನಿಗಳ ತಂಡವು ಜಗತ್ತಿನಾದ್ಯಂತ ಇರುವ ಭೂಕಂಪನ ಅಳೆಯುವ ಕೇಂದ್ರಗಳ ಪೈಕಿ 268 ಕೇಂದ್ರಗಳ ಅಂಕಿಅಂಶಗಳನ್ನು ವಿಶ್ಲೇಷಣೆ ಮಾಡಿದ್ದಾರೆ, ಭೂ ವಿಜ್ಞಾನಿಗಳ ವಿಶ್ಲೇಷಣೆ ಪ್ರಕಾರ 185 ಕೇಂದ್ರಗಳಲ್ಲಿ ಶಬ್ದದ ಮಟ್ಟವು ಕಡಿಮೆಯಾಗಿದೆ ಎಂದು ತಿಳಿಸಿದ್ದಾರೆ, ಇದರಿಂದ ಭೂಮಿಯು 2020ರಲ್ಲಿ ಮೌನವಾಗಿತ್ತು ಎಂದು ತಿಳಿಸಿದ್ದಾರೆ.

# 21-02-2021

## ಬೆಂಗಳೂರಿನಲ್ಲಿ ದೇಶದ ಮೊದಲ ಸಂಪೂರ್ಣ ಹವಾನಿಯಂತ್ರಿತ ರೈಲ್ವೇ ನಿಲ್ದಾಣ



* ದೇಶದ ಮೊದಲ ಸಂಪೂರ್ಣ ಹವಾನಿಯಂತ್ರಿತ ರೈಲ್ವೇ ನಿಲ್ದಾಣವನ್ನು ಬೆಂಗಳೂರು ಹೊಂದಲಿದೆ, ವಿಮಾನ ನಿಲ್ದಾಣಗಳು ಮೂಲ ಸೌಕರ್ಯಗಳಿಗೆ ಹೋಲಿಸಿದರೆ ರೈಲ್ವೇ ನಿಲ್ದಾಣಗಳಲ್ಲಿ ಮೂಲ ಸೌಕರ್ಯಗಳ ಕೊರತೆ ಹೆಚ್ಚಾಗಿ ಕಂಡು ಬರುತ್ತದೆ ಆದರೆ ಬೆಂಗಳೂರಿನ ಬೈಯಪ್ಪನಹಳ್ಳಿ ರೈಲ್ವೆ ನಿಲ್ದಾಣವನ್ನು ವಿಮಾನ ನಿಲ್ದಾಣದ ಮಟ್ಟದ ಸೌರ್ಕಯ ಕೊಡುವ ನಿಟ್ಟಿನಲ್ಲಿ ಭಾರತೀಯ ರೈಲ್ವೇ ಅಭಿವೃದ್ಧಿಪಡಿಸುತ್ತಿದೆ ಹಾಗೂ ಇದು ದೇಶದ ಮೊದಲ ಸಂಪೂರ್ಣ ಹವಾನಿಯಂತ್ರಿತ ರೈಲ್ವೇ ನಿಲ್ದಾಣವಾಗಿ ಹೊರಹೊಮ್ಮಲಿದೆ.
* ಕಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಮಾದರಿಯಲ್ಲಿ ಕೇಂದ್ರೀಯ ಹವಾ ನಿಯಂತ್ರಣ ವ್ಯವಸ್ಥೆ

ಸರ್.ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಅನ್ನು, 4,200 ಚದರ ಮೀಟರ್ ವಿಸ್ತೀರ್ಣದಲ್ಲಿ ನಿರ್ಮಿಸಲಾದ ಈ ನಿಲ್ದಾಣವು ಪ್ರತಿನಿತ್ಯ 50,000ಕ್ಕೂ ಹೆಚ್ಚು ಪ್ರಯಾಣಿಕರನ್ನು ನಿಭಾಯಿಸಲಿದ್ದು, ದಿನವೂ 50 ರೈಲುಗಳನ್ನು ನಿಭಾಯಿಸುವ ಸಾಮರ್ಥ್ಯವನ್ನು ಹೊಂದಿದೆ ಮತ್ತು 7 ಪ್ಲಾಟ್‌ಫಾರಂಗಳನ್ನೂ ಹೊಂದಿ ಒಟ್ಟಾರೆ 314 ಕೋಟಿ ರೂ.ಗಳ ವೆಚ್ಚದಲ್ಲಿ ನಿರ್ಮಾಣ ಮಾಡಿದೆ.

* ಭಾರತೀಯ ರೈಲ್ವೆ ನಿರ್ಮಾಣ ಮಾಡಿರುವ ದೇಶದ ಮೊದಲ ಸಂಪೂರ್ಣ ಹವಾನಿಯಂತ್ರಿತ ರೈಲ್ವೇ ನಿಲ್ದಾಣದಲ್ಲಿ ಪ್ರಯಾಣಿಕ ಮಾಹಿತಿ ವ್ಯವಸ್ಥೆ, ಫುಡ್ ಕೋರ್ಟ್, VIPಲೌಂಜ್ ಹೀಗೆ ಹಲವು ಅಂದರೆ ವಿಮಾನ ನಿಲ್ದಾಣದ ಸೌಕರ್ಯಗಳನ್ನು ಇಲ್ಲಿಯ ಪ್ರಯಾಣಿಕರಿಗೆ ನೀಡಲಾಗುತ್ತದೆ ಎಂದು ರೈಲ್ವೇ ಸಚಿವಾಲಯ ತಿಳಿಸಿದೆ.

# 22-02-2021

## ಪೊಲೀಸ್ ಇಲಾಖೆ ವತಿಯಿಂದ E Lost Report App ಚಾಲನೆ



* ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯು ಸಾರ್ವಜನಿಕರ ಬಳಕೆಗಾಗಿ E Lost Report App ಅನ್ನು ಪರಿಚಯಿಸಿದೆ, ಈ ಆಪ್'ನ ಮುಖಾಂತರ ದೂರು ನೀಡಬಹುದಾಗಿದೆ ಸಾಮಾನ್ಯ ಜನರು ವಸ್ತುಗಳನ್ನು ಕಳೆದುಕೊಂಡಲ್ಲಿ ಪೊಲೀಸ್ ಠಾಣೆಗೆ ನೇರವಾಗಿ ಭೇಟಿ ನೀಡದೆ ಇರುವ ಸಂದರ್ಭದಲ್ಲಿ ಈ ಆಪ್'ನ ಮೂಲಕ ದೂರು ಸಲ್ಲಿಸಬಹುದಾಗಿದೆ.

* E Lost Report App ಮೂಲಕ ಸಾಮಾನ್ಯ ಜನರ ಬಳಕೆ ಮಾಡುವ ವಸ್ತುಗಳನ್ನು ಕಳೆದುಕೊಂಡಲ್ಲಿ ಸಾರ್ವಜನಿಕರು ಮಾಹಿತಿ ಭರ್ತಿ ಮಾಡುವ ಮೂಲಕ ದೂರು ಸಲ್ಲಿಸಿ ತಕ್ಷಣವೇ ಸ್ವೀಕೃತಿ ಪಡೆದುಕೊಳ್ಳಬಹುದಾಗಿದೆ, ಕ್ರೆಡಿಟ್ ಕಾರ್ಡ್, ಡೆಬಿಟ್ ಕಾರ್ಡ್, ಡ್ರೈವಿಂಗ್ ಲೈಸೆನ್ಸ್, ಚೆಕ್, ಡಿಡಿ, ಐಡೆಂಟಿಟಿ ಕಾರ್ಡ್, ಐಪ್ಯಾಡ್, ಟ್ಯಾಬ್ಲೆಟ್, ಮೊಬೈಲ್, ಪಾನ್ ಕಾರ್ಡ್, ಪಾಸ್ ಬುಕ್, ಪಾಸ್ಪೋರ್ಟ್, ರೇಷನ್ ಕಾರ್ಡ್, ವಿಡಿಯೋ ಕ್ಯಾಮೆರಾ ಎಜುಕೇಷನಲ್ ಸರ್ಟಿಫಿಕೇಟ್, ವೋಟರ್ ಐಡಿ ಕಾರ್ಡ್ ಕಳೆದುಕೊಂಡಲ್ಲಿ ಪೊಲೀಸ್ ಠಾಣೆಗೆ ಭೇಟಿ ನೀಡದೆ ನೇರವಾಗಿ ಈ ಆಪ್'ನ ಮೂಲಕ ದೂರುಗಳನ್ನೂ ನೀಡಿ ಸ್ವೀಕೃತಿ ಪಡೆಯಬಹುದಾಗಿದೆ ಎಂದು ಪೊಲೀಸ್ ಇಲಾಖೆ ತಿಳಿಸಿದೆ.

## ದಾದಾಸಾಹೇಬ್ ಫಾಲ್ಕೆ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ ಪ್ರಶಸ್ತಿ ಪಡೆದ ಬಾಲಿವುಡ್‌ನ ತಾರೆಯರು



* ಪ್ರಸಕ್ತ ವರ್ಷದ "ದಾದಾಸಾಹೇಬ್ ಫಾಲ್ಕೆ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ ಪ್ರಶಸ್ತಿ" ಬಾಲಿವುಡ್‌ನ ಖ್ಯಾತ ನಟಿ ದೀಪಿಕಾ ಪಡುಕೋಣೆ, ಹಾಗೂ ನಟರಾದ ಅಕ್ಷಯ್ ಕುಮಾರ್, ಸುಶ್ಮಿತಾ ಸೇನ್, ಸುಶಾಂತ್ ಸಿಂಗ್ ರಜಪೂತ್ ಅವರಿಗೆ ಲಭಿಸಿದೆ.

* ಮೇಘನಾ ಗುಲ್ಜಾರ್ ನಿರ್ದೇಶನದ ಚಪಾಕ್ ಚಿತ್ರದ ನಟನೆಗಾಗಿ ದೀಪಿಕಾ ಪಡುಕೋಣೆಗೆ ಉತ್ತಮ ನಟಿ ಪ್ರಶಸ್ತಿ ಲಭಿಸಿದೆ.

* ಹಾರರ್ ಹಾಗೂ ಕಾಮಿಡಿ ಸನ್ನಿವೇಶಗಳನ್ನು ಒಳಗೊಂಡಿರುವ 'ಲಕ್ಷ್ಮೀ' ಚಿತ್ರದ ನಟನೆಗಾಗಿ ಸ್ಟಾರ್ ನಟ ಅಕ್ಷಯ್ ಕುಮಾರ್‌ಗೆ 'ಉತ್ತಮ ನಟ' ಪ್ರಶಸ್ತಿ ಲಭಿಸಿದೆ.

* 'ಚಿಚೋರೆ' ಚಿತ್ರದ ಅಭಿನಯಕ್ಕಾಗಿ ಸುಶಾಂತ್ ಸಿಂಗ್ ರಜಪೂತ್ ಅವರಿಗೆ ಮರಣೋತ್ತರವಾಗಿ "ವಿಮರ್ಶಕರ ಉತ್ತಮ ನಟ' ಪ್ರಶಸ್ತಿ ಲಭಿಸಿದೆ. ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿಯನ್ನು ಪಡೆದವರ ವಿವರ: ಉತ್ತಮ ನಟಿ: ದೀಪಿಕಾ ಪಡುಕೋಣೆ ಚಪಾಕ್ ಚಿತ್ರಕ್ಕಾಗಿ ಉತ್ತಮ ನಟ: ಅಕ್ಷಯ್ ಕುಮಾರ್ ಲಕ್ಷ್ಮೀ ಚಿತ್ರಕ್ಕಾಗಿ ವಿಮರ್ಶಕರ ಉತ್ತಮ ನಟಿ: ಕಿಯಾರಾ ಅಡ್ವಾಣಿ ಗಿಲ್ಟಿ ಚಿತ್ರಕ್ಕಾಗಿ ವಿಮರ್ಶಕರ ಉತ್ತಮ ನಟ: ಸುಶಾಂತ್ ಸಿಂಗ್ ರಜಪೂತ್ ಚಿಚೋರೆ ಚಿತ್ರಕ್ಕಾಗಿ ಉತ್ತಮ ಚಿತ್ರ: ತಾನಾಜಿ ಉತ್ತಮ ವಿದೇಶಿ ಫೀಚರ್ ಚಿತ್ರ: ಪ್ಯಾರಾಸೈಟ್ ಉತ್ತಮ ನಿರ್ದೇಶಕ: ಅನುರಾಗ್ ಬಸು ಲುಡೋ ಚಿತ್ರಕ್ಕಾಗಿ

## ನೋವಾಕ್ ಜೋಕೋವಿಚ್ ಗೆ ಆಸ್ಟ್ರೇಲಿಯಾ ಓಪನ್ ಕಿರೀಟ



* ಆಸ್ಟ್ರೇಲಿಯನ್ ಓಪನ್ ಟೆನಿಸ್ ಪಂದ್ಯಾವಳಿಯಲ್ಲಿ ಆಸ್ಟ್ರೇಲಿಯಾ ಓಪನ್ ಕಿರೀಟ ಪ್ರಶಸ್ತಿಯನ್ನು ನೋವಾಕ್ ಜೋಕೋವಿಚ್ ಪಡೆದುಕೊಂಡಿದ್ದಾರೆ, ಇದು ನೋವಾಕ್ ಜೋಕೋವಿಚ್ ರವರ 18 ನೇ ಗ್ರ್ಯಾಂಡ್ ಸ್ಲ್ಯಾಮ್ ಟ್ರೋಫಿಯಾಗಿದೆ.

* ಇತ್ತೀಚಿಗೆ ಮೆಲ್ಬೋರ್ನ್ ನಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ರಷ್ಯಾದ 'ಡೇನಿಯಲ್ ಮೆಡ್ ವೆ ದೇವ್' ಅವರನ್ನು 7 5, 6 2, 6 2 ಸೆಟ್ ಅಂತರದಿಂದ ಸೋಲಿಸಿ ಜೋಕೋವಿಚ್' ರವರು ಪ್ರಶಸ್ತಿ ಪಡೆದುಕೊಂಡರು.

* ಅಂತಿಮ ಪಂದ್ಯದಲ್ಲಿ ರಷ್ಯಾದ ಪ್ರತಿಸ್ಪರ್ಧಿ ಆಟಗಾರರಾದ 25 ವರ್ಷದ ಡೇನಿಯಲ್ ಮೆಡ್ ವೆ ದೇವ್ ಅವರಿಂದ ತೀವ್ರ ಪೈಪೋಟಿ ನೀಡಿದ್ದರು, ಆದರೆ ಅಂತಿಮ ವಾಗಿ ವಿಶ್ವದ ನಂಬರ್ ಒನ್ ಆಟಗಾರ ಎನಿಸಿಕೊಳ್ಳುವ 33 ವರ್ಷದ ನೊವಾಕ್

ಜೋಕೋವಿಚ್ ಎದುರು ಸೋಲನ್ನು ಒಪ್ಪಿಕೊಂಡರು. ಹೆಚ್ಚಿನ ಗ್ರ್ಯಾಂಡ್ ಸ್ಲ್ಯಾಮ್ ಪುರುಷರ ಸಿಂಗಲ್ಸ್ ಪ್ರಶಸ್ತಿಗಳನ್ನು ಪಡೆದವರು: ರೋಜರ್ ಫೆಡರರ್ 20 ರಾಫೆಲ್ ನಡಾಲ್ 20 ನೊವಾಕ್ ಜೊಕೊವಿಕ್ 18 ಪೀಟ್ ಸಂಪ್ರಾಸ್ 14 ರಾಯ್ ಎಮರ್ಸನ್ 12

## 'ಚಂದ್ರಯಾನ 3' ಯೋಜನೆ



* ಇಸ್ರೋ ಮುಖ್ಯಸ್ಥ ಕೆ.ಶಿವನ್ ರವರು 2022ರಲ್ಲಿ ಭಾರತದ ಬಹುನಿರೀಕ್ಷಿತ 'ಚಂದ್ರಯಾನ 3' ಯೋಜನೆಯು ಕಾರ್ಯಗತಗೊಳ್ಳಲಿದೆ ಎಂದು ಮಾಹಿತಿಯನ್ನು ನೀಡಿದ್ದಾರೆ.
* ಚಂದ್ರಯಾನ 3 ಯೋಜನೆಯು 2020ರ ವರ್ಷದ ಅಂತ್ಯದಲ್ಲಿ ಕಾರ್ಯ ಯಶಸ್ವಿಗೊಳ್ಳಬೇಕಾಗಿತ್ತು ಆದರೆ ಕೋವಿಡ್ 19 ಕಾರಣದಿಂದಾಗಿ ಕಾರ್ಯಗತಗೊಂಡಿಲ್ಲ ಎಂದು ತಿಳಿಸಿದ್ದಾರೆ. ಚಂದ್ರಯಾನ 3 ಮಾಹಿತಿ:
* ಚಂದ್ರಯಾನ 3 ನೌಕೆಯ ಬಹುತೇಕ ಚಂದ್ರಯಾನ 2ರ ಹಾಗೆಯೆ ಇರಲಿದೆ, ಆದರೆ ಚಂದ್ರಯಾನ 2ರಲ್ಲಿ ಉಡಾವಣೆ ಮಾಡಲಾಗಿದ್ದ ಕಕ್ಷೆಗಾಮಿಯನ್ನೇ ಬಳಕೆ ಮಾಡಲಾಗುವುದು, ಚಂದ್ರನ ದಕ್ಷಿಣ ಧ್ರುವದ ಭಾಗದಲ್ಲಿ ನೌಕೆಯನ್ನು ಇಳಿಸುವ ಗುರಿ ಇಸ್ರೋ ಹೊಂದಿದೆ, ಒಟ್ಟಾರೆ ಈ ಯೋಜನೆಯು 2022ರಲ್ಲಿ ಕಾರ್ಯಗತಗೊಳ್ಳುವ ಭರವಸೆ ಇದೆ ಎಂದು ಶಿವನ್ ಮಾಹಿತಿ ನೀಡಿದ್ದಾರೆ.
*ಚಂದ್ರಯಾನ 3 ಯೋಜನೆಯನ್ನು ಈ ವರ್ಷದ ಡಿಸೆಂಬರ್ ತಿಂಗಳಲ್ಲಿ ಕಾರ್ಯಗತಗೊಳಿಸುವ ಉದ್ದೇಶವಿದೆ, ಹಾಗೂ ಇದರಲ್ಲಿ 3 ಭಾರತೀಯರನ್ನು ಅಂತರಿಕ್ಷಕ್ಕೆ ಕಳುಹಿಸುವ ಗುರಿಯನ್ನು ಇಸ್ರೋ ಹೊಂದಿದೆ.

## ಭಾರತ ಮಾಲ್ಡೀವ್ಸ್ ನಡುವೆ 362 ಕೋಟಿ ಒಪ್ಪಂದಕ್ಕೆ ಸಹಿ



* ಭಾರತ ಮಾಲ್ಡೀವ್ಸ್ ರಾಷ್ಟ್ರಗಳು 362 ಕೋಟಿ ಒಪ್ಪಂದಕ್ಕೆ ಸಹಿ ಹಾಕಿವೆ ಈ ಒಪ್ಪಂದದಿಂದಾಗಿ ಸಾಗರ ಗಡಿ ಭದ್ರತೆಯೂ ಮತ್ತು ರಕ್ಷಣಾ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು ಮಾಲ್ಡೀವ್ಸ್‌ಗೆ ಭಾರತ 362 ಕೋಟಿ ನೆರವು ನೀಡುವ ಒಪ್ಪಂದಕ್ಕೆ ಮಾಲ್ಡೀವ್ಸ್‌ನ ಹಣಕಾಸು ಸಚಿವಾಲಯ ಹಾಗೂ ಎಕ್ಸ್‌ಪೋರ್ಟ್ ಇಂಪೋರ್ಟ್ ಬ್ಯಾಂಕ್ ಆಫ್ ಇಂಡಿಯಾ ಈ ಒಪ್ಪಂದಕ್ಕೆ ಪರಸ್ಪರ ಒಪ್ಪಿಕೊಂಡು ಸಹಿ ಹಾಕಿವೆ.
* ಈ ಒಪ್ಪಂದದ ಮಾತುಕತೆಯಲ್ಲಿ ವಿದೇಶಾಂಗ ಸಚಿವ ಎಸ್ .ಜೈಶಂಕರ್ ಅವರು ಮಾಲ್ಡೀವ್ಸ್‌ನ ರಕ್ಷಣಾ ಸಚಿವೆ ಮರಿಯಾ ದೀದಿ ಭಾಗಿಯಾಗಿದ್ದರು ಈ ಒಪ್ಪಂದದಿಂದಾಗಿ ಎರಡು ರಾಷ್ಟ್ರಗಳ ಸಂಬಂಧ ಇನ್ನಷ್ಟು ಉತ್ತಮವಾಗಲಿದೆ ಎಂದು ತಿಳಿಸಿದ್ದಾರೆ.

## ವಿಶ್ವ ಮಾತೃ ಭಾಷಾ ದಿನಾಚರಣೆ ಫೆಬ್ರವರಿ 21




* ಫೆಬ್ರವರಿ.21 ರಂದು ವಿಶ್ವ ಮಾತೃ ಭಾಷಾ ದಿನಾಚರಣೆಯನ್ನು ಆಚರಿಸಲಾಗುತ್ತದೆ, ಎಲ್ಲಾ ಭಾಷಾ ಸಂಸ್ಕೃತಿಯ ಬಹು ಭಾಷಾವಾದವನ್ನು, ಸಬಲೀಕರಣದತ್ತ ಸಾಗಿಸಲು ವಿಶ್ವ ಮಾತೃ ಭಾಷಾ ದಿನವನ್ನು ಆಚರಿಸಲಾಗುತ್ತಿದೆ.
* ಪ್ರಸ್ತುತ ಈ ಜಗತ್ತಿನಲ್ಲಿ ಸರಿ ಸುಮಾರು 7ಸಾವಿರ ಭಾಷೆಗಳಿವೆ, ಆದರೆ ಇಂದಿನ ದಿನಗಳಲ್ಲಿ ಎಷ್ಟೋ ಭಾಷೆಗಳು ಬಳಕೆ ಇಲ್ಲದಿರುವದರಿಂದ ಕೆಲ ಭಾಷೆಗಳು ಅಳಿವಿನಂಚಿನಲ್ಲಿವೆ ಎಂದು ತಿಳಿದು ಬಂದಿದೆ. ವಿಶ್ವ ಮಾತೃ ಭಾಷಾ ದಿನಾಚರಣೆ:
* ಪ್ರತಿ ವರ್ಷ ಫೆಬ್ರವರಿ 21 ರಂದು ಜಗತ್ತಿನತುಂಬೆಲ್ಲ ವಿಶ್ವ ಮಾತೃ ಭಾಷೆ ದಿನವನ್ನು ಆಚರಣೆ ಮಾಡಲಾಗುತ್ತದೆ.
* ವಿಶ್ವ ಮಾತೃ ಭಾಷೆ ದಿನವನ್ನು ಮೊದಲ ಬಾರಿಗೆ 1999ರಲ್ಲಿ ಯುನೆಸ್ಕೋ ಘೋಷಿಸಿತು.
* 2000ನೇ ವರ್ಷ ದಿಂದ ಪ್ರತಿ ವರ್ಷ ವಿಶ್ವ ಮಾತೃ ಭಾಷೆ ದಿವಸವನ್ನು ಆಚರಣೆ ಮಾಡಲಾಗುತ್ತದೆ.
* ವಿಶ್ವಸಂಸ್ಥೆಯು 2008 ನ್ನು ವಿಶ್ವ ಭಾಷೆಗಳ ವರ್ಷ ಎಂದು ಆಚರಿಸಿತು.
* 1952 ರಂದು ಢಾಕಾ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ರಸ್ತೆಗಿಳಿದು ಪ್ರತಿಭಟನೆಯನ್ನು ಮಾಡಿದರು, ಈ ಪ್ರತಿಭಟನೆಯಲ್ಲಿ ಢಾಕಾ ವಿಶ್ವವಿದ್ಯಾನಿಲಯದ ಹಲವು ವಿದ್ಯಾರ್ಥಿಗಳು ಮೃತಪಟ್ಟರು ಆದ್ದರಿಂದ ವಿಶ್ವಸಂಸ್ಥೆಯ ಯುನೆಸ್ಕೊ ಫೆಬ್ರವರಿ.21 ನ್ನು ವಿಶ್ವ ಮಾತೃ ಭಾಷೆ ದಿನವಾಗಿ ಆಚರಿಸಲು ಘೋಷಣೆ ಮಾಡಿತು.

## ಆಸ್ಟ್ರೇಲಿಯನ್ ಓಪನ್ ಟೆನಿಸ್ ಮಹಿಳಾ ಸಿಂಗಲ್ಸ್ ಪ್ರಶಸ್ತಿ ಗೆದ್ದ ಜಪಾನ್ ತಾರೆ ನವೊಮಿ ಒಸಾಕಾ



* ಆಸ್ಟ್ರೇಲಿಯನ್ ಓಪನ್ ಟೆನಿಸ್ ಮಹಿಳಾ ಸಿಂಗಲ್ಸ್ ಪ್ರಶಸ್ತಿ ಗೆದ್ದ ಜಪಾನ್ ತಾರೆ ನವೊಮಿ ಒಸಾಕಾ ಹಾಗೂ ಇವರು ಸತತ 2ನೇ ಹಾಗೂ ಒಟ್ಟಾರೆ 4ನೇ ಗ್ರಾಂಡ್ ಸ್ಲಾಂ ಪ್ರಶಸ್ತಿ ಗೆದ್ದುಕೊಂಡಿದ್ದಾರೆ.
* ಮೆಲ್ಬೋರ್ನ್ ಪಾರ್ಕ್‌ನ ರಾಡ್ ಲೇವರ್ ಅರೇನಾದ ಹಾರ್ಡ್‌ಕೋರ್ಟ್‌ನಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ಆಸ್ಟ್ರೇಲಿಯನ್ ಓಪನ್ ಟೆನಿಸ್ ಟೂರ್ನಿಯಲ್ಲಿ ಜಪಾನ್ ತಾರೆ ನವೊಮಿ ಒಸಾಕಾ ರವರು ಅಮೆರಿಕದ ಜೆನ್ನಿಫರ್ ಬ್ರಾಡಿ ವಿರುದ್ಧ ಜಯ ಗಳಿಸಿ ಮಹಿಳಾ ಸಿಂಗಲ್ಸ್ ಪ್ರಶಸ್ತಿ ಗೆದ್ದುಕೊಂಡಿದ್ದಾರೆ.
* 23 ವರ್ಷದ ಜಪಾನ್ ತಾರೆ ನವೊಮಿ ಒಸಾಕಾಗೆ ಇದು 2ನೇ ಆಸ್ಟ್ರೇಲಿಯನ್ ಓಪನ್ ಪ್ರಶಸ್ತಿಯಾಗಿದೆ, ಈ ಮೊದಲು 2019ರಲ್ಲಿ ಪ್ರಥಮ ಬಾರಿ ಚಾಂಪಿಯನ್ ಆಗಿದ್ದರು.
* ಯುಎಸ್ ಓಪನ್‌ನಲ್ಲಿ 2018, 2020 ನವೊಮಿ ಒಸಾಕಾ 2 ಗ್ರಾಂಡ್ ಸ್ಲಾಂ ಪ್ರಶಸ್ತಿಗಳನ್ನು ಜಯಿಸಿದ್ದಾರೆ, ಒಟ್ಟಾರೆ ಇವರು 4ನೇ ಗ್ರಾಂಡ್ ಸ್ಲಾಂ ಪ್ರಶಸ್ತಿ ಗೆದ್ದುಕೊಂಡಿದ್ದಾರೆ.
* ಮೋನಿಕಾ ಸೆಲೆಸ್ ವೃತ್ತಿಜೀವನದಲ್ಲಿ ಅಂದರೆ 30 ವರ್ಷಗಳ ಹಿಂದೆ 4 ಗ್ರಾಂಡ್ ಸ್ಲಾಂ ಫೈನಲ್‌ಗಳಲ್ಲೂ ಜಯಸಾಧಿಸಿದ್ದರು, ಇದೀಗ ಜಪಾನ್ ತಾರೆ ನವೊಮಿ ಒಸಾಕಾ ಈಗ ಈ ಪಟ್ಟಿಯನ್ನು ಸೇರಿದ್ದಾರೆ.
* ಚಾಂಪಿಯನ್ ಜಪಾನ್ ತಾರೆ ನವೊಮಿ ಒಸಾಕಾ15.70 ಕೋಟಿ ರೂ. ಬಹುಮಾನ ಪಡೆದುಕೊಂಡಿದ್ದಾರೆ, ಹಾಗೂ ರನ್ನರ್‌ಅಪ್ ಬ್ರಾಡಿ 8.56 ಕೋಟಿ ರೂ. ಪಡೆದುಕೊಂಡಿದ್ದಾರೆ.

## 23-02-2021

### ಪುದುಚೇರಿಯಲ್ಲಿ ಕಾಂಗ್ರೆಸ್ ಮತ್ತು ಡಿಎಂಕೆ ಮೈತ್ರಿ ಸರ್ಕಾರ ಪತನ, ರಾಷ್ಟ್ರಪತಿ ಆಳ್ವಿಕೆ



* ಪ್ರಸ್ತುತ ಪುದುಚೇರಿಯಲ್ಲಿ ಇರುವ ಕಾಂಗ್ರೆಸ್ ಮತ್ತು ಡಿಎಂಕೆ ನೇತೃತ್ವದ ಮೈತ್ರಿ ಸರ್ಕಾರವು ಬಹುಮತ ಸಾಬೀತುಪಡಿಸುವಲ್ಲಿ ವಿಫಲವಾಗಿ ಸರ್ಕಾರ ಪತನಗೊಂಡಿದೆ, ಮುಖ್ಯಮಂತ್ರಿ ವಿ ನಾರಾಯಣಸಾಮಿ ಯವರು ಲೆಫ್ಟಿನೆಂಟ್ ಗವರ್ನರ್ ತಮಿಳ್ ಸಾಯಿ ಸೌಂದರ್ ರಾಜನ್ ಅವರಿಗೆ ರಾಜೀನಾಮೆ ನೀಡಿದರು, ಸದ್ಯ ಕೇಂದ್ರಾಡಳಿತ ಪ್ರದೇಶದಲ್ಲಿ ಬಿಜೆಪಿಯು ಸರ್ಕಾರ ರಚಿಸುವದಿಲ್ಲ ಎಂದು ತಿಳಿಸಿದೆ ಈ ಹಿನ್ನಲೆಇಂದಾಗಿ ಇದೀಗ ರಾಷ್ಟ್ರಪತಿ ಆಳ್ವಿಕೆಯವನ್ನು ಜಾರಿಗೊಳಿಸಲು ತೀರ್ಮಾನ ಕೈಗೊಳ್ಳಲಾಗಿದೆ ಎಂದು ತಿಳಿದು ಬಂದಿದೆ.
* ಕೇಂದ್ರಾಡಳಿತ ಪ್ರದೇಶವಾಗಿರುವ ಪುದುಚೇರಿ ಬಿಜೆಪಿಯು ಸರ್ಕಾರ ರಚಿಸುವದಿಲ್ಲ ಎಂದು ಪುದುಚೇರಿ ಬಿಜೆಪಿ ರಾಜ್ಯಾಧ್ಯಕ್ಷ ವಿ ಸ್ವಾಮಿನಾಥನ್ ತಿಳಿಸಿದ್ದಾರೆ.

### ಪಾಕ್ ಪ್ರಧಾನಿ ಶ್ರೀಲಂಕಾಗೆ ತೆರಳಲು ಭಾರತೀಯ ವಾಯುಮಾರ್ಗ ಬಳಸಲು ಅನುಮತಿ ನೀಡಿದ ಭಾರತ



* ಪಾಕಿಸ್ತಾನ ಪ್ರಧಾನಿ ಇಮ್ರಾನ್ ಖಾನ್ ಫೆಬ್ರವರಿ 23ರಂದು ಶ್ರೀಲಂಕಾ ಪ್ರವಾಸ ಬೆಳಸಲಿದ್ದಾರೆ, ಶ್ರೀಲಂಕಾಗೆ ತೆರಳುವ ಪಾಕ್ ಪ್ರಧಾನಿಗೆ ಭಾರತ ಸರ್ಕಾರವು ಭಾರತೀಯ ವಾಯು ಮಾರ್ಗ ಬಳಕೆಗೆ ಅನುಮತಿ ನೀಡಿದೆ.
* ಈ ಹಿಂದೆ 2019ರಲ್ಲಿ ಕಾಶ್ಮೀರದಲ್ಲಿ ಮಾನವ ಹಕ್ಕುಗಳ ಉಲ್ಲಂಘನೆಯಾಗಿದೆ ಎಂದು ಆರೋಪಿಸಿ ಪಾಕಿಸ್ತಾನ ಪ್ರಧಾನಿ ಇಮ್ರಾನ್ ಖಾನ್ ಮತ್ತು ಪಾಕಿಸ್ತಾನದ ಅವರಿಗೆ ನರೇಂದ್ರ ಮೋದಿ ಸರ್ಕಾರ, ಅಮೆರಿಕ ಮತ್ತು ಸೌದಿ ಅರೇಬಿಯಾ ದೇಶಗಳಿಗೆ ವಿಮಾನ ಹಾರಾಟನಡೆಸಲು ಅವಕಾಶವನ್ನು ನೀಡಿರಲಿಲ್ಲ.

### ಕೇಂದ್ರ ಸರ್ಕಾರವು ಸತ್ಯಜಿತ್ ರೇ ಪ್ರಶಸ್ತಿ ಘೋಷಣೆ



* ಕೇಂದ್ರ ಸರ್ಕಾರದ ಕೇಂದ್ರ ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವ ಪ್ರಕಾಶ್ ಜಾವ್ಡೇಕರ್'ರವರು ಖ್ಯಾತ ಚಿತ್ರ ನಿರ್ಮಾಪಕ ಸತ್ಯಜಿತ್ ರೇ ಹೆಸರಿನಲ್ಲಿ ರಾಷ್ಟ್ರಮಟ್ಟದ ಚಲನಚಿತ್ರ ಪ್ರಶಸ್ತಿಯನ್ನು ಕೊಲ್ಕತ್ತಾದಲ್ಲಿ ನಡೆದ ರಾಷ್ಟ್ರೀಯ ಚಲನಚಿತ್ರ ಅಭಿವೃದ್ಧಿ ನಿಗಮದ ಸಮಾರಂಭದಲ್ಲಿ ಘೋಷಣೆ ಮಾಡಿದ್ದಾರೆ.
* ಖ್ಯಾತ ಚಿತ್ರ ನಿರ್ಮಾಪಕ ಸತ್ಯಜಿತ್ ರೇ ಅವರ ಮೊದಲ ಚಿತ್ರ, ಪ್ಯಾಥರ್ ಪಾಂಚಾಲಿ, 1956 ರ ಕ್ಯಾನೆಸ್ ಚಲನಚಿತ್ರೋತ್ಸವದಲ್ಲಿ ಉದ್ಘಾಟನಾ ಅತ್ಯುತ್ತಮ ಮಾನವ ದಾಖಲೆ ಪ್ರಶಸ್ತಿ ಸೇರಿದಂತೆ ಹನ್ನೊಂದು ಅಂತರರಾಷ್ಟ್ರೀಯ ಬಹುಮಾನಗಳನ್ನು ಗೆದ್ದಿದೆ.
* ಸತ್ಯಜಿತ್ ರೇ ಅವರ ವೃತ್ತಿಜೀವನದಲ್ಲಿ 32 ಭಾರತೀಯ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಗಳು, ಗೋಲ್ಡನ್ ಸಿಂಹ, ಗೋಲ್ಡನ್ ಕರಡಿ, 2 ಬೆಳ್ಳಿ ಕರಡಿಗಳು, ಅಂತರರಾಷ್ಟ್ರೀಯ ಚಲನಚಿತ್ರೋತ್ಸವಗಳು ಮತ್ತು ಸಮಾರಂಭಗಳಲ್ಲಿ ಅನೇಕ ಹೆಚ್ಚುವರಿ ಪ್ರಶಸ್ತಿಗಳು ಮತ್ತು 1992 ರಲ್ಲಿ ಅಕಾಡೆಮಿ ಗೌರವ ಪ್ರಶಸ್ತಿ ಸೇರಿದಂತೆ ಅನೇಕ ಪ್ರಮುಖ ಪ್ರಶಸ್ತಿಗಳನ್ನು ಪಡೆದರು. ಭಾರತ ಸರ್ಕಾರ 1992 ರಲ್ಲಿ ಭಾರತ್ ರತ್ನ ಎಂಬ ಅತ್ಯುನ್ನತ ನಾಗರಿಕ ಪ್ರಶಸ್ತಿಯನ್ನು ನೀಡಿ ಗೌರವಿಸಿದರು.

## ಸೌದಿ ಅರೇಬಿಯಾ ಸೇನೆಯಲ್ಲಿ ಮಹಿಳೆಯರಿಗೆ ಅವಕಾಶ



* ಸೌದಿ ಅರೇಬಿಯಾ ರಾಜಕುಮಾರ ಮೊಹಮ್ಮದ್ ಬಿನ್ ಸಲ್ಮಾನ್ ಅವರ ವಿಷನ್ 2030ರ ಅಡಿಯಲ್ಲಿ ಮಹಿಳೆಯರು ಇನ್ನು ಮುಂದೆ ಶಸ್ತ್ರಾಸ್ತ್ರಗಳನ್ನು ಹಿಡಿದು ಸೇನೆಗೆ ಸೇರಬಹುದು ಎಂದು ತಿಳಿಸಿದೆ, ಮಹಿಳೆಯರು ಸೌದಿ ಅರೇಬಿಯಾ ಸೇನೆ, ರಾಯಲ್ ಸೌದಿ ಏರ್ ಡಿಫೆನ್ಸ್, ರಾಯಲ್ ಸೌದಿ ನೌಕಾಪಡೆ, ರಾಯಲ್ ಸೌದಿ ಸ್ಟ್ರಾಟೆಜಿಕ್ ಮಿಸ್ಸೈಲ್ ಫೋರ್ಸ್ ಮತ್ತು ಸಶಸ್ತ್ರ ಪಡೆಗಳ ವೈದ್ಯಕೀಯ ಸೇವೆಗಳಿಗೆ ಸೇರಬಹುದು ಎಂದು ಸೌದಿ ರಕ್ಷಣಾ ಸಚಿವಾಲಯ ಮಾಹಿತಿ ನೀಡಿದೆ ಎಂದು ಗಲ್ಫ್ ನ್ಯೂಸ್ ವರದಿ ಪ್ರಕಟಿಸಿದೆ.
* ಸೌದಿ ರಕ್ಷಣಾ ಸಚಿವಾಲಯವು ತಮ್ಮ ಏಕೀಕೃತ ಪ್ರವೇಶ ಪೋರ್ಟಲ್ ಮೂಲಕ ಸೌದಿ ಮಹಿಳೆಯರಿಗೆ ಮಿಲಿಟರಿಯಲ್ಲಿನ ಹುದ್ದೆಗಳಿಗೆ ಅರ್ಜಿ ಸಲ್ಲಿಸಬಹುದು ಎಂದು ವರದಿಯನ್ನು ಪ್ರಕಟಿಸಿದೆ, ಸೌದಿ ರಕ್ಷಣಾ ಸಚಿವಾಲಯದ ಪ್ರಕಾರ ಮಹಿಳೆಯರನ್ನು ಸೈನಿಕರು, ಲ್ಯಾನ್ಸ್ ಕಾರ್ಪೊರಲ್ ಗಳು, ಕಾರ್ಪೊರಲ್ ಗಳು, ಸಾರ್ಜೆಂಟ್ ಗಳು ಮತ್ತು ಸಿಬ್ಬಂದಿ ಸಾರ್ಜೆಂಟ್ ಗಳಾಗಿ ನೇಮಕ ಮಾಡಿಕೊಳ್ಳಲಾಗುತ್ತದೆ ಎಂದು ಸೌದಿ ರಕ್ಷಣಾ ಸಚಿವಾಲಯ ತಿಳಿಸಿದೆ.

## DRDO ವಿಎಲ್ ಎಸ್ಆರ್ಎಸ್ಎಎಮ್ ಕ್ಷಿಪಣಿ ಯಶಸ್ವಿ ಉಡಾವಣೆ



* ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (DRDO) ಬಾಲಸೋರ್‌ನ ಒಡಿಶಾ ಕರಾವಳಿಯಲ್ಲಿ ಲಂಬ ಉಡಾವಣಾ ಕಿರು ಶ್ರೇಣಿಯ ಮೇಲ್ಮೈಯಿಂದ ಗಾಳಿಯ ಕ್ಷಿಪಣಿಯ (ವಿಎಲ್ಎಸ್ಆರ್ಎಸ್ಎಎಮ್) ಎರಡು ಯಶಸ್ವಿ ಉಡಾವಣೆಗಳನ್ನು ನಡೆಸಿತು, ಮತ್ತು ಚಂಡಿಪುರದ ಇಂಟಿಗ್ರೇಟೆಡ್ ಟೆಸ್ಟ್ ರೇಂಜ್ (ITR)ನಿಂದ ಸ್ಥಿರ ಲಂಬ ಲಾಂಚರ್‌ನಿಂದ ಉಡಾವಣೆಗಳನ್ನು ನಡೆಸಲಾಯಿತು ಈ ಕ್ಷಿಪಣಿಯ ನಿಖರವಾದ ಗುರಿಗಳನ್ನು ಧ್ವಂಸಗೊಳಿಸಿದೆ ಎಂದು ವಿಜ್ಞಾನಿಗಳು ಮಾಹಿತಿಯನ್ನು ನೀಡಿದರು.
* ಭಾರತೀಯ ನೌಕಾಪಡೆಗಾಗಿ ಡಿಆರ್‌ಡಿಒ ಸ್ಥಳೀಯವಾಗಿ ವಿನ್ಯಾಸಗೊಳಿಸಿದ ಮತ್ತು ಅಭಿವೃದ್ಧಿಪಡಿಸಿದ ವಿಎಲ್ ಎಸ್ಆರ್ಎಸ್ಎಎಮ್ ಸಮುದ್ರ ಸ್ಕಿಮ್ಮಿಂಗ್ ಗುರಿಗಳು ಸೇರಿದಂತೆ ನಿಕಟ ವ್ಯಾಪ್ತಿಯಲ್ಲಿ ವಿವಿಧ ವೈಮಾನಿಕ ಬೆದರಿಕೆಗಳನ್ನು ತಟಸ್ಥಗೊಳಿಸಲು ಉದ್ದೇಶಿಸಿದೆ.
* ಕ್ಷಿಪಣಿಗಳನ್ನು ಕನಿಷ್ಠ ಮತ್ತು ಗರಿಷ್ಠ ವ್ಯಾಪ್ತಿಗೆ ಪರೀಕ್ಷಿಸಲಾಯಿತು, ಪ್ರಯೋಗಗಳ ಸಮಯದಲ್ಲಿ ವೆಪನ್ ಕಂಟ್ರೋಲ್ ಸಿಸ್ಟಮ್ ನೊಂದಿಗೆ ವಿಎಲ್ ಎಸ್ಆರ್ ಎಸ್ ಎಎಮ್ ಅನ್ನು ನಿಯೋಜಿಸಲಾಗಿದೆ.
* ಯಶಸ್ವಿ ಪ್ರಯೋಗಗಳನ್ನು ಡಿಆರ್‌ಡಿಒಗೆ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅಭಿನಂದಿಸಿದರು, ಹಾಗೂ ಡಿಆರ್‌ಡಿಒ ಅಧ್ಯಕ್ಷ ಜಿ.ಸತೀಶ್ ರೆಡ್ಡಿ ಯವರು ವಿಎಲ್ಎಸ್ ಆರ್ಎಸ್ಎಎಮ್ ಕ್ಷಿಪಣಿ ವ್ಯವಸ್ಥೆಯ ಯಶಸ್ವಿ ಹಾರಾಟ ಪರೀಕ್ಷೆಯಲ್ಲಿ ಭಾಗಿಯಾಗಿರುವ ತಂಡಗಳನ್ನು ಅಭಿನಂದಿಸಿದರು.

## ರಾಜ್ಯ ಹೈಕೋರ್ಟ್ ಗೆ 4 ನ್ಯಾಯಮೂರ್ತಿಗಳ ನೇಮಕ



* ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರು ಕರ್ನಾಟಕ ರಾಜ್ಯ ಹೈಕೋರ್ಟ್'ಗೆ ನೂತನವಾಗಿ 4 ಜನ ನ್ಯಾಯಮೂರ್ತಿಗಳನ್ನು ನೇಮಿಸಿ ಆದೇಶ ಹೊರಡಿಸಿದ್ದಾರೆ ಎಂದು ಕೇಂದ್ರ ಕಾನೂನು ಸಚಿವಾಲಯ ಮಾಹಿತಿಯನ್ನು ನೀಡಿದೆ, ಈ ಹಿಂದೆ ಸೆಪ್ಟೆಂಬರ್ 2019 ರಲ್ಲಿ ಈ 4 ನ್ಯಾಯಮೂರ್ತಿಗಳನ್ನು ರಾಜ್ಯ ಹೈಕೋರ್ಟ್'ನ ಹೆಚ್ಚುವರಿ ನ್ಯಾಯಮೂರ್ತಿಗಳನ್ನಾಗಿ ನೇಮಕ ಮಾಡಲಾಗಿತ್ತು. ನೂತನವಾಗಿ ನೇಮಕಗೊಂಡ ನ್ಯಾಯಮೂರ್ತಿಗಳ ಹೆಸರುಗಳು: ನ್ಯಾಯಮೂರ್ತಿ ಸಿಂಗಪುರಂ ರಾಘವಾಚಾರ್ ಕೃಷ್ಣಕುಮಾರ್, ನ್ಯಾಯಮೂರ್ತಿ ಅಶೋಕ್ ಸುಭಾಷ್ ಚಂದ್ರ ಕಿಣಗಿ, ನ್ಯಾಯಮೂರ್ತಿ ಸಚಿನ್ ಶಂಕರ್ ಮಗದುಮ್, ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್. ಈ 4 ನ್ಯಾಯಮೂರ್ತಿಗಳು ರಾಜ್ಯ ಹೈಕೋರ್ಟ್'ಗೆ ನೂತನವಾಗಿ ನೇಮಕ ಗೊಂಡಿದ್ದಾರೆ.

## ಅಯೋಧ್ಯೆ ವಿಮಾನ ನಿಲ್ದಾಣಕ್ಕೆ ಶ್ರೀರಾಮನ ಹೆಸರು ನಾಮಕರಣ



* ಉತ್ತರ ಪ್ರದೇಶ ಸರ್ಕಾರವು 5.50 ಲಕ್ಷ ಕೋಟಿ ಮೊತ್ತದ ಬಜೆಟ್ ಮಂಡನೆ ಮಾಡಲಾಯಿತು ಪ್ರಸ್ತುತ ಅಯೋಧ್ಯೆಯಲ್ಲಿ ವಿಮಾನ ನಿಲ್ದಾಣಕ್ಕಾಗಿ 101 ಕೋಟಿ ರೂ. ಮೀಸಲಿಡಲಾಗಿದೆ ಹಾಗೂ ಇದನ್ನು ಮುಂದಿನ ದಿನಗಳಲ್ಲಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನಾಗಿ

ಮಾರ್ಪಡಿಸಲಾಗುವದು ಅದರ ಜೊತೆಗೆ ಜೆವರ್ ವಿಮಾನ ನಿಲ್ದಾಣದಲ್ಲಿ ರನ್‌ವೇಗಳನ್ನು ಹೆಚ್ಚಿಸಲು ಸುಮಾರು 2,000 ಕೋಟಿ ನೀಡಲಾಗುವದು ಎಂದು ಹಣಕಾಸು ಸಚಿವ ಸುರೇಶ್ ಖನ್ನಾ ಅವರು ಬಜೆಟ್‌ನಲ್ಲಿ ಹೇಳಿದರು.
* ಸದ್ಯ ಅಯೋಧ್ಯೆಯಲ್ಲಿ ನಿರ್ಮಾಣವಾಗುತ್ತಿರುವ ವಿಮಾನ ನಿಲ್ದಾಣಕ್ಕೆ ಕಾರ್ಯ ಮುಕ್ತಾಯಗೊಂಡನಂತರ ವಿಮಾನ ನಿಲ್ದಾಣಕ್ಕೆ 'ಮರ್ಯಾದಾ ಪುರುಷೋತ್ತಮ ಶ್ರೀ ರಾಮಚಂದ್ರ ವಿಮಾನ ನಿಲ್ದಾಣ' ಎಂಬುದಾಗಿ ನಾಮಕರಣ ಮಾಡಲಾಗುತ್ತದೆ ಎಂದು ಉತ್ತರ ಪ್ರದೇಶ ಸರ್ಕಾರ ಮಾಹಿತಿಯನ್ನು ನೀಡಿತು.

## ಈ ಬಾರಿಯ ಬ್ರಿಕ್ಸ್ ಶೃಂಗಸಭೆಯ ಅಧ್ಯಕ್ಷತೆ ವಹಿಸಲಿರುವ ಭಾರತ




* ಈ ಬಾರಿಯ ಬ್ರಿಕ್ಸ್ ಶೃಂಗಸಭೆಯ ಅಧ್ಯಕ್ಷತೆಯನ್ನು ಭಾರತವೇ ವಹಿಸಲಿದೆ, ಹಾಗೂ ಈ ಬ್ರಿಕ್ಸ್ ಶೃಂಗಸಭೆಯಲ್ಲಿ ಬ್ರೆಜಿಲ್, ರಷ್ಯಾ, ಭಾರತ, ಚೀನಾ, ದಕ್ಷಿಣ ಆಫ್ರಿಕಾ ರಾಷ್ಟ್ರಗಳು ಭಾಗವಹಿಸಲಿವೆ. ಈ 5 ಸದಸ್ಯ ರಾಷ್ಟ್ರಗಳು ಆರ್ಥಿಕ ಪ್ರಬಲ ರಾಷ್ಟ್ರವಾಗಿ ಹೊರಹೊಮ್ಮುವಲ್ಲಿ ಭಾರತದೊಂದಿಗೆ ಪ್ರಬಲ ಸಹಕಾರದೊಂದಿಗೆ ಕಾರ್ಯನಿರ್ವಹಿಸುವುದಾಗಿ ಚೀನಾ ಹೇಳಿಕೆಯನ್ನು ನೀಡಿದೆ, ಅಲ್ಲದೆ ಈ ಬಾರಿ ಭಾರತ ಬ್ರಿಕ್ಸ್ ಶೃಂಗಸಭೆ ಆಯೋಜಿಸುವುದಕ್ಕೆ ಚೀನಾ ವಿದೇಶಾಂಗ ವ್ಯವಹಾರಗಳ ವಕ್ತಾರ ವಾಂಗ್ ವೆನ್ ಬಿನ್'ರವರು ಬೆಂಬಲವನ್ನು ಸೂಚಿಸಲಾಗುತ್ತದೆ ಎಂದು ತಿಳಿಸಿದ್ದಾರೆ.
* ಕೇಂದ್ರ ಸಚಿವ ಎಸ್ ಜೈಶಂಕರ್ ಹಾಗೂ ಬ್ರಿಕ್ಸ್ ಸಚಿವಾಲಯ ಬ್ರಿಕ್ಸ್ 2021 ವೆಬ್ ಸೈಟ್ ಫೆಬ್ರುವರಿ 19 ರಂದು ನವದೆಹಲಿಯ ಸುಷ್ಮಾ ಸ್ವರಾಜ್ ಭವನದಲ್ಲಿ ಅನಾವರಣಮಾಡಲಾಯಿತು.
* ವಿಶ್ವದ ಪ್ರಮುಖ ಉದಯೋನ್ಮುಖ ಮಾರುಕಟ್ಟೆ ಆರ್ಥಿಕತೆಗಳಾದ ಬ್ರೆಜಿಲ್, ರಷ್ಯಾ, ಭಾರತ, ಚೀನಾ ಮತ್ತು ದಕ್ಷಿಣ ಆಫ್ರಿಕಾದ ಪ್ರಬಲ ಗುಂಪಿನ ಬ್ರಿಕ್ಸ್ ಒಂದು ಸಂಕ್ಷಿಪ್ತ ರೂಪವಾಗಿದೆ, ಶಾಂತಿ, ಭದ್ರತೆ, ಅಭಿವೃದ್ಧಿ ಮತ್ತು ಸಹಕಾರವನ್ನು ಉತ್ತೇಜಿಸುವ ಉದ್ದೇಶವನ್ನು ಬ್ರಿಕ್ಸ್ ಕಾರ್ಯವಿಧಾನ ಹೊಂದಿದೆ.

# 24-02-2021

## ಚೀನಾದ ಯಾವುದೇ ಕಂಪನಿಗೆ ಭಾರತದಲ್ಲಿ ಹೂಡಿಕೆಗೆ ಅನುಮತಿ ನೀಡಿಲ್ಲ




* ಭಾರತದಲ್ಲಿ ಹೂಡಿಕೆ ಮಾಡಲು ಚೀನಾ ದೇಶದ ಯಾವುದೇ ಕಂಪನಿಗಳಿಗೆ ಅನುಮತಿಯನ್ನು ನೀಡಿಲ್ಲ ಪ್ರಸ್ತುತ ಇದುವರೆಗೂ ಯಾವ ಅಂತಹ ಪ್ರಸ್ತಾವಗಳಿಗೂ ಒಪ್ಪಿಗೆ ನೀಡಿಲ್ಲ ಎಂದು ಕೇಂದ್ರ ಸರ್ಕಾರದ ಮೂಲಗಳಿಂದ ಮಾಹಿತಿ ಬಂದಿದೆ.
* ಇತ್ತೀಚಿಗೆ ಚೀನಾ ಮತ್ತು ಭಾರತದ ದೇಶಗಳ ಗಡಿಯಲ್ಲಿನ ಉದ್ವಿಗ್ನತೆ ಕಡಿಮೆಯಾಗುತ್ತಿದ್ದಂತೆಯೇ ಚೀನಾದಿಂದ ಹೂಡಿಕೆ ಪ್ರಸ್ತಾಪಗಳು ಹರಿದುಬರುತ್ತಿವೆ ಆದರೆ ಆ ವರದಿಗಳನ್ನು ನಿರಾಕರಿಸಲಾಗಿದೆ ಎಂದು ಸರ್ಕಾರ ತಿಳಿಸಿದೆ.
* ಪ್ರಸ್ತುತ ಹಾಂಕಾಂಗ್ ಮೂಲದ ಮೂರು ಕಂಪನಿಗಳ ಪ್ರಸ್ತಾಪವನ್ನು ಜನೇವರಿ 22ರಂದು ನಡೆದ ಸಭೆಯಲ್ಲಿ ಅಂಗೀಕರಿಸಲಾಗಿದೆ. ಹಾಂಕಾಂಗ್ ಮೂಲದ 3ಕಂಪನಿಗಳು:
* ಸಿಟಿಜನ್ ವಾಚಸ್, ನಿಪ್ಪಾನ್ ಪೈಂಟ್ಸ್, ನೆಟ್‌ಪ್ಲೇಗಳಿಂದ ಪ್ರಸ್ತಾಪ ಬಂದಿತ್ತು ಇವುಗಳಲ್ಲಿ ಎರಡು ಜಪಾನಿ ಕಂಪೆನಿ ಮತ್ತು ಒಂದು ಎನ್‌ಆರ್ ಐ ಕಂಪನಿ ಯಾಗಿವೆ ಎಂದು ಮೂಲಗಳು ತಿಳಿಸಿವೆ.
* ಸರ್ಕಾರವು ದೃಢವಾದ ಎಫ್‌ಡಿಐ ನೀತಿಯನ್ನು ಜಾರಿಗೊಳಿಸಿದೆ. FDI ಎಂದರೇನು ? FDI (ಒಂದು ಕಂಪನಿಯು ಮತ್ತೊಂದು ದೇಶದಲ್ಲಿನ ವ್ಯಾಪಾರ ಘಟಕದಲ್ಲಿ ಮಾಲೀಕತ್ವವನ್ನು ನಿಯಂತ್ರಿಸುವಾಗ ವಿದೇಶಿ ನೇರ ಹೂಡಿಕೆ) ಸಾಮಾನ್ಯವಾಗಿ, ಹೂಡಿಕೆದಾರರು ವಿದೇಶಿ ವ್ಯವಹಾರ ಕಾರ್ಯಾಚರಣೆಗಳನ್ನು ಸ್ಥಾಪಿಸಿದಾಗ ಅಥವಾ ವಿದೇಶಿ ವ್ಯವಹಾರ ಸ್ವತ್ತುಗಳನ್ನು ಸ್ವಾಧೀನಪಡಿಸಿಕೊಂಡಾಗ ಎಫ್ ಡಿಐ ನಡೆಯುತ್ತದೆ, ಇದರಲ್ಲಿ ಮಾಲೀಕತ್ವವನ್ನು ಸ್ಥಾಪಿಸುವುದು ಅಥವಾ ವಿದೇಶಿ ಕಂಪನಿಯಲ್ಲಿ ಆಸಕ್ತಿಯನ್ನು ನಿಯಂತ್ರಿಸುವುದು.

## ಶ್ರೀಲಂಕಾದ ಕ್ರಿಕೆಟ್ ಆಟಗಾರ ಉಪುಲ್ ತರಂಗ ಅಂತಾರಾಷ್ಟ್ರೀಯ ಕ್ರಿಕೆಟಿಗೆ ವಿದಾಯ



* ಶ್ರೀಲಂಕಾದ ಕ್ರಿಕೆಟ್ ಆಟಗಾರ ಉಪುಲ್ ತರಂಗ ಅವರು ಅಂತಾರಾಷ್ಟ್ರೀಯ ಕ್ರಿಕೆಟಿಗೆ ನಿವೃತ್ತಿ ಘೋಷಿಸಿದರು, ಈ ಶ್ರೀಲಂಕಾದ ಕ್ರಿಕೆಟ್ ತಂಡದ ಆಟಗಾರ ಎಡಗೈ ಬ್ಯಾಟ್ಸಮನ್ ಹಾಗೂ ವಿಕೆಟ್ ಕೀಪರ್ ಕೂಡ ಆಗಿ ಮಿಂಚಿದರು.
* ಶ್ರೀಲಂಕಾದ ಉಪುಲ್ ತರಂಗ ರವರು ಭಾರತ ಪ್ರವಾಸದ ವೇಳೆ ಅಂದರೆ 2005ರ ಅಹ್ಮದಾಬಾದ್‌ನಲ್ಲಿ ಟೆಸ್ಟ್ ಪಂದ್ಯ ಆಡುವ ಮೂಲಕ ಅಂತಾರಾಷ್ಟ್ರೀಯ ಕ್ರಿಕೆಟಿಗೆ ಪದಾರ್ಪಣೆ ಮಾಡಿದ್ದರು.
* ಪ್ರಸ್ತುತ ಇವರು 31 ಟೆಸ್ಟ್‌ಗಳನ್ನು ಆಡಿ 1,754 ರನ್ ಗಳಿಸಿದ ಸಾಧನೆ ಮಾಡಿದ್ದಾರೆ, ಹಾಗೂ 3 ಶತಕ ಹಾಗೂ 8 ಅರ್ಧ ಶತಕಗಳ ಸಾಧನೆ ಮಾಡಿದ್ದಾರೆ.
* ಉಪುಲ್ ತರಂಗ ರವರು 2017ರಲ್ಲಿ ಭಾರತದ ವಿರುದ್ಧವೇ ಕೊನೆಯ ಟೆಸ್ಟ್ ಆಡಿದ್ದರು.
* ಅಂತಾರಾಷ್ಟ್ರೀಯ ಕ್ರಿಕೆಟಿಗೆ ವಿದಾಯ ಹೇಳುವ ಸಮಯ ಇದಾಗಿದೆ ಎಂದು ಉಪುಲ್ ತರಂಗ ರವರು ಟ್ವೀಟ್ ಮಾಡುವ ಮೂಲಕ ತಿಳಿಸಿದ್ದಾರೆ.

## ಕೊಂಕಣಿ ಸಾಹಿತಿ ಹೆರೊಲ್ವಿಯುಸ್ (ಗ್ರೇಶನ್ ಪಿಯುಸ್ ಡಿಸಿಲ್ವಾ) ವಿಧಿವಶ



* ಕೊಂಕಣಿಯ ಜನಪ್ರಿಯ ಸಾಹಿತಿ ಹಾಗೂ ಹೆರೊಲ್ವಿಯುಸ್ ಎಂದೇ ಚಿರಪರಿಚಿತರಾಗಿದ್ದ ಗ್ರೇಶನ್ ಪಿಯುಸ್ ಡಿಸಿಲ್ವಾ ತಮ್ಮ 67ನೇ ವಯಸ್ಸಿನಲ್ಲಿ ನಿಧನರಾಗಿದ್ದಾರೆ.
* ಗ್ರೇಶನ್ ಪಿಯುಸ್ ಡಿಸಿಲ್ವಾರವರು 1954ರಲ್ಲಿ ಮಂಗಳೂರಿನ ಕೊರ್ಡೆಲ್‌ನಲ್ಲಿ ಜನಿಸಿದ್ದರು ಅವರ 10 ಕಾದಂಬರಿ, 170 ಸಣ್ಣ ಕಥೆ, 200ರಷ್ಟು ಕವಿತೆಗಳನ್ನು ರಚಿಸಿದ್ದಾರೆ. 300 ರಷ್ಟು ಲೇಖನ ಮತ್ತು 1200 ಹಾಸ್ಯ ಲೇಖನಗಳನ್ನು ಬರೆದಿದ್ದಾರೆ.
* ಅವರ ಸಾಹಿತ್ಯ ಸೇವೆಗಾಗಿ ಗೋವಾ ಭಾಷಾ ಮಂಡಲ, ದಾಯ್ಜಿ ದುಬೈ, ಕೊಂಕಣಿ ಕುಟಮ್ ಬಹರೈನ್, ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಸೇರಿದಂತೆ ಹಲವಾರು ಪ್ರಶಸ್ತಿ ಪುರಸ್ಕಾರಗಳು ಇವರಿಗೆ ಲಭಿಸಿವೆ.
* ಕೊಂಕಣಿಯಲ್ಲಿ 40 ವರ್ಷಗಳ ಸುದೀರ್ಘ ಸಾಹಿತ್ಯ ಸೇವೆಯನ್ನು ಅವರು ಸಲ್ಲಿಸಿದ್ದಾರೆ, ಈ ಮೊದಲು ಕೇಂದ್ರೀಯ ಗುಪ್ತಚರ ದಳದಲ್ಲಿ ಉದ್ಯೋಗಕ್ಕೆ ಸೇರಿಕೊಂಡರು ಹಾಗೂ ಇವರು ಕರ್ತವ್ಯ ನಿಮಿತ್ತ ದಿಲ್ಲಿ, ಮಧ್ಯ ಪ್ರದೇಶ, ಗುಜರಾತ್, ಸಿಕ್ಕಿಂ, ಕರ್ನಾಟಕ, ಜಮ್ಮು ಕಾಶ್ಮೀರ ರಾಜ್ಯಗಳಲ್ಲಿ ಕೇಂದ್ರೀಯ ಗುಪ್ತಚರ ದಳದಲ್ಲಿ ಕೆಲಸ ನಿರ್ವಹಿಸಿದ್ದಾರೆ.
* ಮಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಇಮಿಗ್ರೇಶನ್ ವಿಭಾಗದ ಅಧಿಕಾರಿಯಾಗಿ ಸೇವೆಸಲ್ಲಿಸಿದ್ದಾರೆ.

## ಭಾರತ ಫ್ರಾನ್ಸ್ ಜಂಟಿ ನೌಕಾ ಸಮರಾಭ್ಯಾಸಕ್ಕೆ ನಿರ್ಧರಿಸಿವೆ



* ಭಾರತ ಫ್ರಾನ್ಸ್ ದೇಶಗಳು ಅರೇಬಿಯನ್ ಸಮುದ್ರ ಹಾಗೂ ಹಿಂದೂ ಮಹಾಸಾಗರದಲ್ಲಿ, ಫ್ರಾನ್ಸ್‌ನ ಚಾರ್ಲ್ಸ್ ಡೆ ಗುಲ್ಲೆ ವಿಮಾನ ವಾಹಕ ದಾಳಿ ಪಡೆ ಹಾಗೂ ಐಎನ್‌ಎಸ್ ವಿಕ್ರಮಾದಿತ್ಯ ಜಂಟಿಯಾಗಿ ಸಮರಾಭ್ಯಾಸವನ್ನು ಏಪ್ರಿಲ್‌ನಲ್ಲಿ ನಡೆಸಲು ನಿರ್ಧರಿಸಿವೆ ಇದರಿಂದ ಎರಡು ದೇಶಗಳ ರಕ್ಷಣಾ ಸಹಕಾರ ಮತ್ತಷ್ಟು ಉತ್ತಮಗೊಳ್ಳಲಿದೆ.
* ಇತ್ತೀಚಿಗೆ ಹೊಸದಾಗಿ ನೇಮಕಗೊಂಡ ಕಮಾಂಡರ್ ರೇರ್ ಅಡ್ಮಿರಲ್ ಅಜಯ್ ಕೊಚ್ಚಾರ್ ನೇತೃತ್ವದ ತಂಡ ಫ್ರಾನ್ಸ್ ಕಾರ್ಯಪಡೆ ಜತೆ ವಿನೂತನ ಕಾರ್ಯಾಚರಣೆ ನಡೆಸಲಿದೆ ಎಂದು ಈ ಜಂಟಿ ಸಮರಾಭ್ಯಾಸದ ಮಾಹಿತಿಯನ್ನು ಭಾರತೀಯ ನೌಕಾಪಡೆ ಅಧಿಕಾರಿ ತಿಳಿಸಿದ್ದಾರೆ.
* ಈ ಜಂಟಿ ಸಮರಾಭ್ಯಾಸದಲ್ಲಿ ಚಾರ್ಲ್ಸ್ ಡೆ ಗುಲ್ಲೆ 42,500 ಟನ್ ವಿಮಾನ ವಾಹಕವಾಗಿದೆ ಹಾಗೂ ರಫೇಲ್ ಎಂ ಫೈಟರ್ ವಿಮಾನವನ್ನು ಒಳಗೊಂಡಿದೆ ಜೊತೆಗೆ ಐಎನ್‌ಎಸ್ ವಿಕ್ರಮಾದಿತ್ಯ ಸಾಂಪ್ರದಾಯಿಕ ವಿಮಾನ ವಾಹಕವಾಗಿದೆ 44,500 ಟನ್ ಎಂಐಜಿ 29 ಕೆ ವಿಮಾನವನ್ನು ಒಳಗೊಂಡು ಸಮರಾಭ್ಯಾಸ ನಡೆಸಲಿವೆ ಎಂದು ತಿಳಿದುಬಂದಿದೆ.

## ಚಿತ್ರದುರ್ಗದಲ್ಲಿ ಖಾಸಗಿ ಕೃಷಿ ಮಾರುಕಟ್ಟೆ ಶೀಘ್ರ ಆರಂಭ



* ಕೇಂದ್ರ ಸರ್ಕಾರ ನೂತನ ಕೃಷಿ ಕಾಯ್ದೆ ಜಾರಿಗೆ ತಂದಿದೆ, ಸದ್ಯ ಇದೀಗ ಕರ್ನಾಟಕ ಸರ್ಕಾರ ರಾಜ್ಯದಲ್ಲಿ ಖಾಸಗಿ ಕೃಷಿ ಮಾರುಕಟ್ಟೆಯನ್ನು ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲೂಕಿನ ಹುಚ್ಚವನಹಳ್ಳಿ ಬಳಿ 106 ಎಕರೆ ಪ್ರದೇಶದಲ್ಲಿ ನಿರ್ಮಾಣ ಮಾಡಲು ಅನುಮತಿಯನ್ನು ನೀಡಿದೆ.
* ಚಿತ್ರದುರ್ಗ ಜಿಲ್ಲೆಯಲ್ಲಿ ಖಾಸಗಿ ಕೃಷಿ ಮಾರುಕಟ್ಟೆಯು ಅಕ್ಷಯ ಫುಡ್ ಪಾರ್ಕ್ ಲಿಮಿಟೆಡ್ ಎಂಬ ಕಂಪನಿಯು ಪ್ರಾರಂಭಮಾಡಲಿದೆ, ಮುಂದಿನ ದಿನಗಳಲ್ಲಿ ಅಂದರೆ ಏಪ್ರಿಲ್ ತಿಂಗಳಲ್ಲಿ ಮಾರುಕಟ್ಟೆ ನಿರ್ಮಾಣ ಕಾರ್ಯ ಪ್ರಾರಂಭವಾಗಲಿದೆ.
* ಕೃಷಿ ಕಾಯ್ದೆ ವಿರೋಧಿಸಿ ನವದೆಹಲಿಯಲ್ಲಿ ರೈತರು ಪ್ರತಿಭಟನೆ ನಡೆಸುತ್ತಿದ್ದಾರೆ, ರಾಜ್ಯದ ಮೊದಲ ಖಾಸಗಿ ಕೃಷಿ ಮಾರುಕಟ್ಟೆ ಇದಾಗಲಿದೆ ಸದ್ಯ ಎಪಿಎಂಸಿ ಕಾಯ್ದೆ ತಿದ್ದುಪಡಿ ಜಾರಿಗೆ ಬಂದ ನಂತರ ಆರಂಭವಾಗಲಿದೆ ಎಂದು ತಿಳಿಸಿದ್ದಾರೆ.
* ಈ ಅಕ್ಷಯ ಫುಡ್ ಪಾರ್ಕ್'ನಲ್ಲಿ ರೈತರು ಬೆಳೆದ ಕೃಷಿ ಉತ್ಪನ್ನಗಳನ್ನು ಸಂಗ್ರಹ ಮಾಡಿ ಉತ್ತಮ ದರ(ದಾರಾನಿ) ಸಿಕ್ಕಾಗ ಮಾರಾಟ ಮಾಡಲು ಸಹ ಅವಕಾಶ ನೀಡಲಾಗುತ್ತದೆ ಎಂದು ಅಕ್ಷಯ ಫುಡ್ ಪಾರ್ಕ್ ವ್ಯವಸ್ಥಾಪಕ ನಿರ್ದೇಶಕ ಎಂ.ನಾರಾಯಣ ಸ್ವಾಮಿ ತಿಳಿಸಿದ್ದಾರೆ.
* ರಾಷ್ಟ್ರೀಯ ಕೃಷಿ ಮಾರುಕಟ್ಟೆ "ಇ ನಾಮ್" ಅಂತರ್ಜಾಲದ ವ್ಯವಸ್ಥೆಯ ಮೂಲಕ ಕೃಷಿ ಉತ್ಪನ್ನಗಳ ಮಾರಾಟವಾಗಲಿದೆ ಎಂದು ತಿಳಿಸಿದ್ದಾರೆ.

## ಮೊಟೆರಾದ ಸರ್ದಾರ್ ಪಟೇಲ್ ಸ್ಟೇಡಿಯಂ ಇನ್ನು ನರೇಂದ್ರ ಮೋದಿ ಸ್ಟೇಡಿಯಂ




* ಅಹಮದಾಬಾದ್'ನಲ್ಲಿರುವ ವಿಶ್ವದ ಅತ್ಯಂತ ದೊಡ್ಡ ಕ್ರಿಕೆಟ್ ಸ್ಟೇಡಿಯಂ ಖ್ಯಾತಿ ಪಡೆದಿರುವ ಮೊಟೆರಾ ಕ್ರೀಡಾಂಗಣವನ್ನು ರಾಷ್ಟ್ರಪತಿ ರಾಮನಾಥ್ ಕೋವಿಂದ್ ರವರು ಉದ್ಘಾಟಣೆ ಮಾಡಿದರು.
* ಈ ಮೊದಲು ಇದ್ದ ಸರ್ದಾರ್ ಪಟೇಲ್ ಸ್ಟೇಡಿಯಂ ಎಂಬ ಹೆಸರನ್ನು ಬದಲಾವಣೆ ಮಾಡಿ ನರೇಂದ್ರ ಮೋದಿ ಸ್ಟೇಡಿಯಂ ಎಂದು ಮರು ನಾಮಕರಣ ಮಾಡಲಾಗಿದೆ ಎಂದು ಗೃಹ ಸಚಿವ ಅಮಿತ್ ಶಾ ತಿಳಿಸಿದ್ದಾರೆ.
* 1982ರಲ್ಲಿ ಗುಜರಾತ್ ಸರ್ಕಾರವು 63 ಎಕರೆ ಜಾಗದಲ್ಲಿ ವಿಸ್ತೀರ್ಣದಲ್ಲಿ ಈ ಕ್ರೀಡಾಂಗಣವನ್ನು ನಿರ್ಮಾಣ ಮಾಡಿತ್ತು, ಆ ಸಮಯದಲ್ಲಿ ಸುಮಾರು 49 ಸಾವಿರ ಪ್ರೇಕ್ಷಕರು ಕುಳಿತು ಪಂದ್ಯ ವೀಕ್ಷಿಸಬಹುದಾಗಿತ್ತು, ಸದ್ಯ ಇದೀಗ ಈ ಕ್ರೀಡಾಂಗಣವು 1,10,000 ಪ್ರೇಕ್ಷಕರು ಪಂದ್ಯ ವೀಕ್ಷಣೆಯ ಸಾಮರ್ಥ್ಯವನ್ನು ಹೊಂದಿದೆ.

## ಅತಿ ಕಿರಿಯ ಕಾರ್ಪೊರೇಟರ್ ರೂಪದರ್ಶಿ(Model) ಪಾಯಲ್ ಪಟೇಲ್



* ಗುಜರಾತನ ಸೂರತ್ ಮಹಾನಗರ ಪಾಲಿಕೆ (ಎಸ್ಎಂಸಿ) ಚುನಾವಣೆಯಲ್ಲಿ 22 ವರ್ಷದ ಮಾಡೆಲ್ ಮತ್ತು ವೃತ್ತಿಯಲ್ಲಿ ನಟಿ ಪಯಾಲ್ ಪಟೇಲ್ ಜಯ ದಾಖಲಿಸಿದ್ದಾರೆ.
* ಗುಜರಾತ್‌ನ ಸೂರತ್‌ನಲ್ಲಿ ವಾರ್ಡ್ 16 ರ ಕಿರಿಯ ಕಾರ್ಪೊರೇಟರ್ ಆಗಿ ಆಮ್ ಆದ್ಮಿ ಪಕ್ಷದ(AAP) ಅಭ್ಯರ್ಥಿ ಜಯ ಸಾಧಿಸಿದ್ದಾಳೆ.
* ಅಮ್ರೆಲಿಯ ಅಂತಿಮ ವರ್ಷದ ಬಿ ಕಾಮ್ ವಿದ್ಯಾರ್ಥಿನಿ ಪಟೇಲ್ ತನ್ನ ಪ್ರತಿಸ್ಪರ್ಧಿಯಾದ ಬಿಜೆಪಿ ಅಭ್ಯರ್ಥಿಯ ವಿರುದ್ಧ 12,000 ಕ್ಕೂ ಹೆಚ್ಚು ಮತಗಳ ಅಂತರದಿಂದ ಗೆಲುವು ದಾಖಲಿಸಿದ್ದಾರೆ.
* ಪಾಯಲ್ ಪಟೇಲ್ ನಟಿ ಮತ್ತು ಗುಜರಾತಿ ಚಿತ್ರ 'ತಾರಿ ಮಾರಿ ದೋಸ್ತಿ' ಯಲ್ಲಿ ನಟಿಸಿದ್ದಾರೆ, ಹಾಗೂ ಅವರು 50 ಕ್ಕೂ ಹೆಚ್ಚು ಹಾಡುಗಳಲ್ಲಿ ಸಹ ಕಾಣಿಸಿಕೊಂಡಿದ್ದಾರೆ. ಗುಜರಾತ್'ನಲ್ಲಿ 6 ಮಹಾನಗರ ಪಾಲಿಕೆಗಳಿವೆ:
* ಅಹಮದಾಬಾದ್, ಸೂರತ್, ವಡೋದರಾ, ರಾಜ್‌ಕೋಟ್, ಜಮ್ನಗರ ಮತ್ತು ಭಾವನಗರ, ಎಂಬ ಮಹಾನಗರ ಪಾಲಿಕೆಗಳಿವೆ ಸದ್ಯ ಬಿಜೆಪಿ ಈ ಪಾಲಿಕೆಗಳಲ್ಲಿ ಅದ್ಭುತ ಗೆಲುವು ದಾಖಲಿಸಿದೆ.
* ಸೂರತ್ ಮಹಾನಗರ ಪಾಲಿಕೆ ಚುನಾವಣೆಯಲ್ಲಿ ಅರವಿಂದ್ ಕೇಜ್ರಿವಾಲ್ ನೇತೃತ್ವದ AAP ಪಕ್ಷ ಎಸ್ಎಂಸಿಯಲ್ಲಿ 120 ಸ್ಥಾನಗಳಲ್ಲಿ 27 ಸ್ಥಾನಗಳನ್ನು ಗೆದ್ದುಕೊಂಡಿದೆ.

# 25-02-2021

## ಗೂಗಲ್ ಪ್ಲೇ ಮ್ಯೂಸಿಕ್ ಸೇವೆ ಸ್ಥಗಿತ




* ಗೂಗಲ್ ಪ್ಲೇ ಮ್ಯೂಸಿಕ್ ಫೆಬ್ರುವರಿ 24 ಮಧ್ಯರಾತ್ರಿಯಿಂದ ತನ್ನ ಸೇವೆಯನ್ನು ರಾತ್ರಿ ಸರ್ವರ್ ನಿಂದ ಹಿಂತೆಗೆದುಕೊಳ್ಳಲಾಗುವುದು ಎಂದು ಗೂಗಲ್ ತಿಳಿಸಿದೆ.
* ಈ ಆಪ್'ನ ಬಳಕೆದಾರರು ತಮ್ಮ ಡೇಟಾಗಳನ್ನೂ ಈ ಆಪ್'ನಲ್ಲಿ ಸಂಗ್ರಹಿಸಿದ್ದರೆ ಕೂಡಲೇ ಬಳಕೆದಾರರು ಕೂಡಲೇ ಸರ್ವರ್ ನಿಂದ ಬ್ಯಾಕಪ್ ಡೇಟಾಗಳನ್ನೂ ಪಡೆದುಕೊಳ್ಳಬಯುದಾಗಿದೆ ಎಂದು ಗೂಗಲ್ ತಿಳಿಸಿದೆ.
* ಗೂಗಲ್ ಪ್ಲೇ ಮ್ಯೂಸಿಕ್ ಆಪ್`ಅನ್ನು ಫೆಬ್ರುವರಿ 24ರ ಮೊದಲು ತನ್ನ ಯೂಟ್ಯೂಬ್ ಮ್ಯೂಸಿಕ್'ಗೆ ವರ್ಗಾಯಿಸುವಂತೆ ಗೂಗಲ್ ಬಳಕೆದಾರರಿಗೆ ತಿಳಿಸಲಾಗಿತ್ತು ಅದರಂತೆ, ಫೆಬ್ರುವರಿ 24 ರಂದು ಮಾಹಿತಿಯನ್ನು ಅಳಿಸಲಾಗುತ್ತದೆ ಎಂದು ಗೂಗಲ್ ತಿಳಿಸಿದೆ.
* ಈ ಅಪ್ಲಿಕೇಶನ್ ಫೆಬ್ರುವರಿ 24ರ ನಂತರ ಯಾವುದೇ ಡೇಟಾವನ್ನು ಮತ್ತೆ ಪಡೆಯಲು ಸಾಧ್ಯವಿಲ್ಲ ಎಂದು ಕಂಪೆನಿ ಮಾಹಿತಿಯನ್ನು ನೀಡಿದೆ.

## ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆ ಅಡಿಯಲ್ಲಿ ರಾಜ್ಯ ಕೃಷಿ ಇಲಾಖೆಗೆ ಪಿಎಂ ಕಿಸಾನ್ ಪ್ರಶಸ್ತಿ




* ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ ನಿಧಿ ಯೋಜನೆಯಡಿಯಲ್ಲಿ ಕರ್ನಾಟಕ ರಾಜ್ಯ ಕೃಷಿ ಇಲಾಖೆಗೆ ಪಿಎಂ ಕಿಸಾನ್ ಪ್ರಶಸ್ತಿ ಲಭಿಸಿದೆ.
* ಕರ್ನಾಟಕ ರಾಜ್ಯ ಕೃಷಿ ಇಲಾಖೆಯು ಈ ಯೋಜನೆ ಅಡಿಯಲ್ಲಿ ಆಧಾರ್ ಜೋಡಣೆಯ ಬ್ಯಾಂಕ್ ಖಾತೆ ಫಲಾನುಭವಿಗಳಿಗೆ ನೇರ ನಗದು ವರ್ಗಾವಣೆ ಮಾಡಿರುವದಕ್ಕಾಗಿ ಈ ಪ್ರಶಸ್ತಿ ಲಭಿಸಿದೆ.
* ಕೇಂದ್ರ ಕೃಷಿ ಸಚಿವರಾದ ನರೇಂದ್ರ ಸಿಂಗ್

ತೋಮರ್'ರವರು ಕರ್ನಾಟಕ ರಾಜ್ಯ ಕೃಷಿ ಸಚಿವ ಬಿ.ಸಿ.ಪಾಟೀಲ್ ಹಾಗೂ ಇಲಾಖಾ ಅಧಿಕಾರಿಗಳಿಗೆ ಪ್ರಶಸ್ತಿಯನ್ನು ನೀಡಿ ಗೌರವಿಸಿದರು.
* ಪ್ರಸ್ತುತ ಈ ಪ್ರಧಾನ ಮಂತ್ರಿ ಕಿಸಾನ್ ಯೋಜನೆಯ 2ನೇ ವರ್ಷದ ಸಂಭ್ರಮಾಚರಣೆ ಕಾರ್ಯಕ್ರಮವಾಗಿದೆ ಹಾಗೂ ಈ ಕಾರ್ಯಕ್ರಮವು ನವದೆಹಲಿಯ ಪೂಸಾದಲ್ಲಿ ಜರುಗಿತು.
* ಪ್ರಧಾನ ಮಂತ್ರಿ ಕಿಸಾನ್ ಯೋಜನೆಯ ಆದಾಯ ಕರ್ನಾಟಕ ರಾಜ್ಯವು ಶೇ.97 ರಷ್ಟು ಆಧಾರ ಜೋಡಣೆಯ ದತ್ತಾಂಶವನ್ನು ಹೊಂದಿದೆ ಎಂದು ತಿಳಿಸಿದ್ದಾರೆ.
* ರಾಜ್ಯದ ಶೇಕಡಾ 90ಕ್ಕೂ ಹೆಚ್ಚು ಫಲಾನುಭವಿಗಳಿಗೆ ಆಧಾರ ಜೋಡಣೆ ಹೊಂದಿದ ಬ್ಯಾಂಕ್ ಖಾತೆಗಳಿಗೆ ನೇರ ನಗದು ವರ್ಗಾವಣೆ ಮಾಡಲಾಗಿದೆ ಎಂದು ಕೃಷಿ ಸಚಿವ ಮಾಹಿತಿಯನ್ನು ನೀಡಿದರು.

## ಅರುಣಾಚಲ ಪ್ರದೇಶದಲ್ಲಿ ಹೊಸ ಆಲ್ಪೈನ್(Alpine)ಸಸ್ಯ ಪ್ರಭೇದ ಪತ್ತೆ



* ಅರುಣಾಚಲ ಪ್ರದೇಶದ ತವಾಂಗ್ ಜಿಲ್ಲೆಯಲ್ಲಿ ಹೊಸ ಜಾತಿಯ ಆಲ್ಪೈನ್ ಸಸ್ಯವನ್ನು ವಿಜ್ಞಾನಿಗಳ ಗುಂಪು ಕಂಡುಹಿಡಿದಿದೆ.
* ಹೊಸ ಜಾತಿಯ ಸಸ್ಯವು ಹಿಮಾಲಯನ್ ಸೂರ್ಯಕಾಂತಿಯ ಕುಟುಂಬ ವರ್ಗಕ್ಕೆ ಸೇರಿದೆ, ಹಾಗೂ ಇದಕ್ಕೆ ಕ್ರೆಮಂಟೋಡಿಯಮ್ ಇಂಡಿಕಮ್ ಎಂದು ಹೆಸರಿಸಲಾಗಿದೆ.
* ಈ ಜಾತಿಯ ಸಸ್ಯವು ಸಾಮಾನ್ಯವಾಗಿ ಜುಲೈನಿಂದ ಆಗಸ್ಟ್ ವರೆಗೆ ಹೂವುಗಳನ್ನೂ ಬಿಡುತ್ತದೆ.
* ಅರುಣಾಚಲ ಪ್ರದೇಶದ 16 ಆಡಳಿತ ಜಿಲ್ಲೆಗಳಲ್ಲಿ ಇದು ಒಂದು ತವಾಂಗ್ ಜಿಲ್ಲೆಯ ಪೆಂಗಾ ಟೆಂಗ್ ತ್ಸೊ ಸರೋವರಕ್ಕೆ ಸ್ಥಳೀಯವಾಗಿದೆ, ಹಾಗೂ ಈ ಆಲ್ಪೈನ್ ಸಸ್ಯ ಪ್ರಭೇದಗಳು ಅಳಿವಿನಂಚಿನಲ್ಲಿವೇ ಎಂದು ವಿಜ್ಞಾನಿಗಳು ತಿಳಿಸಿದ್ದಾರೆ.
* ಆಲ್ಪೈನ್ ವಾತಾವರಣದಲ್ಲಿ ಬೆಳೆಯುವ ಸಸ್ಯಗಳು, ಈ ಸಸ್ಯಗಳು ಶುಷ್ಕತೆ, ಕಡಿಮೆ ತಾಪಮಾನ, ಗಾಳಿ, ಬರ, ನೇರಳಾತೀತ ವಿಕಿರಣ, ಕಳಪೆ ಪೌಷ್ಠಿಕಾಂಶದ ಮಣ್ಣು ಮತ್ತು ಕಡಿಮೆ ಬೆಳವಣಿಗೆಯ ಪರಿಸರ ಪರಿಸ್ಥಿತಿಗಳ ಕಠಿಣ ಆಲ್ಪೈನ್ ಹವಾಮಾನಕ್ಕೆ ಹೊಂದಿಕೊಳ್ಳುತ್ತವೆ.

## ತನ್ನ ಮೊದಲ ಕಾಗದರಹಿತ ಬಜೆಟ್ ಅನ್ನು ಮಂಡಿಸಿದ ರಾಜಸ್ಥಾನ ಸರ್ಕಾರ



* ಫೆಬ್ರವರಿ 24, 2021 ರಂದು ರಾಜಸ್ಥಾನದ ಮುಖ್ಯಮಂತ್ರಿ ಅಶೋಕ್ ಗೆಹ್ಲೋಟ್ ನೇತೃತ್ವದ ಕಾಂಗ್ರೆಸ್ ಸರ್ಕಾರವು ರಾಜಸ್ಥಾನ ರಾಜ್ಯದ ಮೂರನೇ ಬಜೆಟ್ ಹಾಗೂ ಮೊದಲ ಕಾಗದರಹಿತ ಬಜೆಟ್ ಅನ್ನು ರಾಜ್ಯ ವಿಧಾನಸಭೆಯಲ್ಲಿ ಮಂಡಿಸಿತು.
* ಪ್ರಸ್ತುತ ರಾಜಸ್ಥಾನದ ಮುಖ್ಯಮಂತ್ರಿಯಾಗಿರುವ ಅಶೋಕ್ ಗೆಹ್ಲೋಟ್'ಯವರು ಅಲ್ಲಿನ ಹಣಕಾಸು ಖಾತೆಯನ್ನು ಹೊಂದಿದ್ದಾರೆ ಸ್ವತ ತಾವೇ ಫೆಬ್ರವರಿ 23, 2021 ರಂದು ಬಜೆಟ್ ಅನ್ನು ಅಂತಿಮಗೊಳಿಸಿದರು.
* ಸಂವಿಧಾನದ 202 ನೇ ವಿಧಿಗೆ ಅನುಗುಣವಾಗಿ ರಾಜ್ಯದ ಬಜೆಟ್ ಅನ್ನು ರಾಜ್ಯದ ಶಾಸಕಾಂಗಗಳ ಮನೆಗಳ ಮುಂದೆ ಇಡಲಾಗಿದೆ
* ರಾಜಸ್ಥಾನದ ರಾಜ್ಯ ವಿಧಾನಸಭೆಯು ಏಕಸಭೆಯ ಶಾಸಕಾಂಗವಾಗಿದೆ.
* ಏಕಸಭೆಯ ಶಾಸಕಾಂಗ ಎಂದರೆ ಒಂದೇ ಶಾಸಕಾಂಗ ಅಥವಾ ಸಂಸದೀಯ ಕೋಣೆ ಅಥವಾ ಮನೆಯನ್ನು ಒಳಗೊಂಡಿರುವ ಶಾಸಕಾಂಗ ಎಂದರ್ಥ
* ವಿಶ್ವದ ಅರ್ಧದಷ್ಟು ಸಾರ್ವಭೌಮ ರಾಜ್ಯಗಳು ಏಕರೂಪವಾಗಿವೆ.
* ಈ ಸಭೆ ಜೈಪುರದ ವಿಧಾನ ಭವನದಲ್ಲಿ ಸಭೆ ಸೇರುತ್ತದೆ, ರಾಜ್ಯ ವಿಧಾನಸಭೆಯ ಸದಸ್ಯರನ್ನು ಜನರಿಂದ ನೇರವಾಗಿ ಆಯ್ಕೆ ಮಾಡಲಾಗುತ್ತದೆ, ಮತ್ತು ಅವರು 5 ವರ್ಷಗಳ ಅವಧಿಗೆ ಆಯ್ಕೆಯಾಗುತ್ತಾರೆ.
* ಪ್ರಸ್ತುತ ರಾಜಸ್ಥಾನ ವಿಧಾನಸಭೆಯು 200 ಸದಸ್ಯರನ್ನು ಒಳಗೊಂಡಿದೆ.

## ರಾಷ್ಟ್ರೀಯ ನಗರ ಡಿಜಿಟಲ್ ಮಿಷನ್ ಅನ್ನು ಪ್ರಾರಂಭಿಸಿದ ಕೇಂದ್ರ ಸರ್ಕಾರ




* ಕೇಂದ್ರ ಸರ್ಕಾರವು ಫೆಬ್ರವರಿ 23, 2021ರಂದು 'ರಾಷ್ಟ್ರೀಯ ನಗರ ಡಿಜಿಟಲ್ ಮಿಷನ್' ಅನ್ನು ಪ್ರಾರಂಭಿಸಿದೆ.
* ರಾಷ್ಟ್ರೀಯ ನಗರ ಡಿಜಿಟಲ್ ಮಿಷನ್ ಅನ್ನು ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವ ಹರ್ದೀಪ್ ಸಿಂಗ್ ಪುರಿ ಮತ್ತು ಎಲೆಕ್ಟ್ರಾನಿಕ್ಸ್ ಮತ್ತು ಐಟಿ ಸಚಿವ ರವಿಶಂಕರ್ ಪ್ರಸಾದ್ ಅವರು ಪ್ರಾರಂಭಿಸಿದರು.
* ಈ ಮಿಷನ್ 2022 ರ ವೇಳೆಗೆ ನಗರಗಳಲ್ಲಿ ನಗರ ಆಡಳಿತ ಮತ್ತು ಸೇವಾ ವಿತರಣೆಗೆ ನಾಗರಿಕ ಕೇಂದ್ರಿತ ಮತ್ತು ಪರಿಸರ ವ್ಯವಸ್ಥೆ ಚಾಲಿತ ವಿಧಾನವನ್ನು ಜಾರಿಗೆ ತರಲಾಗುತ್ತದೆ ಎಂದು ಹೇಳಿದೆ.
* ಈ ರಾಷ್ಟ್ರೀಯ ನಗರ ಡಿಜಿಟಲ್ ಮಿಷನ್ ಸೇವಾ ವಿತರಣೆಗಳು ಅಂದರೆ ಸ್ಮಾರ್ಟ್ ಕೋಡ್, ಇಂಡಿಯಾ ಅರ್ಬನ್ ಡಾಟಾ ಎಕ್ಸ್ಚೇಂಜ್, ಸ್ಮಾರ್ಟ್ ಸಿಟೀಸ್ 2.0 ವೆಬ್‌ಸೈಟ್, ಮತ್ತು ಜಿಯೋಸ್ಪೇಷಿಯಲ್ ಮ್ಯಾನೇಜ್‌ಮೆಂಟ್ ಇನ್ಫರ್ಮೇಷನ್ ಸಿಸ್ಟಮ್ ನಂತಹ ಉಪಕ್ರಮಗಳನ್ನು ಈ ವರ್ಚುವಲ್ ಸಭೆಯಲ್ಲಿ ಪ್ರಾರಂಭಿಸಲಾಯಿತು.
* ಇಂಡಿಯಾ ಅರ್ಬನ್ ಡಾಟಾ ಎಕ್ಸ್ಚೇಂಜ್ ಉಪಕ್ರಮವನ್ನು ಸ್ಮಾರ್ಟ್ ಸಿಟೀಸ್ ಮಿಷನ್ ಬೆಂಗಳೂರಿನ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್ ಸಹಯೋಗದಲ್ಲಿ ಅಭಿವೃದ್ಧಿಪಡಿಸಿದೆ.

* ಪ್ರಸ್ತುತ ದೇಶದ ಎಲ್ಲಾ ನಗರಗಳಿಗೆ ಡಿಜಿಟಲ್ ಮೂಲಸೌಕರ್ಯವನ್ನು ಒದಗಿಸುವ ಸಲುವಾಗಿ ಈ ಮಿಷನ್ ಪ್ರಾರಂಭಿಸಲಾಗಿದೆ.


# 26-02-2021

## ದೇಶದಲ್ಲೇ ಮೊದಲು ಕೇರಳ ಸರ್ಕಾರದಿಂದ ಐಟಿ ಕ್ಷೇತ್ರಕ್ಕೆ ಕಲ್ಯಾಣ ನಿಧಿ ಸ್ಥಾಪನೆ



* ಕೇರಳ ರಾಜ್ಯದಲ್ಲಿ 18 ರಿಂದ 55 ವರ್ಷದೊಳಗಿನ ಐಟಿ ಕ್ಷೇತ್ರದ ಉದ್ಯೋಗಿಗಳಿಗಾಗಿ ಕಲ್ಯಾಣನಿಧಿ ಸ್ಥಾಪಿಸಲಾಗಿದೆ, ಹಾಗೂ ಇದು ದೇಶದಲ್ಲಿಯೇ ಮೊಟ್ಟ ಮೊದಲ ಬಾರಿಗೆ ಸ್ಥಾಪನೆಯಾದ ಕಲ್ಯಾಣ ನಿಧಿ ಇದಾಗಿದೆ.
* ಸುಮಾರು 10 ವರ್ಷಗಳ ಕಾಲ ಕಲ್ಯಾಣ ನಿಧಿಯಿಂದ ನೌಕರರಿಗೆ ಪಿಂಚಣಿಯಾಗಿ 3,000 ರೂ. ನೀಡಲಾಗುವದು.
* ಐಟಿ ಉದ್ಯೋಗಿಗಳ ಎರಡು ಕಲ್ಯಾಣ ಸಂಸ್ಥೆಗಳಾದ ಪ್ರತಿಧ್ವನಿ ಮತ್ತು ಪ್ರೋಗ್ರೆಸ್ಸಿವ್ ಟೆಕೀಸ್ ಕಲ್ಯಾಣ ನಿಧಿಯನ್ನು ಸ್ಥಾಪಿಸುವಂತೆ ಒತ್ತಾಯಿಸುತ್ತಿದ್ದವು, ಹೀಗಾಗಿ ಸರ್ಕಾರದ ನಿರ್ಧಾರದಿಂದ ಸಂಘಟನೆಯ ಅಧಿಕಾರಿಗಳು ಸರ್ಕಾರದ ನಿರ್ಧಾರವನ್ನು ಸ್ವಾಗತಿಸಿದ್ದಾರೆ.
* ಕೇರಳ ರಾಜ್ಯದಲ್ಲಿ ಐಟಿ ಉದ್ಯೋಗಿಗಳಿಗೆ ಕಲ್ಯಾಣ ನಿಧಿಯನ್ನು ಜಾರಿಗೆ ತಂದಿರುವುದು ಭಾರತದಲ್ಲಿ ಇದೇ ಮೊದಲು ಎಂದು ಪ್ರತಿಧ್ವನಿ ಸಂಸ್ಥೆಯ ಕಾರ್ಯದರ್ಶಿ ವಿನೀತ್ ಚಂದ್ರನ್ ತಿಳಿಸಿದ್ದಾರೆ.
* ಪ್ರಸ್ತುತ ಜರ್ಮನಿ, ಡೆನ್ಮಾರ್ಕ್, ಮತ್ತು ಯುಕೆ ಮುಂತಾದ ದೇಶಗಳಲ್ಲಿ ಐಟಿ ಉದ್ಯೋಗಿಗಳಿಗೆ ವಿಮಾ ಯೋಜನೆಗಳಿವೆ.
* ಕಲ್ಯಾಣ ನಿಧಿಯು ಐಟಿ ಕ್ಷೇತ್ರದಲ್ಲಿ ಇರುವವರಿಗೆ ಪಿಂಚಣಿ ಮತ್ತು ಅವರ ಮಕ್ಕಳಿಗೆ ಶಿಕ್ಷಣ ಸೌಲಭ್ಯಗಳು, ಹೆರಿಗೆ ಮತ್ತು ವೈದ್ಯಕೀಯ ಸೌಲಭ್ಯಗಳನ್ನು ನೀಡುತ್ತಿದೆ 'ಎಂದು ತಿಳಿಸಲಾಗಿದೆ.
* 2017 ಮತ್ತು 2018 ರಲ್ಲಿ ಐಟಿ ಉದ್ಯೋಗಿಗಳಿಗೆ ಕಲ್ಯಾಣ ಮಂಡಳಿ ಸ್ಥಾಪಿಸುವ ಬಗ್ಗೆ ಪ್ರತಿಧ್ವನಿ ಅಧಿಕಾರಿಗಳು ಕೇರಳದ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರನ್ನು ಭೇಟಿ ಮನವಿ ಮಾಡಿದ್ದರು.

## ಚೀನಾ ಸಂಪೂರ್ಣವಾಗಿ ಕಡುಬಡತನದಿಂದ ಮುಕ್ತವಾಗಿದೆ : ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಘೋಷಣೆ



* ಚೀನಾ ದೇಶವು ಕಮ್ಯುನಿಸ್ಟ್ ಪಕ್ಷದ ಆಡಳಿತದಲ್ಲಿ ತೀವ್ರ ಕಡುಬಡತನ ಸಂಪೂರ್ಣವಾಗಿ ಅಂತ್ಯವಾಗಿದೆ ಎಂದು ಅಧ್ಯಕ್ಷ ಕ್ಸಿ ಜಿನ್ ಪಿಂಗ್ ರಿಂದ ನವೆಂಬರ್‌ನಲ್ಲಿ ಅಧಿಕೃತವಾಗಿ ಘೋಷಣೆ ಮಾಡಲಾಗಿತ್ತು.
* ಚೀನಾದಲ್ಲಿ ಈ ವೇಳೆಗಾಗಲೇ 99 ಮಿಲಿಯನ್ ಜನರ ವಾರ್ಷಿಕ ಆದಾಯವು 2,300 ಯುವಾನ್ (355 ಡಾಲರ್) ಗಿಂತಲೂ ಕಡಿಮೆಯಾಗಿಲ್ಲ ಎಂದು ಅಭಿಪ್ರಾಯ ವ್ಯಕ್ತ ಪಡಿಸಲಾಗಿದೆ.
* ಈ ಹಿಂದೆ ಚೀನಾದಲ್ಲಿ 2012ರಲ್ಲಿ ಅಧಿಕಾರ ವಹಿಸಿಕೊಂಡ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಬಡತನ ನಿರ್ಮೂಲನೆಯೇ ಮೂಲಗುರಿ ಎಂದು ಘೋಷಿಸಿದ್ದರು. ಅಲ್ಲದೆ, ಚೀನಾ ಬಡತನ ನಿರ್ಮೂಲನೆ ಮಾಡುವ UN ಗುರಿ 2030ನ್ನು 10 ವರ್ಷಗಳ ಮುಂಚಿತವಾಗಿ ಸಾಧಿಸಿದೆ ಎಂದು ಅವರು ಹೇಳಿದರು.
* ಚೀನಾ ದೇಶದಲ್ಲಿನ ಜನರು ಕಳೆದ ಎಂಟು ವರ್ಷಗಳಲ್ಲಿ ಬಡತನ ರೇಖೆಯಡಿಯಲ್ಲಿ ವಾಸಿಸುತ್ತಿರುವ ಅಂತಿಮ 98.99 ಮಿಲಿಯನ್ ಬಡ ಗ್ರಾಮೀಣ ನಿವಾಸಿಗಳಾಗಿದ್ದು ಅವರೆಲ್ಲರನ್ನೂ ಬಡತನ ರೇಖೆಗಿಂತ ಮೇಲೆತ್ತಲಾಗಿದೆ ಎಂದು ಚೀನಾ ತಿಳಿಸಿದೆ.
* ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಪ್ರಕಾರ 27 ಮಿಲಿಯನ್ ಜನತೆಯ ಮನೆ ನವೀಕರಿಸಲಾಗಿದೆ ಮತ್ತು ಸರಿ ಸುಮಾರು 10 ಮಿಲಿಯನ್ ಜನರು ಹೊಸ ಮನೆಗಳಿಗೆ ತೆರಳಿದರು ಇದಕ್ಕಾಗಿ ಸರ್ಕಾರ ಒಟ್ಟು 1.6 ಟ್ರಿಲಿಯನ್ ಯುವಾನ್ ( 250 ಬಿಲಿಯನ್) ಖರ್ಚು ಮಾಡಿದೆ ಎಂದು ತಿಳಿಸಿದ್ದಾರೆ.
* ಚೀನಾ ದೇಶವು ಬಡತನ ನಿವಾರಣೆಗೆ ಸುಮಾರು 1.6 ಟ್ರಿಲಿಯನ್ ಯುವಾನ್ ಹಣವನ್ನು ಹೂಡಿಕೆ ಮಾಡಿರುವುದಾಗಿ ತಿಳಿಸಿದೆ.

## KSRTC ಕಾರ್ಗೋ ಪಾರ್ಸೆಲ್ ಸೇವೆಗೆ ಸಿಎಂ ಬಿ.ಎಸ್. ಯಡಿಯೂರಪ್ಪ ಚಾಲನೆ



* ಮುಖ್ಯ ಮಂತ್ರಿ ಬಿ.ಎಸ್. ಯಡಿಯೂರಪ್ಪನವರು ನಮ್ಮ ಕಾರ್ಗೋ ಯೋಜನೆಗೆ ಇತ್ತೀಚಿಗೆ ಚಾಲನೆ ನೀಡಿದರು.
* ಈ ಕಾರ್ಗೋ ಯೋಜನೆಯಿಂದಾಗಿ ಸಾರಿಗೆ ಇಲಾಖೆಯ ಆದಾಯವನ್ನು ಹೆಚ್ಚಿಸಿ ಗ್ರಾಹಕರಿಗೆ ಮತ್ತಷ್ಟು ಹೆಚ್ಚಿನ ಸೌಲಭ್ಯವನ್ನು ನೀಡುತ್ತದೆ ಎಂದು ತಿಳಿಸಲಾಗಿದೆ.
* ಸಾರಿಗೆ ಸಚಿವ ಲಕ್ಷ್ಮಣ ಸವದಿ, ಮೊದಲ ಹಂತದಲ್ಲಿ ರಾಜ್ಯದ 88 ಬಸ್ ನಿಲ್ದಾಣಗಳಲ್ಲಿ ಹಾಗೂ ಅಂತರರಾಜ್ಯದ 21 ನಿಲ್ದಾಣಗಳಲ್ಲಿ ಈ ಕಾರ್ಗೋ ಸೇವೆ ಆರಂಭವಾಗಲಿದೆ ಹಾಗೂ ಹಂತ ಹಂತವಾಗಿ ರಾಜ್ಯದ ಎಲ್ಲ ಕಡೆ ವಿಸ್ತರಿಸಲಾಗುತ್ತದೆ ಎಂಬ ಮಾಹಿತಿಯನ್ನು ನೀಡಿದರು.
* ಕಾರ್ಗೋ ಯೋಜನೆಯ ಮೂಲಕ ಬಸ್ ನಿಲ್ದಾಣಗಳಲ್ಲಿ ಪಾರ್ಸೆಲ್ ಕೌಂಟರ್ ಸ್ಥಾಪಿಸಲಾಗುತ್ತದೆ ಮತ್ತು ಗ್ರಾಹಕರು ತಮ್ಮ ಪಾರ್ಸೆಲ್‌ಗಳನ್ನು ನೋಂದಾಯಿಸಿ ಬೇರೆ ಬೇರೆ ಸ್ಥಳಗಳಿಗೆ ರವಾನಿಸಬಹುದಾಗಿದೆ.
* ಗ್ರಾಹಕರು ಪಾರ್ಸೆಲ್ ಬಗ್ಗೆ ಮಾಹಿತಿ ಪಡೆದುಕೊಳ್ಳಲು ಕಾಲ್ ಸೆಂಟರ್ ಸ್ಥಾಪನೆ ಮಾಡಲಾಗುತ್ತದೆ, ಹಾಗೂ ಗ್ರಾಹಕರ ವಸ್ತುಗಳಿಗೆ ವಿಮಾ ಸೌಲಭ್ಯ ಅವಕಾಶವೂ ಇರಲಿದೆ ಎಂಬ

ಮಾಹಿತಿಯನ್ನು ತಿಳಿಸಿದರು.

### ಜಲ ಶಕ್ತಿ ಸಚಿವಾಲಯದಿಂದ 'ಸ್ವಚ್ಛ ಪ್ರವಾಸಿ ತಾಣ'ಗಳಾಗಿ ಪರಿವರ್ತಿಸಲು 12 ಸ್ಥಳಗಳ ಆಯ್ಕೆ



* ಜಲ ಶಕ್ತಿ ಸಚಿವಾಲಯ ಸ್ವಚ್ಛ ಪ್ರದೇಶಗಳು ಅಭಿಯಾನದ 4ನೇ ಹಂತದ ಅಡಿಯಲ್ಲಿ ಸ್ವಚ್ಛ ಪ್ರವಾಸಿ ತಾಣಗಳಾಗಿ ಪರಿವರ್ತಿಸಲು 12 ತಾಣಗಳ ಆಯ್ಕೆ ಮಾಡಲಾಗಿದೆ ಎಂಬ ಮಾಹಿತಿಯನ್ನು ಪ್ರಕಟಿಸಿದೆ. ಆಯ್ಕೆಯಾದ 12 ತಾಣಗಳು:
* ಮಹಾರಾಷ್ಟ್ರದ ಅಜಂತ ಗುಹೆಗಳು, ಮಧ್ಯಪ್ರದೇಶದಲ್ಲಿ ಸಾಂಚಿ ಸ್ತೂಪ, ಕುಂಭಲ್‌ಗಢ ಕೋಟೆ, ಜೈಸಲ್ಮೇರ್ ಕೋಟೆ ಮತ್ತು ರಾಜಸ್ಥಾನದ ರಾಮದೇವ್ರಾ, ತೆಲಂಗಾಣದ ಹೈದರಾಬಾದ್‌ನ ಗೋಲ್ಕೊಂಡ ಕೋಟೆ; ಕೊನಾರ್ಕ್, ಒಡಿಶಾದ ಸೂರ್ಯ ದೇವಾಲಯ ಮತ್ತು ಚಂಡೀಗಢದ ದಿ ರಾಕ್ ಗಾರ್ಡನ್ ಈ ಪ್ರದೇಶಗಳನ್ನು ಒಳಗೊಂಡಿದೆ.
* ಈ ಪಟ್ಟಿಯಲ್ಲಿ ಶ್ರೀನಗರ, ಜಮ್ಮು ಮತ್ತು ಕಾಶ್ಮೀರದ ದಾಲ್ ಸರೋವರ, ಉತ್ತರ ಪ್ರದೇಶದ ಬಂಕೆ ಬಿಹಾರಿ ದೇವಸ್ಥಾನ, ಆಗ್ರಾ ಕೋಟೆ ಮತ್ತು ಪಶ್ಚಿಮ ಬಂಗಾಳದ ಕಾಲಿಘಾಟ್ ದೇವಾಲಯದಂತಹ ತಾಣಗಳು ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ನೈರ್ಮಲ್ಯ ಮತ್ತು ಸ್ವಚ್ಛತೆಯ ಗುಣಮಟ್ಟವನ್ನು ಸುಧಾರಿಸುವ ಮೂಲಕ ದೇಶೀಯ ಮತ್ತು ವಿದೇಶಿ ಪ್ರವಾಸಿಗರ ಅನುಭವವನ್ನು ಹೆಚ್ಚಿಸುವ ಉದ್ದೇಶವನ್ನು ಜಲ ಸಚಿವಾಲಯ ಹೊಂದಿದೆ ಎಂದು ಪ್ರಕಟಣೆಯಲ್ಲಿ ಮಾಹಿತಿಯನ್ನು ನೀಡಿದೆ.

### ಭಾರತ ಪಾಕಿಸ್ತಾನ LOC ಒಪ್ಪಂದಗಳ ಕಟ್ಟುನಿಟ್ಟಿನ ಪಾಲನೆಗೆ ಒಪ್ಪಿಗೆ



* ಭಾರತ ಪಾಕಿಸ್ತಾನ LOC ಒಪ್ಪಂದಗಳ ಕಟ್ಟುನಿಟ್ಟಿನ ಪಾಲನೆಗೆ ಪರಸ್ಪರ ಒಪ್ಪಿಗೆಯನ್ನು ನೀಡಿವೆ.
* ಭಾರತ ಪಾಕಿಸ್ತಾನ ದೇಶಗಳು ಫೆಬ್ರುವರಿ 25 ರಂದು ಡಿಜಿಎಂಒ ಮಟ್ಟದ ಮಾತುಕತೆಯಲ್ಲಿ ಪಾಲ್ಗೊಂಡಿದ್ದವು ಈ ಸಭೆಯಲ್ಲಿ ಎಲ್‌ಒಸಿ ಒಪ್ಪಂದಗಳನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡುವುದಕ್ಕೆ ಎರಡು ದೇಶಗಳು ಪರಸ್ಪರ ಒಪ್ಪಿಗೆಯನ್ನು ನೀಡಿವೆ.
* ಭಾರತ ಪಾಕಿಸ್ತಾನ ಈ ಎರಡು ದೇಶಗಳೂ ಎಲ್ಲಾ ಒಪ್ಪಂದಗಳು, ಕದನವಿರಾಮ ಉಲ್ಲಂಘನೆಯನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡುವುದಕ್ಕೆ ಒಪ್ಪಿಗೆ ಸೂಚಿಸಿವೆ, ಇದು ಫೆಬ್ರುವರಿ.24 25 ರಿಂದಲೇ ಜಾರಿಗೆ ಬರಲಿದೆ ಎಂದು ಜಂಟಿ ಹೇಳಿಕೆಯಲ್ಲಿ ಈ ಒಪ್ಪಂದಗಳ ಬಗ್ಗೆ ತಿಳಿಸಲಾಗಿದೆ.
* ಒಂದು ವೇಳೆ ಕಠಿಣ ಪರಿಸ್ಥಿತಿಗಳು ಎದುರಾದಲ್ಲಿ ಅವುಗಳನ್ನು ನಿಭಾಯಿಸುವುದಕ್ಕೆ ಹಾಟ್ ಲೈನ್ ಸಂಪರ್ಕ ಹಾಗೂ ಗಡಿ ಧ್ವಜ ಸಭೆಗಳನ್ನು ಬಳಕೆ ಮಾಡಿಕೊಳ್ಳುವುದಾಗಿ ಜಂಟಿ ಹೇಳಿಕೆಯಲ್ಲಿ ಈ ಎರಡು ರಾಷ್ಟ್ರಗಳು ಒಪ್ಪಿಕೊಂಡಿವೆ.

### 5 ರಾಜ್ಯಗಳ ಚುನಾವಣೆ ದಿನಾಂಕ ಘೋಷಣೆ ಮೇ 2ರಂದು ಫಲಿತಾಂಶ




* ಕೇಂದ್ರ ಚುನಾವಣಾ ಆಯೋಗವು 5 ರಾಜ್ಯಗಳಾದ ತಮಿಳುನಾಡು, ಕೇರಳ, ಬಂಗಾಳ, ಅಸ್ಸಾಂ ಮತ್ತು ಪುದುಚೇರಿ ಚುನಾವಣೆ ದಿನಾಂಕವನ್ನು ಘೋಷಣೆ ಮಾಡಿದೆ, ಹಾಗೂ ಮೇ 2ರಂದು ಫಲಿತಾಂಶ ಪ್ರಕಟಿಸಲಾಗುತ್ತದೆ ಎಂದು ಕೇಂದ್ರ ಚುನಾವಣಾ ಆಯೋಗ ತಿಳಿಸಿದೆ. ಚುನಾವಣೆಯ 5 ರಾಜ್ಯಗಳು ಮತ್ತು ಮತ ಕ್ಷೇತ್ರಗಳ ವಿವರ:
* ತಮಿಳುನಾಡು ರಾಜ್ಯ 234 ಕ್ಷೇತ್ರ, ಕೇರಳ ರಾಜ್ಯ140 ಕ್ಷೇತ್ರ, ಪುದುಚೇರಿ ರಾಜ್ಯ 30 ಕ್ಷೇತ್ರ, ಈ ಮೂರೂ ಕ್ಷೇತ್ರಗಳಲ್ಲಿ ಒಂದೇ ಹಂತದಲ್ಲಿ ಏಪ್ರಿಲ್ 6 ರಂದು ಚುನಾವಣೆ ನಡೆಯಲಿದೆ.
* ಪಶ್ಚಿಮ ಬಂಗಾಳ ರಾಜ್ಯ 294 ಕ್ಷೇತ್ರಗಳಲ್ಲಿ ಎಂಟು ಹಂತದಲ್ಲಿ ಚುನಾವಣೆ ನಡೆಯಲಿದೆ.
* ಅಸ್ಸಾಂ ರಾಜ್ಯ126 ಕ್ಷೇತ್ರಗಳಲ್ಲಿ ಮೂರು ಹಂತದಲ್ಲಿ ಚುನಾವಣೆ ನಡೆಯಲಿದೆ, ಎಂದು ಕೇಂದ್ರ ಚುನಾವಣೆ ಆಯೋಗ ತಿಳಿಸಿದೆ.
* ಪ್ರಸ್ತುತ ಈ 5 ರಾಜ್ಯಗಳಲ್ಲಿ 824 ಕ್ಷೇತ್ರಗಳಿಗೆ ಚುನಾವಣೆ ನಡೆಯುತ್ತದೆ ಒಟ್ಟಾರೆ 18.68 ಕೋಟಿ ಮತದಾರರು ಈ ಚುನಾವಣೆಯಲ್ಲಿ ಮತ ಚಲಾಯಿಸಲಿದ್ದಾರೆ.
* ಕೇಂದ್ರಾಡಳಿತ ಪ್ರದೇಶ ಪುದುಚೇರಿ ಮತ್ತು 4 ರಾಜ್ಯಗಳ ಚುನಾವಣೆಗಾಗಿ 2.7 ಲಕ್ಷ ಮತ ಕೇಂದ್ರಗಳನ್ನು ತೆರೆಯಲಾಗುವುದು ಎಂದು ಚುನಾವಣಾ ಆಯೋಗ ಮುಖ್ಯಸ್ಥ ಸುನೀಲ್ ಅರೋರಾ ಅವರು ಮಾಹಿತಿಯನ್ನು ನೀಡಿದ್ದಾರೆ. ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶದ ಮತ ಕ್ಷೇತ್ರಗಳ ಚುನಾವಣೆಗಳ ದಿನಾಂಕ ಪ್ರಕಟ:
* ಪಶ್ಚಿಮ ಬಂಗಾಳದಲ್ಲಿ 8 ಹಂತದಲ್ಲಿ ಚುನಾವಣೆ ನಡೆಯುತ್ತದೆ.
* ಅಸ್ಸಾಂ ರಾಜ್ಯದಲ್ಲಿ 3 ಹಂತದಲ್ಲಿ ಚುನಾವಣೆ ನಡೆಯಲಿದೆ.

## 27-02-2021

### 'ಭಾರತೀಯ ಆಟಿಕೆ ಮೇಳ 2021' ಕ್ಕೆ ಪ್ರಧಾನಿ ಮೋದಿಯಿಂದ ಚಾಲನೆ




* ಪ್ರಧಾನಿ ನರೇಂದ್ರ ಮೋದಿ ಅವರು ವಿಡಿಯೋ ಕಾನ್ಫರೆನ್ಸ್ ಮೂಲಕ ಭಾರತೀಯ ಆಟಿಕೆ ಮೇಳ 2021 (ದಿ ಇಂಡಿಯಾ ಟಾಯ್ ಫೇರ್ 2021) ಉದ್ಘಾಟಣೆ ಮಾಡಿದರು.
* 'ದಿ ಇಂಡಿಯಾ ಟಾಯ್ ಫೇರ್ 2021' ದಿನಾಂಕ ಫೆಬ್ರವರಿ 27 ರಿಂದ ಮಾರ್ಚ್ 2 ರವರೆಗೆ ನಡೆಯಲಿದೆ, ಈ ಮೇಳದಲ್ಲಿ 30 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿನ 1000ಕ್ಕೂ ಹೆಚ್ಚು ಪ್ರದರ್ಶಕರು ತಮ್ಮ ಸಾಮಗ್ರಿಗಳನ್ನು ಇ ಕಾಮರ್ಸ್ ಸಕ್ರಿಯಗೊಳಿಸಿದ ವರ್ಚುವಲ್ ಪ್ರದರ್ಶನದಲ್ಲಿ ಪ್ರದರ್ಶನ ಮಾಡಲಿದ್ದಾರೆ.
* ಖರೀದಿದಾರರು, ಮಾರಾಟಗಾರರು, ಉದ್ಯಮದ ಸಮಗ್ರ ಅಭಿವೃದ್ಧಿಗೆ ಸಂವಾದವನ್ನು ಉತ್ತೇಜಿಸುವುದು ಈ ಆಟಿಕೆ ಮೇಳದ ಉದ್ದೇಶವಾಗಿದೆ ಎಂದು ಪ್ರಧಾನಿ ಕಾರ್ಯಾಲಯ ಮಾಹಿತಿಯನ್ನು ನೀಡಿದೆ.
* ಈ ಹಿಂದೆ ಪ್ರಧಾನಿ ನರೇಂದ್ರ ಮೋದಿಯವರು 2020ರ ಆಗಸ್ಟ್ ನಲ್ಲಿ ಮನ್ ಕಿ ಬಾತ್ ಭಾಷಣದಲ್ಲಿ, ಮಗುವಿನ ಬೆಳವಣಿಗೆಯಲ್ಲಿ ಆಟಿಕೆಗಳ ಪಾತ್ರ ಬಹು ಮುಖ್ಯವಾಗಿದೆ ಎಂದು ತಿಳಿಸಿದ್ದರು.
* ಭಾರತದಲ್ಲಿ ಆಟಿಕೆಗಳ ಉತ್ಪಾದನೆ ಹೆಚ್ಚಿಸುವ ಸಲುವಾಗಿ ದೇಶದಲ್ಲಿ ಆಟಿಕೆಗಳ ಉತ್ಪಾದನೆಗೆ ಉತ್ತೇಜನ ನೀಡಲು ಭಾರತೀಯ ಆಟಿಕೆ ಮೇಳ 2021 ಆಯೋಜಿಸಲಾಗಿದೆ.

## ಸೊಲಾಪುರ ವಿಜಯಪುರ ರಾಷ್ಟ್ರೀಯ ಹೆದ್ದಾರಿ ನಿರ್ಮಾಣ ಲಿಮ್ಕಾ ಪುಸ್ತಕದಲ್ಲಿ ದಾಖಲೆ



* ಸೊಲಾಪುರ ವಿಜಯಪುರ ರಾಷ್ಟ್ರೀಯ ಹೆದ್ದಾರಿಯ ಡಾಂಬರೀಕರಣ ಕಾಮಗಾರಿ ನಡೆದಿದ್ದು, ಇದೆ ವೇಳೆ ಕೇವಲ 18 ಗಂಟೆಗಳಲ್ಲಿ 25.54 ಕಿ.ಮೀ. ರಾಷ್ಟ್ರೀಯ ಹೆದ್ದಾರಿಯನ್ನು ನಿರ್ಮಾಣ ಪೂರ್ಣಗೊಳಿಸಲಾಗಿದೆ.
* ಈ 110 ಕಿ.ಮೀ. ಉದ್ದದ ರಸ್ತೆಯು ಸೊಲ್ಲಾಪುರ ಮತ್ತು ವಿಜಯಪುರ ನಗರಗಳನ್ನು ಸಂಪರ್ಕಿಸುವ ರಾಷ್ಟ್ರೀಯ ಹೆದ್ದಾರಿಯಾಗಿದೆ.
* ರಾಷ್ಟ್ರೀಯ ಹೆದ್ದಾರಿ ಕಾಮಗಾರಿಯು ದ್ವಿಪಥದಿಂದ ಚತುಷ್ಪಥಕ್ಕೆ ಮೇಲ್ದರ್ಜೆಗೇರಿಸುವ ಕಾಮಗಾರಿ ಕೇಂದ್ರ ಸರಕಾರ 1,540 ಕೋಟಿ ರೂ. ವೆಚ್ಚ ಮಾಡುತ್ತಿದೆ.
* ರಾಷ್ಟ್ರೀಯ ಹೆದ್ದಾರಿಯ ಡಾಂಬರೀಕರಣ ಕಾಮಗಾರಿಗೆ 500 ಜನ ಕಾರ್ಮಿಕರ ನಿರಂತರ ಪರಿಶ್ರಮದಿಂದ ಈ ಕಾಮಗಾರಿ ಸಾಧ್ಯವಾಗಿದೆ, ಮತ್ತು ಲಿಮ್ಕಾ ಪುಸ್ತಕದಲ್ಲಿ ದಾಖಲೆಯನ್ನು ಬರೆದಿದೆ.
* ಈ ಹಿಂದೆ ದೇಶದಲ್ಲಿ ನಿತ್ಯ ಹೆದ್ದಾರಿಯ 3 ಕಿ.ಮೀ. ಕಾಮಗಾರಿ ನಡೆಯುತ್ತಿತ್ತು ಇದೀಗ ಕನಿಷ್ಠ 100 ಕಿ.ಮೀ. ನಿರ್ಮಾಣವಾಗುತ್ತಿದೆ ಎಂದು ತಿಳಿಸಲಾಗಿದೆ.

## ಚಿನ್ನದ ಓಟಗಾರ್ತಿ ಹಿಮದಾಸ್ 'DSP' ಆಗಿ ಅಧಿಕಾರ ಸ್ವೀಕಾರ



* ಚಿನ್ನದ ಓಟಗಾರ್ತಿ ಎಂದು ಪ್ರಸಿದ್ಧಿ ಪಡೆದಿರುವ ಹಿಮದಾಸ್, ಸದ್ಯ ಅಸ್ಸಾಂ ರಾಜ್ಯದ ಪೊಲೀಸ್ ಇಲಾಖೆಯಲ್ಲಿ (DSP)ಡೆಪ್ಯೂಟಿ ಸೂಪರಿಂಟೆಂಡೆಂಟ್ ಆಫ್ ಪೊಲೀಸ್ ಆಗಿ ಅಧಿಕಾರ ಸ್ವೀಕರಿಸಿದ್ದಾರೆ.
* ಅಸ್ಸಾಂ ಮುಖ್ಯಮಂತ್ರಿ ಸರ್ಬಾನಂದ್ ಸೊನ್ವಾಲ್ ಅವರ ಸರ್ಕಾರ ಅಸ್ಸಾಂ ರಾಜ್ಯದ ಪೊಲೀಸ್ ಇಲಾಖೆಯಲ್ಲಿನ ಉತ್ತಮ ಸ್ಥಾನ ನೀಡಿ ಗೌರವಿಸಿದೆ.
* ಕ್ರೀಡೆ ವಿಭಾಗಗಳಲ್ಲಿ ಸಾಧನೆಯನ್ನು ಮಾಡಿದವರಿಗೆ ಕ್ಲಾಸ್ 1 ಹಾಗೂ ಕ್ಲಾಸ್ 2 ಮಟ್ಟದ ಹುದ್ದೆಗೆ ನೇಮಕ ಮಾಡಿಕೊಳ್ಳಲು ಅಸ್ಸಾಂ ಕೌನ್ಸಿಲ್ ನಲ್ಲಿ ನಿರ್ಧರಿಸಲಾಗಿತ್ತು.

## ಯೂಸುಫ್ ಪಠಾಣ್ ಕ್ರಿಕೆಟ್‌ಗೆ ವಿದಾಯ




* ಭಾರತ ಕ್ರಿಕೆಟ್ ತಂಡದ ಆಲ್ರೌಂಡರ್ ಯೂಸುಫ್ ಪಠಾಣ್ ಎಲ್ಲ ಮಾದರಿಯ ಕ್ರಿಕೆಟ್‌ಗೆ ಅಧಿಕೃತವಾಗಿ ನಿವೃತ್ತಿ ಹೇಳುತ್ತಿದ್ದೇನೆ ಎಂದು ಟ್ವಿಟರ್‌ನ ಮೂಲಕ ಬಹಿರಂಗಪಡಿಸಿದ್ದಾರೆ.
* ಯೂಸುಫ್ ಪಠಾಣ್ ರವರು ಎರಡು ವಿಶ್ವಕಪ್'ಗಳ ವಿಜೇತ, 2007ರಲ್ಲಿ ಟಿ20 ಹಾಗೂ 2011ರ ಏಕದಿನ ವಿಶ್ವಕಪ್ ವಿಜೇತ ಭಾರತ ತಂಡದಲ್ಲಿ ಆಟವಾಡಿದ್ದರು.
* ಯೂಸುಫ್ ಪಠಾಣ್ ರಾಷ್ಟ್ರೀಯ ತಂಡದ ಪರ 57 ಏಕದಿನ ಪಂದ್ಯಗಳಿಂದ ಎರಡು ಶತಕ, 3 ಅರ್ಧಶತಕ ಸೇರಿದಂತೆ 810 ರನ್ ಗಳಿಸಿದ್ದರು.
* 22 ಟಿ20 ಪಂದ್ಯಗಳಿಂದ 236 ರನ್ ಕಲೆಹಾಕಿದ್ದರು.
* ಚೊಚ್ಚಲ ಐಪಿಎಲ್ 2008ರ ವಿಜೇತ ರಾಜಸ್ಥಾನ ರಾಯಲ್ಸ್ ತಂಡದಲ್ಲಿ ಆಟವಾಡಿದ್ದರು, ಮತ್ತು 2012, 2014ರ ವಿಜೇತ ಕೆಕೆಆರ್ ತಂಡದಲ್ಲಿ ಕೂಡ ಆಟವಾಡಿದ್ದರು.

## ಕನ್ನಡಿಗ ವಿನಯ್‌ಕುಮಾರ್ ಕ್ರಿಕೆಟ್‌ಗೆ ನಿವೃತ್ತಿ ಘೋಷಣೆ




* ಭಾರತ ತಂಡದ ಮಾಜಿ ವೇಗದ ಬೌಲರ್ ಮತ್ತು ಕರ್ನಾಟಕ ತಂಡದ ಮಾಜಿ ನಾಯಕ ಆರ್.ವಿನಯ್‌ಕುಮಾರ್ ಇದೀಗ ಎಲ್ಲ ಮಾದರಿಯ ಕ್ರಿಕೆಟ್‌ಗೆ ವಿದಾಯ ಹೇಳಿದ್ದಾರೆ.
* ಆರ್.ವಿನಯ್‌ಕುಮಾರ್ ಅವರು ದಾವಣಗೆರೆ ಎಕ್ಸ್‌ಪ್ರೆಸ್ ಎಂಬ ಖ್ಯಾತಿ ಪಡೆದಿದ್ದರು ಕಳೆದ 25 ವರ್ಷಗಳ ಕ್ರಿಕೆಟ್ ಪಯಣಕ್ಕೆ ಟ್ವಿಟರ್ ಮೂಲಕ ವಿದಾಯ ತಿಳಿಸಿದ್ದಾರೆ. ವಿನಯ ಕುಮಾರ್ ರವರು ಕ್ರಿಕೆಟ್ ಪಯಣ:
* ಕರ್ನಾಟಕ ತಂಡವು ವಿನಯ್ ಕುಮಾರ್ ನಾಯಕತ್ವದಲ್ಲಿ 2013 14 ಹಾಗೂ 2014 15ನೇ ಸಾಲಿನಲ್ಲಿ ಹ್ಯಾಟ್ರಿಕ್ ಪ್ರಶಸ್ತಿ ಜಯಿಸಿತ್ತು.
* ವಿನಯ್ ಕುಮಾರ್ ನಾಯಕತ್ವದಲ್ಲಿ ಕರ್ನಾಟಕ ತಂಡವು ಪ್ರತಿಷ್ಠಿತ ರಣಜಿ ಟ್ರೋಫಿ, ವಿಜಯ್ ಹಜಾರೆ ಟ್ರೋಫಿ, ಇರಾನಿ ಕಪ್ ಜಯಿಸಿದ್ದರು, ಇವರು ದೇಶೀಯ ಕ್ರಿಕೆಟ್‌ನಲ್ಲಿ ಈ ಸಾಧನೆ ಮಾಡಿದ ಮೊದಲ ನಾಯಕ ಎನಿಸಿಕೊಂಡಿದ್ದಾರೆ.
* 100ನೇ ರಣಜಿ ಪಂದ್ಯವನ್ನು ಕರ್ನಾಟಕ ತಂಡದ ಪರ ಆಟವಾಡಿದ್ದರು.
* ಕ್ರಿಕೆಟರ್ ವಿನಯ್ ಕುಮಾರ್ ರವರು 2019ರಲ್ಲಿ ಪುದುಚೇರಿಗೆ ವಲಸೆ ಹೋಗಿದ್ದರು.
* ಕರ್ನಾಟಕ ಕ್ರಿಕೆಟ್ ಇತಿಹಾಸದಲ್ಲಿ ಅತ್ಯಂತ ಯಶಸ್ವಿ ನಾಯಕ ಎನಿಸಿಕೊಂಡಿದ್ದರು.
* ರಾಷ್ಟ್ರೀಯ ತಂಡದ ಪರ ಏಕೈಕ ಟೆಸ್ಟ್ ಆಡಿ , 31 ಏಕದಿನ ಹಾಗೂ 9 ಟಿ20 ಪಂದ್ಯಗಳಲ್ಲಿ ಆಟವಾಡಿದ್ದಾರೆ, ಮತ್ತು ಐಪಿಎಲ್(IPL) ಹಾಗೂ KPL (ಕರ್ನಾಟಕ ಪ್ರೀಮಿಯರ್ ಲೀಗ್ )ನಲ್ಲಿ ಕೂಡ ಆಟವಾಡಿದ್ದಾರೆ.

## 16 ನೇ FICCI ಉನ್ನತ ಶಿಕ್ಷಣ ಶೃಂಗಸಭೆ




* ಕೇಂದ್ರ ಶಿಕ್ಷಣ ಸಚಿವ ಶ್ರೀ ರಮೇಶ್ ಪೋಖ್ರಿಯಾಲ್ ಅವರು 2021ರ ಫೆಬ್ರುವರಿ 25 ರಂದು ನಡೆದ 16 ನೇ FICCI ಉನ್ನತ ಶಿಕ್ಷಣ ಶೃಂಗಸಭೆಯನ್ನು ಉದ್ದೇಶಿಸಿ ಮಾತನಾಡಿದರು.
* 2021 ರ ಫೆಬ್ರುವರಿ 25 ರಿಂದ 2021 ರ ಫೆಬ್ರುವರಿ 27 ರವರೆಗೆ ನವದೆಹಲಿಯಲ್ಲಿ ಈ ಶೃಂಗಸಭೆ ನಡೆದಿದೆ, ಇದು ಭಾರತವನ್ನು ಜ್ಞಾನವನ್ನಾಗಿ ಮಾಡುತ್ತದೆ.
* ಈ ನೀತಿಯು ಉದ್ಯಮಶೀಲತೆ, ನಾವೀನ್ಯತೆ ಮತ್ತು ಕೌಶಲ್ಯ ಅಭಿವೃದ್ಧಿಯ ಮೇಲೆ ಕೇಂದ್ರೀಕರಿಸುವುದರಿಂದ ವಿದ್ಯಾರ್ಥಿಗಳಿಗೆ ಆಯಾ ಕ್ಷೇತ್ರಗಳಲ್ಲಿ ಹೆಚ್ಚು ಸೃಜನಶೀಲರಾಗಿರಲು ಅವಕಾಶ ನೀಡುತ್ತದೆ.
* ಕೇಂದ್ರವು ಹೆಚ್ಚಿನ ಖಾಸಗಿ ವಲಯದ ಭಾಗವಹಿಸುವಿಕೆಯನ್ನು ಹುಡುಕುತ್ತಿದೆ ಮತ್ತು ಇನ್ಸ್ಟಿಟ್ಯೂಟ್ ಆಫ್ ಎಮಿನೆನ್ಸ್ ಸಂಖ್ಯೆಯನ್ನು 20 ರಿಂದ 50 ಕ್ಕೆ ಹೆಚ್ಚಿಸಲು ಯೋಜಿಸಿದೆ ಎಂದು ಸಚಿವರು ಹೇಳಿದರು.
* ಫೆಡರೇಶನ್ ಆಫ್ ಇಂಡಿಯನ್ ಚೇಂಬರ್ಸ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರಿ (FICCI) ಅನ್ನು 1927 ರಲ್ಲಿ ಸ್ಥಾಪಿಸಲಾಯಿತು.
* FICCI ಭಾರತದ ಅತಿದೊಡ್ಡ ಮತ್ತು ಅತ್ಯಂತ ಹಳೆಯ ವ್ಯಾಪಾರ ಸಂಸ್ಥೆಯಾಗಿದೆ, ಮತ್ತು ಸರ್ಕಾರೇತರ, ಲಾಭರಹಿತ ಸಂಸ್ಥೆಯಾಗಿದ್ದು, ಇದು ಭಾರತದಲ್ಲಿ ವ್ಯವಹಾರ ಮತ್ತು ಉದ್ಯಮದ ಧ್ವನಿಯಾಗಿ ಕಾರ್ಯನಿರ್ವಹಿಸುತ್ತದೆ.
* ಈ ಸಂಸ್ಥೆ ಭಾರತೀಯ ಖಾಸಗಿ ಮತ್ತು ಸಾರ್ವಜನಿಕ ಕಾರ್ಪೊರೇಟ್ ಕ್ಷೇತ್ರಗಳ ಸದಸ್ಯರಾಗಿ ಕಾರ್ಯನಿರ್ವಹಿಸುತ್ತದೆ.


KPSC VAANI
KPSC Vaani
Karnataka's no 1 compitative website
ಕರ್ನಾಟಕದ no 1 ಸ್ಪರ್ಧಾತ್ಮಕ ಜಾಲತಾಣ
ಸೇವೆಗಳು:
• ಪ್ರತಿದಿನದ ಉದ್ಯೋಗ ಮಾಹಿತಿ
• ಪ್ರತಿದಿನದ ಪ್ರಚಲಿತ ಘಟನೆಗಳು
• ಸ್ಟಡಿ ಮೆಟೀರಿಯಲ್ಸ್
• ಹಳೆಯ ಪ್ರಶ್ನೆಪತ್ರಿಕೆಗಳ ಸಂಗ್ರಹ
• ಕಟ್ ಆಫ್ ಅಂಕಗಳ ಮಾಹಿತಿ
• ಸ್ಪರ್ಧಾತ್ಮಕ ಲೇಖನಗಳು
• ವೀಡಿಯೊ ತರಗತಿಗಳು
• ಹಾಗೂ ಇನ್ನು ಹತ್ತು ಹಲವು ಸ್ಪರ್ಧಾತ್ಮಕ ಮಾಹಿತಿಗಾಗಿ ಕೂಡಲೇ ಬೇಟಿ ನೀಡಿ
www.kpscvaani.com
Google Play Store ನಿಂದ KPSC Vaani app ಕೂಡಾ ಡೌನ್ಲೋಡ್ ಮಾಡಿಕೊಳ್ಳಿ
Scan QR Code to download kpscvaani App